<td>04</td>
<td>ಸಾಮಾಗ್ರಿ ಖರೀದಿಯಲ್ಲಿ ಕೆಟಿಪಿಪಿ ನಿಯಮ ಪಾಲಿಸದಿರುವುದು:
ಕರ್ನಾಟಕ ಪಾರದರ್ಶಕ ನಿಯಮಗಳು 2000ರ ಅಧ್ಯಾಯ 2ರ ನಿಯಮದಂತೆ ರೂ.1.00 ಲಕ್ಷ ಮೌಲ್ಯ ಮೀರಿರುವ ಸಾಮಾಗ್ರಿ ಖರೀದಿಯಲ್ಲಿ ಪಾರದರ್ಶಕ ನಿಯಮಗಳ ರೀತ್ಯಾ ಟೆಂಡರ್ ಪದ್ಧತಿಯನ್ನು ಅನುಸರಿಸ ಬೇಕಾಗಿರುತ್ತದೆ.ಆದರೆ, ವಿಶ್ವವಿದ್ಯಾಲಯವು ಈ ಕೆಳಕಂಡ ಪ್ರಕರಣಗಳಲ್ಲಿ ಒಂದೇ ಸಂಸ್ಥೆಯ ಮೂಲಕ 2 ರಿಂದ 7 ದಿನಗಳ ಅಂತರದಲ್ಲಿ ರೂ.1.00 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಸಾಮಾಗ್ರಿ ಖರೀದಿಸಿದ್ದು, ಕೆ.ಟಿ.ಪಿ.ಪಿ.ನಿಯಮ ಉಲ್ಲಂಘನೆಯಾಗಿರುತ್ತದೆ. ವಿವರ ಕೆಳಕಂಡಂತಿದೆ:
<table>
<tr><th>ಕ್ರಮ ಸಂಖ್ಯೆ</th><th>ಚೆಕ್ ಸಂಖ್ಯೆ ಮತ್ತು ದಿನಾಂಕ</th><th>ಮೊತ್ತ ರೂ.ಗಳಲ್ಲಿ</th><th>ಸರಬರಾಜುದಾರರ ವಿವರ</th><th>ಸಾಮಾಗ್ರಿ ವಿವರ</th></tr>
<tr><td>1</td><td>97855/23–3–13</td><td>25637</td><td rowspan="4">ವಿಶಾಲ್ ಎಂಟರ್ ಪ್ರೈಸಸ್</td><td rowspan="4">ಅಲ್ಯೂಮಿನಿಯಂ ಪಾರ್ಟಿಷನ್</td></tr>
<tr><td>2</td><td>978654/23–3–13</td><td>90711</td></tr>
<tr><td>3</td><td>954021/23–3–13</td><td>55530</td></tr>
<tr><td>4</td><td>977500/12.1.2013</td><td>96840</td></tr>
<tr><td></td><td>ಒಟ್ಟು</td><td>268718</td><td></td><td></td></tr>
<tr><td>5</td><td>977486/22–12–12</td><td>96200</td><td rowspan="2">ಜಾಯೆಲ್ ಇಂಟರ್ ನ್ಯಾಷನಲ್ಸ್ ಶಿವಮೊಗ್ಗ</td><td rowspan="2">ಪೀಠೋಪಕರಣ,</td></tr>
<tr><td>6</td><td>977491/2–1–13</td><td>98450</td></tr>
<tr><td></td><td>ಒಟ್ಟು</td><td>194650</td><td></td><td></td></tr>
<tr><td>7</td><td>954024/23–3–13</td><td>82680</td><td rowspan="2">ಕೃಪಾಲ್ ಕಂಪ್ಯೂಟರ್ಸ್</td><td rowspan="2">ಕಂಪ್ಯೂಟರ್ಸ ಮತು ಲ್ಯಾಪ್ ಟಾಪ್</td></tr>
<tr><td>8</td><td>773511/31.3.2013</td><td>67080</td></tr>
</table></td>
<td>ವಿಶ್ವವಿದ್ಯಾಲಯದ ಪ್ರಾರಂಭದ ಹಂತದಲ್ಲಿ ವಿಶೇಷಾಧಿಕಾರಿಗಳು ಮತ್ತು ಅವರ ಕಛೇರಿಗೆ ಛೇಂಬರ್‌ಗಳ ಸ್ಥಾಪನೆ ಮಾಡುವುದು ಹಾಗೂ ಅಗತ್ಯ ಪೀಠೋಪಕರಣ ಖರೀದಿ ಅವಶ್ಯಕವಿತ್ತು. ಅದರಂತೆ ಅವರ ಬೇಡಿಕೆ ಅಗತ್ಯಕ್ಕನುಗುಣವಾಗಿ ಬೇರೆ ಬೇರೆ ದಿನಾಂಕಗಳಲ್ಲಿ, ಪ್ರತ್ಯೇಕವಾಗಿ ಖರೀದಿಗಳನ್ನು ಮತ್ತು ಅಲ್ಯುಮಿನಿಯಂ ಪಾರ್ಟಿಷನ್ ಮಾಡಲಾಗಿದೆ. ಸದರಿ ಕ್ರಮವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:PWD513/FC-111/2001 dt.29.10.2001 ಕಂಡಿಕೆ 6(3) ರನ್ವಯ ಕ್ರಮ ಜರುಗಿಸಲಾಗಿದೆ. ಕಾಮಗಾರಿಗಳನ್ನು ನಿರ್ವಹಿಸಿದ ಪ್ರಕಾರವಾಗಿ ಬಿಲ್ಲುಗಳು ಪಾವತಿಗೆ ಸ್ವೀಕೃತಿಯಾಗಿವೆ. ಆದ್ದರಿಂದ ಈ ರೀತಿ ಮಾಡಲಾದ ಖರೀದಿಗಳು ಮತ್ತು ಅಲ್ಯುಮಿನಿಯಂ ಪಾರ್ಟಿಷನ್ ಕಾಮಗಾರಿಗಳು, ಒಂದು ಲಕ್ಷದೊಳಗೆ ಇದ್ದು, ನಿಯಮಾನುಸಾರ ದರಪಟ್ಟಿ ಆಧರಿಸಿ, ಕ್ರಮ ವಹಿಸಲಾಗಿದೆ. ಪ್ರಸಕ್ತ ಕೆ.ಟಿ.ಪಿ.ಪಿ ನಿಯಮವನ್ನು ಅನುಸರಿಸುತ್ತಿದ್ದು, ಈ ಆಕ್ಷೇಪಣೆಯ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.</td>
</tr>
</table>

			ಒಟ್ಟು	149760		
			ಒಟ್ಟು ಮೊತ್ತ	613128		

ಈ ಬಗ್ಗೆ ಆಡಿಟ್ ವಿಚಾರಣಾ ಸಂಖ್ಯೆ 9/2011–12,2012–13, 2013–14 ರಲ್ಲಿ ಸ್ಪಷ್ಟೀಕರಣ ಕೋರಲಾಗಿದ್ದು, ವಿಶ್ವವಿದ್ಯಾಲಯವು ಸ್ಪಷ್ಟೀಕರಣ ನೀಡಿದೆ. ಆದರಲ್ಲಿ ವಿಶ್ವವಿದ್ಯಾಲಯದ ಪ್ರಾರಂಭದಲ್ಲಿ ತುರ್ತಾಗಿ ಅವಶ್ಯಕತೆ ಇದ್ದ ಕಾರಣ, ಬೇರೆ ಬೇರೆ ಸಾಮಾಗ್ರಿಗಳನ್ನು ಬೇರೆ ಬೇರೆ ಸಂಸ್ಥೆಗಳಿಂದ ದರಪಟ್ಟಿ ಪಡೆದು ದರಗಳನ್ನು ಪರಿಶೀಲಿಸಿ ಸಾಮಗ್ರಿಗಳನ್ನು ಖರೀದಿಸಿದೆ ಎಂದು ತಿಳಿಸುತ್ತಾ, ಟೆಂಡರ್ ಕರೆಯಲು ಸೂಕ್ತ ವ್ಯವಸ್ಥೆ ಇಲ್ಲದಿದ್ದರಿಂದ ಈ ರೀತಿ ಮಾಡಲಾಗಿದೆ ಎಂದು ಸ್ಪಷ್ಟೀಕರಣ ನೀಡಿರುತ್ತಾರೆ.ಆದರೆ, ಈ ವಿವರಣೆಯು ಸಮರ್ಥನೀಯವಲ್ಲ. ಮತ್ತು ಬೇರೆ ಬೇರೆ ಸಂಸ್ಥೆಗಳಿಂದ ಖರೀದಿಯಾಗಿರುವುದಿಲ್ಲ.ಮತ್ತು ಸಾಮಗ್ರಿಯು ಒಂದೇ ಆಗಿರುತ್ತದೆ.ಆದ್ದರಿಂದ ರೂ.6,13,128/– ಆಕ್ಷೇಪಣೆಯಲ್ಲಿಡಲಾಗಿದೆ.

03	05	**ಆರ್ಥಿಕ ನಿಯಮಗಳಿಗೆ ವಿರುದ್ಧವಾಗಿಸ್ವಂತ ಚೆಕ್ ಮೂಲಕ ಅನುದಾನ ಡ್ರಾ ಮಾಡಿರುವುದು** ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 72ರಲ್ಲಿ ನಿರ್ದೇಶಿಸಿರುವಂತೆ ರೂ 1000/– ಮೇಲ್ಪಟ್ಟ ಪಾವತಿಗಳನ್ನು ಅಕೌಂಟ್ ಪೇಯಿ ಚೆಕ್ ಮೂಲಕವೇ ಪಾವತಿಸಬೇಕಾಗಿರುತ್ತದೆ.ಆದರೆ, ವಿಶ್ವವಿದ್ಯಾಲಯದ ನಗದು ಪುಸ್ತಕ ಪರಿಶೀಲಿಸಲಾಗಿ, ಈ ಕೆಳಕಂಡ ಧನಾದೇಶಗಳನ್ನು ಸೆಲ್ಫ್ ಚೆಕ್ ಮೂಲಕ ಡ್ರಾ ಮಾಡಿರುವುದು ಕಂಡು ಬರುತ್ತದೆ. ವಿವರ ಕೆಳಗೆ ಕಾಣಿಸಿದೆ. ಈ ಬಗ್ಗೆ ಆಡಿಟ್ ವಿಚಾರಣಾ ಸಂಖ್ಯೆ 14/2016–17 ರಲ್ಲಿ ವಿವರಣೆ ಕೋರಲಾಗಿದ್ದು, ಸಂಸ್ಥೆಯವರು ವಿವರಣೆ ನೀಡಲಾಗಿದ್ದು, ವಿಶ್ವವಿದ್ಯಾಲಯದ ಪ್ರಾರಂಭಿಕ ಹಂತದಲ್ಲಿ, ಸಿಬ್ಬಂದಿಯ ಕೊರತೆ ಮತ್ತು ಕಚೇರಿ ನಿಮಿತ್ತ ಪ್ರವಾಸಗಳನ್ನು ಅನಿರೀಕ್ಷಿತವಾಗಿ ಮಾಡಬೇಕಾಗುತ್ತಿದ್ದರಿಂದ ಹಾಗೂ ಇಂಧನ ವೆಚ್ಚಗಳನ್ನು	ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯವರು, ಕಾರ್ಯನಿಮಿತ್ತವಾಗಿ ಬೆಂಗಳೂರು ಮತ್ತು ಇತರೆ ಕೇಂದ್ರಗಳಿಗೆ ಪ್ರಯಾಣಕ್ಕೆ ಸಂಬಂಧಿಸಿದಂತೆ, ಇಂಧನ ವೆಚ್ಚವನ್ನು ನಗದಾಗಿಯೇ ಪಾವತಿಸಬೇಕಾಗಿರುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ ಇಂಧನ ಹಾಗೂ ಸಾಂಧರ್ಭಿಕ ಇತರೆ ಅಗತ್ಯ ವೆಚ್ಚಗಳಿಗೆ ಕೇಂದ್ರ ಸ್ಥಳದ ಹೊರಗಡೆ ಮಾಡಲಾದ ಖರೀದಿಗೆ ಚೆಕ್ ಮುಖಾಂತರ ಪಾವತಿಸುವುದು ಕಷ್ಟವಾಗುತ್ತದೆ. ಇಂತಹ ವೆಚ್ಚಗಳನ್ನು ನಗದು ರೂಪದಲ್ಲಿ ಅನಿವಾರ್ಯವಾಗಿ ಮಾಡಲೇ ಬೇಕಾಗಿದ್ದರಿಂದ ಸ್ವಂತ ಚೆಕ್ಕುಗಳ ಮೂಲಕ ಹಣ ಸೆಳೆದು ಆಯಾಯ ಮಾಹೆಯಲ್ಲಿ ಪಾವತಿಸಿ, ನಗದು ಪುಸ್ತಕದಲ್ಲಿ ವಿವರಗಳನ್ನು ದಾಖಲಿಸಲಾಗಿದೆ. ವಿಶ್ವವಿದ್ಯಾಲಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೊಂಡು ಅನಿವಾರ್ಯವಾಗಿ ವಿಶ್ವವಿದ್ಯಾಲಯ ಪ್ರಾರಂಭವಾದ ಆ ಸಮಯದಲ್ಲಿ ಮಾತ್ರ ಸ್ವಂತ ಚೆಕ್ ಅನ್ನು ಡ್ರಾ ಮಾಡಿ ನಗದನ್ನು ಪಾವತಿಸಲಾಗಿದೆ. ಇದರಲ್ಲಿ ನಿಯಮ ಪಾಲನೆಯಲ್ಲಿ ವ್ಯತ್ಯಾಸ ಆಗಿದ್ದು, ಆರ್ಥಿಕ ನಷ್ಟ ಆಗಿರುವುದಿಲ್ಲ. ಪ್ರಸಕ್ತ ಸ್ವಂತ ಚೆಕ್ಕು ಮೂಲಕ ಹಣ ಸೆಳೆಯುವ ಕ್ರಮವನ್ನು ಕೈಬಿಡಲಾಗಿದೆ. ಆದ್ದರಿಂದ ಈ ಪ್ಯಾರಾ ಕೈಬಿಡಲು ಕೋರಲಾಗಿದೆ.

ಚೆಕ್ ಸಂಖ್ಯೆ / ದಿನಾಂಕ	ಮೊತ್ತ (ರೂಪಾಯಿಗಳಲ್ಲಿ)
964258/5.5.2012	23720
964263/21.6.2012	90000
964269/21.7.2012	60000
964786/15.9.2012	20000
978051/30.1.2013	90000
978055/22.1.2013	25000
978068/12.2.2013	35838
978658/21.3.2013	50000
978669/28.3.2013	20000
ಒಟ್ಟು	**414558**

ಮಾಡಬೇಕಾಗಿದ್ದುದರಿಂದ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.ಈ ವಿವರಣೆಯು ಸಮರ್ಥನೀಯವಲ್ಲ. ಇದು ಆರ್ಥಿಕ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುವುದರಿಂದ ರೂ. 4,14,558/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

03 **06**

ವಾಹನಗಳ ಲಾಗ್ ಪುಸ್ತಕಗಳ ಪರಿಶೀಲನೆ:

2012–13ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಮೂರು ವಾಹನಗಳನ್ನು ಹೊಂದಿದ್ದು, ವಿವರ ಕೆಳಗೆ ಕಾಣಿಸಿದೆ.

ಕ್ರಮ ಸಂಖ್ಯೆ	ವಾಹನ	ವಾಹನ ರಿಜಿಸ್ಟರ್ ಸಂಖ್ಯೆ
1	ಇನ್ನೋವಾ ಕಾರ್	ಕೆಎ 02 ಎಂಜಿ 3865
2	ಟಾಟಾ ಸುಮೋ	ಕೆಎ14 ಎ3527

ವಾಹನಗಳ ಲಾಗ್ ಪುಸ್ತಕ ಪರಿಶೀಲಿಸಲಾಗಿ, ಈ ಕೆಳಗೆ ಕಾಣಿಸಿರುವ ನ್ಯೂನತೆಗಳು ಕಂಡುಬರುತ್ತದೆ.

1. ನಗದು ಪುಸ್ತಕದಲ್ಲಿ ದಾಖಲು ಮಾಡಿರುವ ಇಂಧನ ವೆಚ್ಚಗಳು ಪೂರ್ಣವಾಗಿ ಲಾಗ್ ಪುಸ್ತಕದಲ್ಲಿ ನಮೂದಾಗಿರುವುದಿಲ್ಲ. ವಿವರ ಕೆಳಗೆ ಕಾಣಿಸಿದೆ.

ಕ್ರಮ ಸಂಖ್ಯೆ	ಬಿಲ್ ಸಂಖ್ಯೆ ಮತ್ತು ದಿನಾಂಕ	ಪಾವತಿ ವಿವರ	ಮೊತ್ತ	ವಾಹನ ಸಂಖ್ಯೆ
1	87740/23–1–13	978055/12–2–13	1500	ಕೆಎ 02 ಎಂಜಿ 3865
2	154000/24–1–13	978055/12–2–13	1563	
3	96168/12–2–13	978055/12–2–13	1187	
4	85281/25–9–12 83085	055786/25–9–12	1300	
5	38065/1–2–13	ಇಂಪ್ರೆಸ್ಟ/1–2–13	3149	ಕೆಎ 14ಎ9527
	ಒಟ್ಟು		8699	

ಈಬಗ್ಗೆ ಆಡಿಟ್ ವಿಚಾರಣಾ ಸಂಖ್ಯೆ:26/12–13, 13–14ರಲ್ಲಿ ವಿವರಣೆ

6.1 ನಗದು ಪುಸ್ತಕದಲ್ಲಿ ದಾಖಲು ಮಾಡಿರುವ ಇಂಧನ ವೆಚ್ಚಗಳ ವಿವರಗಳು

ಲೆಕ್ಕ ತನಿಖಾ ವರದಿಯಲ್ಲಿ ತಿಳಿಸಿರುವಂತೆ ಕ್ರ.ಸಂ.1,2,4ಮತ್ತು5ರ ಬಿಲ್ಲುಗಳು ವಾಹನ ಸಂಖ್ಯೆ ಕೆಎ 02 ಎಂಜಿ 3865 ಕ್ಕೆ ಸಂಬಂಧಿಸಿರುವುದಿಲ್ಲ. ಬದಲಾಗಿ ವಾಹನ ಸಂಖ್ಯೆ KA14 7957ಕ್ಕೆ ಸಂಬಂಧಿಸಿದ್ದು, ಆ ಲಾಗ್ ಪುಸ್ತಕದಲ್ಲಿ ಪುಟ ಸಂಖ್ಯೆ 45,52 ಮತ್ತು 53 ರಲ್ಲಿ ದಾಖಲಿಸಲಾಗಿದೆ. ಕ್ರಮಸಂಖ್ಯೆ 03 ಕ್ಕೆ ಸಂಬಂಧಿಸಿದಂತೆ ಬಿಲ್‌ನಂ.96168 ರಲ್ಲಿ ಖರೀದಿಸಲಾದ 19.72 ಲೀಟರ್ ಹೆಚ್.ಎಸ್.ಡಿ. ಯನ್ನು ಕೆ.ಎ.02 ಎಂಜಿ3865 ವಾಹನದ ಲಾಗ್ ಪುಸ್ತಕ ಪುಟ ಸಂಖ್ಯೆ 55 ರಲ್ಲಿ ದಾಖಲಿಸಲಾಗಿದೆ. ಆದ್ದರಿಂದ ಈ ವಸೂಲಾತಿಯ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

ಕೋರಲಾಗಿದ್ದರೂ, ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲವಾದ ಕಾರಣ ರೂ.8,699/– ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಗೆ ಸೂಚಿಸಿದೆ.

2. ಲಾಗ್ ಪುಸ್ತಕ ಪರಿಶೀಲಿಸಲಾಗಿ, ವಾಹನದ ಉಪಯೋಗಕ್ಕೆ ಖರೀದಿಸಲಾದ ಟೈರ್ಸ್, ಟ್ಯೂಬ್ಸ್ ಮತ್ತು ಡಿಸ್ಕ್ ಗಳನ್ನು ಲಾಗ್ ಪುಸ್ತಕದಲ್ಲಿ ದಾಖಲಿಸದಿರುವುದು ಕಂಡುಬಂದಿರುತ್ತದೆ. ವಿವರ ಕೆಳಗೆ ಕಾಣಿಸಿದೆ.

ಕ್ರಮ ಸಂಖ್ಯೆ	ಬಿಲ್ ಸಂಖ್ಯೆ ಮತ್ತು ದಿನಾಂಕ	ಪಾವತಿ ವಿವರ	ಮೊತ್ತ	ವಾಹನ ಸಂಖ್ಯೆ
1	ಬಿಎಲ್ ಒ 1ಎ: 12:2667/ 31–3–13	ಇಂಪ್ರೆಸ್ಟ್ 31–3–13	12618	ಕೆಎ 02 ಎಂಜಿ 3865
2	6172/2–3–13	978068/4–3–13	31258	
	ಒಟ್ಟು		43876	

ಈ ಬಗ್ಗೆ ಆಡಿಟ್ ವಿಚಾರಣಾ ಸಂಖ್ಯೆ 26/12–13, 13–14 ರಲ್ಲಿ ವಿವರಣೆ ಕೋರಲಾಗಿದ್ದರೂ, ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ. ಅಲ್ಲದೇ ದಾಸ್ತಾನು ಪುಸ್ತಕಕ್ಕೂ ನಮೂದಾಗಿರುವುದಿಲ್ಲ. ಕಾರಣ, ರೂ.43,876/–ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಗೆ ಸೂಚಿಸಿದೆ.

ಲಾಗ್ ಪುಸ್ತಕ ಪರಿಶೀಲಿಸಲಾಗಿ, ವಾಸ್ತವವಾಗಿ ಇರುವ ದೂರಕ್ಕೂ ಹಾಗೂ ಲಾಗ್ ಪುಸ್ತಕದಲ್ಲಿ ನಮೂದಿಸಿರುವ ದೂರಕ್ಕೂ ವ್ಯತ್ಯಾಸಗಳು ಕಂಡುಬಂದಿರುತ್ತದೆ. ಉದಾಹರಣೆಗೆ ದಿನಾಂಕ 17–5–12ರಲ್ಲಿ ಬೆಂಗಳೂರಿನಿಂದ ಶಿವಮೊಗ್ಗ ಕ್ಯಾಂಪಸ್‌ಗೆ 339 ಕಿ.ಮೀ ಎಂದು ಕಾಣಿಸಲಾಗಿದೆ. ಹಾಗೆಯೇ ದಿನಾಂಕ 12–1–13ರಂದು ಸದರಿ ವಾಹನವು ಬೆಂಗಳೂರಿನಿಂದ ಶಿವಮೊಗ್ಗ ಮತ್ತು ಶಿವಮೊಗ್ಗದಿಂದ ಬೆಳಾಗಾಂ ಮತ್ತು ಬೆಳಗಾಂ ನಿಂದ ಶಿವಮೊಗ್ಗಕ್ಕೆ ವಾಪಸ್ ಬಂದು ವಾಸ್ತವ್ಯ ಎಂದು 931 ಕಿಮೀ ದಾಖಲಿಸಿದೆ. ಇದು ವಾಸ್ತವಿಕತೆಗೆ ದೂರವಾಗಿರುತ್ತದೆ. ಇಂತಹ ಹಲವು ಪ್ರಕರಣಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಸಂಸ್ಥೆಯ ಮೇಲಾಧಿಕಾರಿಗಳು ಈ ಬಗ್ಗೆ ಸೂಕ್ತ ಗಮನ ಕೊಟ್ಟು ವಾಹನಗಳ ದುರಪಯೋಗವಾಗದಂತೆ ಎಚ್ಚರ ವಹಿಸಬೇಕಾಗಿರುತ್ತದೆ.

6.2.1 ಬಿಎಲ್ ಒ 1ಎ: 12:2667/ 31–3–13 ಇಂಪ್ರೆಸ್ಟ್ 31–3–13 ರೂ. 12,618/–

ಇಂಪ್ರೆಸ್ಟ್ ಮೊತ್ತದ ಬಗ್ಗೆ, ವಿಚಾರಣೆ ಪತ್ರಸಂಖ್ಯೆ 26 ರಲ್ಲಿ ನೀಡಿದ ವಿಷಯಕ್ಕೆ ಹೊಂದಾಣಿಕೆ ಆಗಿರುವುದಿಲ್ಲ. ನಿಖರವಾದ ಮಾಹಿತಿ ಏನೆಂಬುದು ಈ ವಿಷಯಕ್ಕೆ ತಾಳೆಯಾಗದಿರುವ ಕಾರಣ, ಈ ಐಟಂ ಕೈಬಿಡಲು ಕೋರಲಾಗಿದೆ.

6.2.2 6172/2–3–13 978068/4–3–13 ರೂ. 31,258/–

ವೋಚರ್‌ಗಳನ್ನು ಪರಿಶೀಲಿಸಲಾಗಿ ವಾಹನದ ಉಪಯೋಗಕ್ಕೆ ಮೆ॥ ಸನ್ ಲೀಲಾ ಟೈರ್ಸ್, ಹುಬ್ಬಳ್ಳಿ ಇವರಿಂದ 5 ಟೈರ್‌ಗಳನ್ನು ಖರೀದಿಸಿದ್ದು, ಇದನ್ನು ಡಿಬಿಆರ್ ಪುಸ್ತಕದ ಪುಟ ಸಂಖ್ಯೆ 11, ಐಟಂ ನಂ.57 ರಲ್ಲಿ ದಾಖಲಿಸಲಾಗಿದೆ ಹಾಗೂ ಇದರ ಸ್ವೀಕೃತಿ ಮತ್ತು ವಿತರಿಸಿದ ವಿವರಗಳನ್ನು Consumable Stock Ledger(TDS) ಪುಟ ಸಂಖ್ಯೆ 53 ರಲ್ಲಿ ದಾಖಲಿಸಲಾಗಿದೆ.

ಟೈರ್ ಟ್ಯೂಬ್‌ಗಳನ್ನು ವಾಹನಕ್ಕೆ ಅಳವಡಿಸಿ ಉಪಯೋಗಿಸಿರುವ ಹಿನ್ನೆಲೆಯಲ್ಲಿ ಹಾಗೂ ಸ್ಟಾಕ್ ಪುಸ್ತಕದಲ್ಲಿರುವ ಸ್ವೀಕೃತಿ ದಾಖಲೆಗಳನ್ನು ಪರಿಗಣಿಸಿ, ವಸೂಲಾತಿಗೆ ಸೂಚಿಸಲಾದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

ದಿನಾಂಕ:15.07.2012 ರಂದು ಬೆಂಗಳೂರಿನ ಕಛೇರಿಗಳಿಗೆ, ಮತ್ತು ಸ್ಥಳೀಯವಾಗಿ ಸಂಚರಿಸಿ ಶಿವಮೊಗ್ಗ ಕ್ಯಾಂಪಸ್ ತಲುಪಲು ಓಡಿರುವ ದೂರ 339 ಕಿ.ಮೀ ಆಗಿರುವ ಸಾಧ್ಯತೆಗಳಿರುತ್ತದೆ. ಈ ದೂರದಲ್ಲಿ ಬೆಂಗಳೂರಿನ ಸ್ಥಳೀಯ ಓಡಾಟವನ್ನು ಖಂಡಿತವಾಗಿ ಪರಿಗಣಿಸಬೇಕಾಗುತ್ತದೆ.

ಬೆಂಗಳೂರಿನಿಂದ ಬೆಳಗಾಂಗೆ ಪ್ರಯಾಣಿಸಿದ ದಿನಾಂಕ:12.01.2013 ನ್ನು ಮಾತ್ರ ಲಾಗ್ ಪುಸ್ತಕದಲ್ಲಿ ಬರೆದಿದ್ದು 13.01.2013 ಮತ್ತು 14.01.2013 ರನ್ನು ಪ್ರತ್ಯೇಕವಾಗಿ ತೋರಿಸಿರುವುದಿಲ್ಲ. ಈ ಮೂರು ದಿನಗಳ ಓಡಾಟಕ್ಕೆ 931 ಕಿಮೀ ಆಗಿರುತ್ತದೆ. ದಿನಾಂಕವನ್ನು ನಮೂದಿಸಿರುವ ಕ್ರಮ ಸರಿಯಿರುವುದಿಲ್ಲ. ಇನ್ನು ಮುಂದೆ ಇಂತಹ ನ್ಯೂನತೆಗಳಾಗದಂತೆ ಸೂಕ್ತ ಕ್ರಮ ವಹಿಸಲಾಗುವುದು. ಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.

03 | **07**

ದಾಸ್ತಾನು ವಹಿ ಮತ್ತು ವಿತರಣಾ ವಹಿ ಲೆಕ್ಕ ಪರಿಶೋಧನೆಗೆ ಹಾಜರು ಪಡಿಸದಿರುವುದು:

2012–13ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತೆ, ವಿಶೇಷ ಅಧಿಕಾರಿಗಳ ಖಾತೆಯಲ್ಲಿ ಹಾಗೂ ಆರ್.ಕೆ.ವಿ.ವೈ.ಖಾತೆಗಳಲ್ಲಿ ವಿವಿಧ ಸಾಮಾಗ್ರಿಗಳನ್ನು ಖರೀದಿಸಲಾಗಿದ್ದು, ಈ ಕೆಳಕಂಡ ಸಾಮಾಗ್ರಿಗಳ ದಾಸ್ತಾನು ಮತ್ತು ವಿತರಣಾ ವಹಿ ಲೆಕ್ಕ ತಪಾಸಣೆಗೆ ಹಾಜರು ಪಡಿಸಿರುವುದಿಲ್ಲ. ಈ ಬಗ್ಗೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ 11/2012–13, 13–14ರಲ್ಲಿ ಹಾಜರು ಪಡಿಸುವಂತೆ ಕೋರಲಾಗ್ಯೂ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ವಿವರ ಕೆಳಗೆ ಕಾಣಿಸಿದೆ.

ಕ್ರಮ ಸಂಖ್ಯೆ	ಸಾಮಾಗ್ರಿ ವಿವರ	ಚೆಕ್ ಸಂಖ್ಯೆ ಮತ್ತು ದಿನಾಂಕ	ಮೊತ್ತ
1	ಟಿ ವಿ ಮತ್ತು ಫ್ರಿಜ್	234558/28–1–13	63900
2	ವಿದ್ಯುತ್ ಸಾಮಾಗ್ರಿ	235287/30–3–13	64830
3	ವಿದ್ಯುತ್ ಸಾಮಾಗ್ರಿ	235289/30–3–13	55256
4	ರಾಸಾಯನಿಕಗಳು	954011/23–3–13	67707
5	ಸ್ಟೀಲ್ ರಾಕ್ಸ	954018/23–3–13	35500
6	ಎಸಿ	954020/23–3–13	58800
7	ಅಲ್ಯೂಮಿನಿಯಂ ಸಾಮಾಗ್ರಿಗಳು	954021/23–3–13	53530
8	ಲ್ಯಾಪ್ ಟ್ಯಾಪ್	773511/31–3–13	67080
	ಒಟ್ಟು		466603

ದಾಖಲೆಗಳನ್ನು ಹಾಜರು ಪಡಿಸಿದ ಕಾರಣ ರೂ. 4,66,603/– ಆಕ್ಷೇಪಣೆಯಲ್ಲಿಡಲಾಗಿದೆ.

ಸದರಿ ಸಾಮಗ್ರಿಗಳನ್ನು ದಾಸ್ತಾನು ವಹಿಗೆ ತೆಗೆದುಕೊಳ್ಳಲಾಗಿದೆ, ದಾಸ್ತಾನು ರಿಜಿಸ್ಟರ್ ಪುಟ ಸಂಖ್ಯೆಗಳು ಕೆಳಕಂಡಂತಿರುತ್ತವೆ.

ಡಿ.ಬಿ.ಆರ್ ವಹಿ ಪುಟಸಂಖ್ಯೆ	ದಿನವಹಿ ಸಂಗ್ರಹಣೆ ಖಾತೆ ಪುಸ್ತಕ ಪುಟಸಂಖ್ಯೆ	ಖರೀದಿಸಿದ ಸಂಸ್ಥೆಯಹೆಸರು
08	050	Mahaveer Electronics Shivamogga
47	10&11	Karthik Enterprises Shivamogga
47	8	Dhanalaxmi Enterprises Shivamogga
06.07.08	61 &62	M/S Sudha Traders Shivamogga
09	02	Mayuri Trading co Shivamogga
09&12	01	Mahaveer Electronics Shivamogga
12&13	1&8	Vishal Enterprises Shivamogga
13	01	Apple Computers Shivamogga

ಆದ್ದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ.

03 | **08**

ಹಾಲಿ ಫಾರ್ಮ್ ಪಾಂಡ್ ಅಭಿವೃದ್ಧಿ ಕಾಮಗಾರಿಯಲ್ಲಿ ನಮೂದಿಸಿದ ಪರಿಮಾಣಕ್ಕೂ/ಮೌಲ್ಯಕ್ಕೂ ಹೊಂದಾಣಿಕೆ ಆಗದಿರುವ ಬಗ್ಗೆ:–

ಬಿಲ್ಲು ಸಂಖ್ಯೆ	1246/03.06.2014 (ಎನ್.ಡಿ.ಸಿ. ಬಿಲ್ಲುಗಳ ಬಿ.ಆರ್)

ಫಾರಂ ಪಾಂಡಿನ ಆಳ ಮತ್ತು ಅಗಲ ಮಾಡುವ ಕಾಮಗಾರಿಗಾಗಿ ರೂ. 95000/– ಅಂದಾಜು ತಯಾರಿಸಿದ್ದು, ಆದೇಶ ಸಂಖ್ಯೆ DR/UAHS/Sanction/140/2013-14 ದಿನಾಂಕ:31.12.2013 ರಲ್ಲಿ ಮಂಜೂರಾತಿ ನೀಡಲಾಗಿದೆ.

ಕಾಮಗಾರಿ ಪೂರ್ಣಗೊಂಡ ಬಗ್ಗೆ ಸ್ಥಳೀಯ ಅಭಿವೃದ್ಧಿ

		ಗುತ್ತಿಗೆದಾರರು: ಶ್ರೀ ರವಣಯ್ಯ ಪಾವತಿಸಿದ ಮೊತ್ತ: ರೂ. 92,800.00 ಮೇಲಿನ ಕಾಮಗಾರಿಯ ಬಿಲ್ಲನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ. 1) ಸದರಿ ಕಾಮಗಾರಿಯ ಬಿಲ್ಲಿನ ಅಳತೆ/ಮೊತ್ತಕ್ಕೆ ಸಂಬಂಧಪಟ್ಟ ಸ.ಅ/ಸ.ಕಾ.ಅ ರವರ ದೃಢೀಕರಣವಿಲ್ಲ 2) ಅಂದಾಜುಪಟ್ಟಿ ಲಭ್ಯವಿಲ್ಲ. 3) ಬಿಲ್ಲಿನಲ್ಲಿ ಶಾಸನಬದ್ಧ ಕಟಾವಣೆಗಳು ಮಾಡಿರುವುದಿಲ್ಲ. 4) ಪಿ.ಡಬ್ಲ್ಯೂ.ಡಿ ಎಸ್.ಆರ್ ನಲ್ಲಿನ ದರಪಟ್ಟಿಯ ದರದ ಆಧಾರದ ಮೇಲೆ ಮೌಲ್ಯ ನಿರ್ಧರಿಸಿಲ್ಲ. . 5) ಬಿಲ್ಲಿನಲ್ಲಿ ನಮೂದಿಸಿದ ಪರಿಮಾಣಕ್ಕೂ ಸಾಗಾಣಿಕೆಯ ಪರಿಮಾಣಕ್ಕೂ ತಾಳೆಯಾಗುವುದಿಲ್ಲ. ಹಾಗೂ ಟ್ರಾಕ್ಟರ್ ಇರ್ವಹಿಸಿದ ದಿವಸಗಳು ಸರಿಹೊಂದುವುದಿಲ್ಲ. ಹಾಗೂ ಈ ಅನುಪಯುಕ್ತ ಮಣ್ಣನ್ನು ಸಾಗಿಸಿದ ಬಗೆಗಿನ ಡಿಂಪಿಂಗ್ ಯಾರ್ಡ್ ವಿವರ ದಾಖಲಿಸಿಲ್ಲ. 6) ಬಿಲ್ಲನ್ನು ಅಂಗೀಕರಿಸಿ, ದೃಢೀಕರಿಸಿರುವ ಅಧಿಕಾರಿಯು ತಾಂತ್ರಿಕವಾಗಿ ಸಕ್ಷಮ ಪ್ರಾಧಿಕಾರವೇ ಎಂಬ ಬಗ್ಗೆ ಸ್ಪಷ್ಟಪಡಿಸುವುದು. ಮೇಲಿನ ಅಂಶಕ್ಕೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ಭರಿಸಿದ ವೆಚ್ಚ ರೂ. 92,800/– ನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕಾಮಗಾರಿ ಸಮಿತಿಯಿಂದ ನೀಡಲಾದ ವರದಿ ಸಂಖ್ಯೆ OFRC/2013-14 ದಿನಾಂಕ: 29.03.2014 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಿ ಮಾಡಿ ದೃಢೀಕರಿಸಿರುತ್ತಾರೆ. ಫಾರ್ಮ್‌ಪಾಂಡಿನಿಂದ ತೆಗೆದ ಮಣ್ಣು/ಹೂಳು ಅನುಪಯುಕ್ತವಾದ್ದರಿಂದ ಬೇರೆಡೆಗೆ ಸಾಗಿಸಲಾಗಿದೆ. ಹೀಗಾಗಿ ಅದನ್ನು ಸಂಗ್ರಹಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಪಿ.ಡಬ್ಲು.ಡಿ. ಎಸ್.ಆರ್. ದರಪಟ್ಟಿಯಲ್ಲಿ ಸದರಿ ಐಟಂ ಇರುವುದಿಲ್ಲ. ಆದ್ದರಿಂದ ತುಂಡು ಗುತ್ತಿಗೆ ಅನುಸರಿಸದೇ ಕೊಟೇಷನ್ ಪದ್ಧತಿ ಅನುಸರಿಸಲಾಗಿದೆ. ಈ ಬಿಲ್ಲಿಗೆ ಸಂಬಂಧಿಸಿದಂತೆ ರೂ. 1,856/– ನ್ನು ಆದಾಯ ತೆರಿಗೆ ಬಾಬ್ತು, ಗುತ್ತಿಗೆದಾರರಿಂದ, ಸಾವಯವ ಕೃಷಿ ಸಂಶೋಧನಾ ಕೇಂದ್ರ ಶಿವಮೊಗ್ಗ ಕಛೇರಿಯ ಸಾಮಾನ್ಯ ರಶೀದಿ ಸಂಖ್ಯೆ 250/07.05.2014 ರಲ್ಲಿ ವಸೂಲು ಮಾಡಲಾಗಿದೆ, ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
03	09	<u>ಎ.ಸಿ. ಬಿಲ್ಲಿನಲ್ಲಿ ಪಡೆದ ಮುಂಗಡಕ್ಕೆ ಸಲ್ಲಿಸಲಾದ ಎನ್.ಡಿ.ಸಿ ಬಿಲ್ಲುಗಳಲ್ಲಿ ZARS</u> ನವಿಲೆ ಕೇಂದ್ರಕ್ಕೆ ಹೀರೋ ಹೊಂಡಾ(ಸೈನ್) ಬೈಕ್ ಖರೀದಿಸಿದ ಕ್ರಮದಲ್ಲಿನ ಪ್ರಮುಖ ನ್ಯೂನತೆಗಳು:– ಪ್ರಸ್ತುತ 2013–14 ನೇ ಸಾಲಿನಲ್ಲಿ ಮೂರು ಕೃಷಿ ಸಂಶೋಧನಾ ಕೇಂದ್ರ ನವಿಲೆ ಕೇಂದ್ರಕ್ಕೆ ಎ.ಸಿ.ಬಿಲ್ಲಿನ ಮೂಲಕ ಪಡೆದ ಮುಂಗಡಕ್ಕೆ ಪೂರಕವಾಗಿ ಸಲ್ಲಿಸಿರುವ ಎನ್.ಡಿ.ಸಿ ಬಿಲ್ಲಿನಲ್ಲಿ ಬಿ.ಆರ್.ಸಂಖ್ಯೆ. 9721/17.12.2014 ರಲ್ಲಿ ರೂ.65,000.00 ಕ್ಕೆ ಹೀರೊ ಹೊಂಡಾ (ಶೈನ್) ಬೈಕ್ ಖರೀದಿ ಮಾಡಲಾಗಿದ್ದು, ಈ ಖರೀದಿಯ ಬಿಲ್ಲಿನಲ್ಲಿ ಕಂಡು ಬಂದಿರುವ ಪ್ರಮುಖ ನ್ಯೂನತೆಗಳು ಈ ಕೆಳಗಿನಂತಿದೆ. 1) ಸದರಿ ಸಂಸ್ಥೆಗೆ ಬೈಕ್ ಖರೀದಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವ ಬಗ್ಗೆ ಹಾಗೂ ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮೋದನೆ ವಿವರ ಲಗತ್ತಿಸಿಲ್ಲ. 2) ಒದಗಿಸಿದ ಮಾಹಿತಿಯ ಪ್ರಕಾರ ಜುವಿಖಿ ನವಿಲೆ ಸ್ಟೇಷನ್ ವ್ಯಾಪ್ತಿಯು 210 ಎಕರೆ ಇದ್ದು ಇದನ್ನು ಯಾವ ಯಾವ Approch	1) ಸಕ್ಷಮ ಪ್ರಾಧಿಕಾರದಿಂದ ರೂ. 65,000/– ಗಳಿಗೆ ಆದೇಶ ಸಂಖ್ಯೆ DR/UAHS/sanction/128/2013-14 ದಿನಾಂಕ: 18.12.2013 ರಲ್ಲಿ ಮಂಜೂರಾತಿ ನೀಡಲಾಗಿದೆ. 2) ನವುಲೆ ಕೇಂದ್ರದ ವ್ಯಾಪ್ತಿಯು 210 ಎಕರೆ ವಿಸ್ತೀರ್ಣ ಇದ್ದು, ಇದರಲ್ಲಿರುವ ವಿವಿಧ ಸಂಶೋಧನಾ ತಾಕುಗಳಿಗೆ (Plot) ಕ್ಷೇತ್ರ ಉಸ್ತುವಾರಿಗಾಗಿ, ಸಂಬಂಧಿಸಿದ ಕ್ಷೇತ್ರ ಸಹಾಯಕರು ಭೇಟಿ ನೀಡಬೇಕಾಗಿದ್ದು, ಈ ದೂರವು ಸುಮಾರು 10 ಕಿ.ಮೀ ಗಳಿಗಿಂತಲೂ ಜಾಸ್ತಿ ಇರುವುದರಿಂದ ನಡೆದಾಡಿಕೊಂಡು ಒಂದು ದಿನದಲ್ಲಿ ಎಲ್ಲಾ ಸಂಶೋಧನಾ ತಾಕುಗಳನ್ನು ಪರಿಶೀಲಿಸಲು ಕಷ್ಟವಾಗುವುದರಿಂದ, ಒಂದು ದ್ವಿ ಚಕ್ರ ವಾಹನದ ಅಗತ್ಯತೆ ಅವಶ್ಯವಾಗಿದ್ದು, ಈ ವಾಹನವನ್ನು ಖರೀದಿಸಲಾಗಿದೆ. 3) Senior Farm Superintendent ರವರ ಹೆಸರಿನಲ್ಲಿ

		ರಸ್ತೆಗಳಾಗಿ ಎಂಗಡಿಸಿದೆ. ಬೈಕ್ ಖರೀದಿಸಿದ ಇದರ ಬಗೆಗಿನ ಮೂಲ ಉದ್ದೇಶ ಸ್ಪಷ್ಟಪಡಿಸಲು ತಿಳಿಸಿದೆ. 3) ಸದರಿ ಬೈಕ್‌ನನ್ನು ಎಸ್.ಎಫ್.ಸಿ ರವರ ಹೆಸರಿನಲ್ಲಿ ಖರೀದಿಸಿದೆ. ಅದಕ್ಕಾನುಗುಣವಾಗಿ ಎಸ್.ಎಫ್.ಎಸ್. ರವರ ಬೈಕ್ ಡಿ.ಸಿ ಪ್ರತಿ ಒದಗಿಸಲು ತಿಳಿಸಿದೆ ಹಾಗೂ ಅದನ್ನು ಬಳಸುವರ ಲೈಸನ್ಸ್ ಪ್ರತಿ ಲಗತ್ತಿಸಲು ತಿಳಿಸಿದೆ. 4) ಸದರಿ ಸಂಸ್ಥೆಯ ಬಳಕೆಗೆ/ಅಗತ್ಯತೆಗೆ ಅನುಗುಣವಾಗಿ ಇದೇ ರೀತಿಯ ಬೈಕ್ ಅಗತ್ಯವೆಂದು ಯಾವ ಮಾನದಂಡದ ಆಧಾರದ ಮೇಲೆ ನಿರ್ಧರಿಸಿದೆ. ಏಕೆಂದರೆ, ಹಲವಾರು ಬೈಕ್/ಸ್ಕೂಟರ್‌ಗಳು ಹಾಗೂ ಬೆಲೆಗಳಿಗೆ ಮತ್ತು ಅಗತ್ಯತೆಗೆ ಅನುಗುಣವಾಗಿರುವುದರಿಂದ ಭರಿಸಿದ ವೆಚ್ಚವನ್ನು ಸಮರ್ಥಿಸುವ ವಿವರ ನೀಡಲು ತಿಳಿಸಿದೆ. 5) ಸದರಿ ಬೈಕ್ ತಗಲುವ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಂಡು ಈ A.M.Estrmate ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮೋದನೆ ಬಗ್ಗೆ. ಮೇಲಿನ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ಭರಿಸಿದ ವೆಚ್ಚ ರೂ.65,000.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಖರೀದಿಸಲಾಗಿದೆ. ಆರ್.ಸಿ ಬುಕ್ ಪ್ರಕಾರ, ನೊಂದಣಿ ಸಂಖ್ಯೆ KA14 EG 7111 ಆಗಿದ್ದು, ಈ ವಾಹನ ಬಳಸುವವರ ಲೈಸನ್ಸ್ ನಂ KA14 20110005394 ಆಗಿರುತ್ತದೆ. 4) ಕ್ಷೇತ್ರದಲ್ಲಿ ಕಚ್ಚಾ ರಸ್ತೆ ಇದ್ದು, ಇದರಲ್ಲಿ ಸಂಚರಿಸಲು ಈ ಬೈಕ್ ಯೋಗ್ಯವಾಗಿರುವುದೆಂದು Senior Farm Superintendent ರ ಅಭಿಪ್ರಾಯದ ಮೇರೆಗೆ, ಸದರಿ ಬೈಕನ್ನು ಖರೀದಿಸಲಾಗಿದೆ. 5) ಬೈಕನ್ನು ಖರೀದಿಸಲಾಗಿದ್ದು, ಇಂಧನ ವೆಚ್ಚವನ್ನು ಹಾಗೂ ದುರಸ್ತಿ ವೆಚ್ಚಕ್ಕೆ ವಾಹನಗಳ ವಾರ್ಷಿಕ ನಿರ್ವಹಣಾ ORC/POL (Petrol, Oil, Lubricant) ಲೆಕ್ಕಶೀರ್ಷಿಕೆ ಸಂಖ್ಯೆ 6470/702ರಲ್ಲಿ ಭರಿಸಲಾಗಿದೆ. ಹೀಗಾಗಿ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
03	10	**ಕೇಂದ್ರ ಪುರಸ್ಕೃತ ಐ.ಸಿ.ಎ.ಆರ್ ಯೋಜನೆಯಡಿಯಲ್ಲಿ ಕಾಮಗಾರಿಗಳ ಅನುಷ್ಟಾನಕ್ಕಾಗಿ ಬಿಡುಗಡೆಯಾದ ಅನುದಾನವನ್ನು ನಿಯಮಬಾಹಿರವಾಗಿ ಎ.ಸಿ. ಬಿಲ್ಲಿನ ಮೂಲಕ ಹಣ ಸೆಳೆದಿರುವುದು:–** ಪ್ರಸ್ತುತ ಮೇಲಿನ ವಿಷಯಕ್ಕೆ ಅನುಗುಣವಾಗಿ ಕೇಂದ್ರ ಪುರಸ್ಕೃತ ಐ.ಸಿ.ಎ.ಆರ್.ಯೋಜನೆಯಡಿಯಲ್ಲಿ ವಿವಿಧ ವಲಯಗಳಲ್ಲಿನ ಕಾಮಗಾರಿಗಳ ಅನುಷ್ಟಾನಕ್ಕಾಗಿ ಒಟ್ಟಾರೆ 100.00 ಲಕ್ಷ ಮಂಜೂರಾಗಿದ್ದು, ಅದು ಐ.ಸಿ.ಎ.ಆರ್ ರವರ ಪತ್ರ ಸಂಖ್ಯೆ FNO/Edu/12/29/2012 EP & D ದಿನಾಂಕ: 31.01.2014 ರಲ್ಲಿ ಹಾಗೂ ಅದಕ್ಕನುಗುಣವಾಗಿ ದಿನಾಂಕ: 14.03.2014 ರಲ್ಲಿ ಕುಲಪತಿಗಳ ಅನುಮೋದನೆಗೊಂಡು ದಿನಾಂಕ: 27.03.2014 ರಲ್ಲಿ ಎಸ್ಟೆಟ್ ಅಧಿಕಾರಿಯವರಿಗೆ ಎ.ಸಿ ಬಿಲ್ಲಿನ ಮೂಲಕ ಹಣ ಸೆಳೆದು ವಿತರಿಸಿದೆ ಸದರಿ ವಿಷಯದಲ್ಲಿ ಈ ಕೆಳಕಂಡ ಪ್ರಮುಖ ನ್ಯೂನತೆಗಳನ್ನು ಗಮನಿಸಲಾಗಿದೆ ಹಾಗೂ 2013–14ನೇ ಸಾಲಿನಲ್ಲಿ ಕಾಮಗಾರಿಗಳನ್ನು ಹೊರತುಪಡಿಸಿ ಇನ್ನುಳಿದ ಮೊತ್ತ ರೂ. 110.00 ಲಕ್ಷ ಸಹ ಸದರಿ ಯೋಜನೆಯಡಿಯಲ್ಲಿ ಬಳಕೆಯಾಗಿದೆ. 1) ಪ್ರಾರಂಭಿಕವಾಗಿ ಕಾಮಗಾರಿಗಳ ಅನುಷ್ಟಾನಕ್ಕಾಗಿ ತುರ್ತಾಗಿ ರೂ. 100.00 ಲಕ್ಷ ಎ.ಸಿ ಬಿಲ್ಲಿನ ಮೂಲಕ ಹಣ ಸೆಳೆದಿರುವುದು ನಿಯಮ ಬಾಹಿರವಾಗಿದ್ದು ಇಷ್ಟೊಂದು ಮೊತ್ತ ಎ.ಸಿ ಬಿಲ್ಲಿನ ಮೂಲಕ ಸೆಳೆಯಲು ಯಾವ ಪ್ರದತ್ತವಾದ ನಿಯಮದ ಅಡಿಯಲ್ಲಿ ಅವಕಾಶವಿದೆ? ಸರ್ಕಾರದ ನಿಯಮಾನುಸಾರ ಎ.ಸಿ ಬಿಲ್ಲಿನಲ್ಲಿ ಹಣ ಸೆಳೆಯುವುದನ್ನು ನಿರ್ಭಂಧಿಸಿದ್ದರೂ ಈ ನಿಯಮವನ್ನು	1) 2013–14 ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾದ ವರ್ಷವಾಗಿದ್ದು, ಹೊಸದಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸಿ, ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಶಿಕ್ಷಣ ಬಲಪಡಿಸುವ ಕಾರ್ಯಗಳಿಗೆ, ಹಾಗೂ ಮೂಲಭೂತ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತು ಮಾದರಿ ಅಧ್ಯಯನ ಕೊಠಡಿಗಳನ್ನು ನಿರ್ಮಾಣ ಮಾಡಲು, ಅಲ್ಲದೇ ಮೂಲಭೂತ ಭೋಧನಾ ಮತ್ತು ಕಲಿಕಾ ಕಾರ್ಯ ಚಟುವಟಿಕೆಗಳಿಗಾಗಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನಿಂದ ಆರ್ಥಿಕ ವರ್ಷದ ಅಂತ್ಯದಲ್ಲಿ (2013–14 ನೇ ಸಾಲಿನ ಮಾರ್ಚ್ 2014 ರ ತಿಂಗಳಲ್ಲಿ) ರೂ 100 ಲಕ್ಷ ಅನುಧಾನವು, ICAR ಪತ್ರ ಸಂಖ್ಯೆ F No(Edn)12(29) 2012 EP&D ಪ್ರಕಾರ ಮಾರ್ಚ್ 2014 ರಲ್ಲಿ ಬಿಡುಗಡೆಯಾಗಿದೆ. ಈ ಅನುದಾನವನ್ನು, ಆರ್ಥಿಕ ವರ್ಷದಲ್ಲಿ ಬಳಕೆ ಮಾಡಿಕೊಳ್ಳಬೇಕಾಗಿರುವುದರಿಂದ ಹಾಗೂ ಹೊಸ ವಿಶ್ವವಿದ್ಯಾಲಯ ಬೆಳವಣಿಗೆ ದೃಷ್ಟಿಯಿಂದ ಅನಿವಾರ್ಯವಾಗಿ ಎ.ಸಿ. ಬಿಲ್ಲಿನ ಮೇಲೆ ಡ್ರಾ ಮಾಡಲಾಗಿದೆ. 2) ಹೀಗೆ ಎ.ಸಿ. ಬಿಲ್ಲಿನ ಮೇಲೆ ಡ್ರಾ ಮಾಡಿದ ಅನುಧಾನದ ಮೊತ್ತವನ್ನು ಬಟವಾಡೆ ಅಧಿಕಾರಿಗಳ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಿ ವ್ಯವಹರಿಸಲಾಗಿದೆ ಹಾಗೂ ಎನ್ ಡಿ ಸಿ ಬಿಲ್

		ಉಲ್ಲಂಘಿಸಿರುವುದಕ್ಕೆ ಸ್ಪಷ್ಟೀಕರಣ ನೀಡಲು ತಿಳಿಸಿದೆ. 2) ಕೇವಲ ಅನುದಾನವು ವ್ಯಾಪಗತವಾಗಬಹುದೆಂಬ ಉದ್ದೇಶದಿಂದ ಅನಗತ್ಯವಾಗಿ ಎ.ಸಿ ಬಿಲ್ಲಿನ ಮೂಲಕ ಹಣ ಸೆಳೆದಿರುವುದನ್ನು ಹಾಗೂ ತಾತ್ಕಾಲಿಕ ಗುರ್ಬಳಕೆಯಾಗುವ ಸಂಭವವನ್ನು ಅಲ್ಲಗೆಳೆಯುವಂತಿಲ್ಲವಂಬ ಅಂಸದ ಒತ್ತು ನೀಡುದ್ದರು ಈ ರೀತಿಯ ಹಣ ಸೆಳೆದಿರುವುದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದಿರುವುದೇ ಎಂಬುದನ್ನು ವಿಶದಪಡಿಸಲು ತಿಳಿಸಿದೆ. 3) ಐ.ಸಿ.ಎ.ಆರ್ ನಿಯಮಾವಳಿಯ 4(1) ರ ಪ್ರಕಾರ ಯಾವುದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಮುನ್ನ ಕೌನ್ಸಿಲ್ ನಿರ್ಣಯ ಹಾಗೂ ಅನುಮೋದನೆ ಅಗತ್ಯವಿದ್ದು ಅದನ್ನು ಪಡೆದಿರುವ ವಿವರ ಸಲ್ಲಿಸುವುದು. 4) ಪೂರಕವಾಗಿ ಐ.ಸಿ.ಎ.ಆರ್ ನಿಯಮಾವಳಿಯ ರೀತ್ಯಾ ಹಣ ಬಳಕೆ ಪ್ರಮಾಣ ಪತ್ರವನ್ನು FORM GFR No 19/2005 ರಲ್ಲಿ ಲೆಕ್ಕಪರಿಶೋಧನೆಯು CAG ಅಥವಾ ರಾಜ್ಯ ಲೆಕ್ಕಪತ್ರ ರವರಿಂದ ಪೂರ್ಣಗೊಳಿಸಿ ಸಲ್ಲಿಸಲು ಆದೇಶವಿದ್ದರೂ ಸಹ ಸಿ.ಎ ರವರಿಂದ ತುರ್ತಾಗಿ ಹಣ ಬಳಕೆ ಪ್ರಮಾಣ ಸಲ್ಲಿಸಿರುವುದು ಹಾಗೂ ಕೌನ್ಸಿಲ್‌ನ ಗಮನಕ್ಕೆ ಬಂದಿರುವುದನ್ನು ಸಹ ದೃಢೀಕರಿಸಲು ತಿಳಿಸಲಾಗಿದೆ. 5) ರೂ. 100.00 ಲಕ್ಷ ಮೊತ್ತವನ್ನು ಎ.ಸಿ ಬಿಲ್ಲಿನ ಮೂಲಕ (BR No. 11938/29.03.2014) ಸೆಳೆದು ದಿನಾಂಕ: 31.12.2015 ರಲ್ಲಿ ಕಾಮಗಾರಿ ಬಿಲ್ಲುಗಳ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಿದೆ. ಆದರೆ, ಈ ರೀತಿಯ ಮೊತ್ತವನ್ನು ಕರ್ನಾಟಕ ಆರ್ಥಿಕ ಸಂಹಿತೆ 1958 ನಿಯಮದ ಪ್ರಕಾರ ಏಕೆ ತಾತ್ಕಾಲಿಕ ದುರುಪಯೋಗವೆಂದು ಪರಿಗಣಿಸಬಾರದು ಈ ಬಗ್ಗೆ ಸಮರ್ಥನೆ ನೀಡಲು ತಿಳಿಸಿದೆ. 6) ಮುಂದುವರಿದು, ಪಟ್ಟಿಯಲ್ಲಿರುವ ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ ಇದರಲ್ಲಿ ಅಭಿಯಂತರರು ಮೂಲವಾಗಿ ನಮೂದಿಸಿರುವ ಪರಿಮಾಣವು ಯಾವುದೇ ಎಲ್.ಬಿ.ಡಿ ಲೆಕ್ಕಾಚಾರವಿಲ್ಲದೇ ಕ್ರೋಢಿಕರಿಸಿ ನಮೂದಿಸಿದ್ದು, ಯಾವ ಆಧಾರದ ಮೇಲೆ ನಮೂದಿಸಿರುತ್ತಾರೆ ಎಂಬ ವಿವರವಿಲ್ಲ. ಈ ರೀತಿ ಅವೈಜ್ಞಾನಿಕವಾಗಿ ಅಂದಾಜು ಪಟ್ಟಿಯನ್ನು ಮಂಜೂರು ಮಾಡಿರುವ ಕ್ರಮವನ್ನು ಸಮರ್ಥಿಸಲು ತಿಳಿಸಿದೆ ಹಾಗೂ ಒಂದು ಅಂದಾಜು ಪಟ್ಟಿಗೆ ಅಗತ್ಯವಾಗಿ ಲಗತ್ತಿಸಬೇಕಾದ ಅಡಕಗಳು/ದೃಢೀಕರಣಗಳು ಇರುವುದಿಲ್ಲ ಮತ್ತು ಐ.ಸಿ.ಎ.ಆರ್ ನಿಯಮದ ಪ್ರಕಾರ ರೂ. 10.00 ಲಕ್ಷ ಮೇಲ್ಪಟ್ಟು ಅಂದಾಜು ಪಟ್ಟಿಗಳು ಕೌನ್ಸಿಲ್‌ನ ಪರಿಶೀಲನೆಗೆ ಒಳಪಡಬೇಕಾಗುತ್ತದೆ. 7) ಮಾರುಕಟ್ಟೆದರಗಳನ್ನು ನಮೂದಿಸಿರುವುದಕ್ಕೆ Data Rate/Rate Analysis ತಯಾರಿಸಿ ಅದನ್ನು ಸಕ್ಷಮ ಪ್ರಾಧಿಕಾರದಿಂದ	ಗಳನ್ನು ನೀಡಿ ಲೆಕ್ಕ ಚುಕ್ತ ಮಾಡಲಾಗಿದೆ. 3) ಒಂದು ಕಾಮಗಾರಿಯನ್ನು 10.00 ಲಕ್ಷ ಅಂದಾಜಿನೊಳಗೆ ಮಂಜೂರು ಮಾಡಿದ್ದು, ಆ ಪ್ರಕಾರ ನಿರ್ವಹಿಸಲಾಗಿದೆ. 4) ಹಣ ಬಳಕೆ ಪ್ರಮಾಣ ಪತ್ರವನ್ನು ಐಸಿಎಆರ್ ಗೆ ನಿಗದಿತ ಅವಧಿಯೊಳಗೆ ತುರ್ತಾಗಿ ಸಲ್ಲಿಸಬೇಕಾಗಿದ್ದ ಕಾರಣ ಸಿಎ ರವರಿಂದ ಆಡಿಟ್ ಮಾಡಿಸಿ ಹಣ ಬಳಕೆ ಪತ್ರ ಸಲ್ಲಿಸಲಾಗಿದೆ. ಹಾಗೂ ಈ ಹಣಬಳಕೆ ಪ್ರಮಾಣ ಪತ್ರವನ್ನು ಐ.ಸಿ.ಎ.ಆರ್. ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. 5) ಎ.ಸಿ. ಬಿಲ್ ಮೇಲೆ ಡ್ರಾ ಮಾಡಿದ ಮೊತ್ತವನ್ನು ಬಟವಾಡೆ ಅಧಿಕಾರಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ಬಿಲ್ಲುಗಳ ಪ್ರಕಾರ ಆಗಿಂದಾಗ್ಗೆ ಪಾವತಿಸಲಾಗಿದೆ. ಕ್ರೋಡೀಕೃತ ಬಿಲ್ಲುಗಳ ವಿವರದ ಎನ್.ಡಿ.ಸಿ. ಬಿಲ್ಲನ್ನು 31.12.2015 ಕ್ಕೆ ಹೊಂದಾಣಿಕೆ ಮಾಡಲಾಗಿದೆ. ಎನ್.ಡಿ.ಸಿ ಬಿಲ್ಲನ್ನು ಸಲ್ಲಿಸಲು ವಿಳಂಬವಾಗಿದೆಯೇ ಹೊರತು, ಹಣವನ್ನು ಡ್ರಾ ಮಾಡಿ ಹೆಚ್ಚು ದಿನ ಬಾಕಿ ಉಳಿಸಿಕೊಂಡಂತಾಗಿರುವುದಿಲ್ಲ ಹಾಗೂ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ. ರೂ. 10.00 ಲಕ್ಷಗಳ ಮೇಲ್ಪಟ್ಟ ಅಂದಾಜುಗಳ ಯಾವುದೇ ಸಿಂಗಲ್ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿಲ್ಲ. 6.7) ಈ ಅಂಶಗಳನ್ನು ಗಮನಿಸಲಾಗುವುದು ಹಾಗೂ ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಆಸ್ತಿ ಅಧಿಕಾರಿಯವರಿಗೆ ಸೂಚಿಸಲಾಗಿದೆ. 8) ಆಸ್ತಿ ಅಧಿಕಾರಿಗಳ ಹೆಸರಿನಲ್ಲಿ ಯಾವುದೇ TAN ನಂ ಇಲ್ಲದೇ ಇರುವುದರಿಂದ ಎನ್.ಡಿ.ಸಿ. ಬಿಲ್ಲನ್ನು ಸಲ್ಲಿಸಿದಾಗ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಯಲ್ಲಿ ಸಂಬಂಧಿಸಿದ ಶೀರ್ಷಿಕೆಗೆ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ. ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ಶಾಸನಬದ್ಧ ತೆರಿಗೆ ಮೊತ್ತವನ್ನು ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಲಾಗಿದೆ. ಸದರಿ ಎ.ಸಿ. ಬಿಲ್ಲಿಗೆ ಎನ್.ಡಿ.ಸಿ. ಬಿಲ್ಲನ್ನು ಸಲ್ಲಿಸಿ ಹೊಂದಾಣಿಕೆ ಮಾಡಲಾಗಿದೆ. ಮೇಲೆ ತಿಳಿಸಲಾದ ಅಂಶಗಳನ್ನು ಗಮನಿಸಿ, ವಿಶ್ವವಿದ್ಯಾಲಯದ ಬೆಳವಣಿಗೆ ಹಿತ ದೃಷ್ಟಿಯಿಂದ ಐಸಿಎಆರ್ ನಿಂದ ಬಿಡುಗಡೆಯಾದ ಅನುದಾನ ರೂ. 100 ಲಕ್ಷಗಳನ್ನು ಅನಿವಾರ್ಯವಾಗಿ ಮಾರ್ಚ್ 2014 ರಲ್ಲಿ ಎ.ಸಿ. ಬಿಲ್ಲಿನ ಮೇಲೆ ಡ್ರಾ ಮಾಡಿ ಎನ್ ಡಿ ಸಿ ಬಿಲ್ಲನ್ನು ಸಲ್ಲಿಸಲಾಗಿದೆ ಹಾಗೂ ವಿಶ್ವವಿದ್ಯಾಲಯದ ನಿಧಿಯಡಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮಾ ಮಾಡಿ ವ್ಯವಹರಿಸಲಾಗಿದೆ. ಈ ಅನುದಾನದಡಿ ಮಂಜೂರಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ಬಗ್ಗೆ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಆಸ್ತಿ ಅಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿರುತ್ತಾರೆ. ಈ ಒನ್ನೆಲೆಯಲ್ಲಿ ಈ ಕಂಡಿಕೆಯನ್ನು

		ಅನುಮೋದನೆ ಪಡೆದಿರುವುದೇ ಹಾಗೂ ಕೆಲವೊಂದು Finished Items ಗಳಿಗೆ ಎ.ಡಿ ನೀಡಿರುವುದನ್ನು ಪರಿಶೀಲಿಸಿ ದೃಢೀಕರಿಸಲು ತಿಳಿಸದೆ ಹಾಗೂ ಅಳತೆ ಪುಸ್ತಕದಲ್ಲಿ ಸಂಬಂಧಪಟ್ಟ ಕಟ್ಟಡದ Standard Measurement ದಾಖಲಿಸಿರುವುದನ್ನು ಖಚಿತಪಡಿಸುವುದು ಮತ್ತು ಹಿರಿಯೂರಿನ ಕಾಮಗಾರಿ ಬಿಲ್ಲಿನ ಕ್ರ.ಸ.(1) ರಲ್ಲಿ E.W.E Item Surface Item ನೀಡಿದ್ದು ಇದರಲ್ಲಿ Item No. (2) ನ್ನು ಪರಿಗಣಿಸಬೇಕಾಗಿದೆ. ಇದನ್ನು ಪರಿಶೀಲಿಸಿ ವರದಿ ನೀಡಲು ತಿಳಿಸಿದೆ. 8) ಕಾಮಗಾರಿ ಬಿಲ್ಲುಗಳಿಗೆ ಕಡಿತಗೊಳಿಸಿದ ಶಾಸನಬದ್ಧ ತೆರಿಗೆಯ ಮೊತ್ತವನ್ನು Estate Officer ರವರು ಪುನಃ ಕೇಂದ್ರ ಕಛೇರಿಗೆ ನೀಡಿ ಕೇಂದ್ರ ಕಛೇರಿಯಿಂದ ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿಸು ಕ್ರಮವೇ. ಆದರೆ. ಕಾಮಗಾರಿ ಬಿಲ್ಲುಗಳಿಗೆ/ಇ.ಒ. ಕಛೇರಿಯಲ್ಲಿ ಯಾವುದೇ ಪ್ರತ್ಯೇಕ ಖಾತೆ/ನಗದು ಪುಸ್ತಕ ನಿರ್ವಹಿಸದ ಕಾರಣ. ಎಲ್ಲಾ ಬಿಲ್ಲುಗಳನ್ನು ಬೇರೆ ಬಿಲ್ಲುಗಳ ತರಹ ಕೇಂದ್ರ ಕಛೇರಿಯಿಂದಲೇ ಪಾವತಿಸುವ ಕ್ರಮ ಕೈಗೊಳ್ಳದಿರುವುದನ್ನು ಸಮರ್ಥಿಸುವುದು. ಇದರಿಂದ ಎ.ಸಿ ಬಿಲ್ಲಿನ ಮೂಲಕ ಹಣ ಸೆಳೆಯುವುದನ್ನು ತಡೆಗಟ್ಟಬಹುದು ಹಾಗೂ ಅನಗತ್ಯ ವಿಳಂಬಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ ಸಂಬಂಧಪಟ್ಟ ಡ್ರಾಯಿಂಗ್ ಅಧಿಕಾರಿಯೇ ನಗದು ಪುಸ್ತಕ ನಿರ್ವಹಿಸಬೇಕಾದ್ದರಿಂದ ಈ ಕ್ರಮದ ಬಗ್ಗೆ ಆಡಳಿತಾತ್ಮಕ ವಿವರಣೆ ನೀಡಲು ತಿಳಿಸಿದೆ. ಮೇಲಿನ ಅಂಶಕ್ಕೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ಭರಿಸದ ವೆಚ್ಚ ರೂ. 1,00,00,000.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕೈಬಿಡಲು ಕೋರಲಾಗಿದೆ.
03	11	**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000 ದಂತೆ ಟೆಂಡರ್ ಆಹ್ವಾನಿಸದೇ ಬೆಲೆಪಟ್ಟಿ ಮೂಲಕ ಖರೀದಿಸಿ ಮೊತ್ತ ವಿಭಜಿಸಿರುವುದು:-** ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಲಯ ಕೃಷಿ ಸಂಶೋಧನಾ ಕೇಂದ್ರ, ಶೃಂಗೇರಿ ಇಲ್ಲಿನ ಎನ್.ಡಿ.ಸಿ ಬಿಲ್ಲುಗಳ ಮೂಲಕ ಅಂಗೀಕರಿಸಿದ ಬಿಲ್ಲಿನ ಬಿ.ಆರ್.ಶಂಖ್ಯೆ 13325/31.03.2014 ರಲ್ಲಿ ಒಟ್ಟಾರೆ ರೂ. 4,10,839/- ಕ್ಕೆ ಆಗಿದ್ದು ಅದರಲ್ಲಿ ಪೀಠೋಪಕರಣ, ಟಿ.ವಿ, ಎ.ಸಿ, ಇತರೆ ಸಾಮಗ್ರಿಗಳನ್ನು ಅನಗತ್ಯವಾಗಿ ಪ್ರತ್ಯೇಕವಾಗಿ ವಿಭಜಿಸಿ ಖರೀದಿಸಿದೆ. ಅದರಲ್ಲಿನ ನ್ಯೂನತೆಗಳು ಈ ಕೆಳಗಿನಂತಿದೆ. 1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000 ದಂತೆ ಅಲ್ಪಾವಧಿ ಟೆಂಡರ್ ಕರೆಯದೇ ಬೆಲೆಪಟ್ಟಿ ಕರೆದು ಬಿಲ್ಲುಗಳನ್ನು ಉದ್ದೇಶ ಪೂರ್ವಕವಾಗಿ ವಿಭಜಿಸಿ ಪಾವತಿಸಿರುವುದು ಕಂಡುಬಂದಿದೆ. 2) ಪಾವತಿ ಬಿಲ್ಲಿನಲ್ಲಿ ನಮೂದಿಸಿರುವ ದಾಸ್ತಾನು ದೃಢೀಕರಣದ ಬಗ್ಗೆ ಮಾಹಿತಿ ಒದಗಿಸಿರುವುದಿಲ್ಲ.	ಕ್ಷೇತ್ರಾಧೀಕ್ಷಕರು, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಶೃಂಗೇರಿ ಇವರ ಕಛೇರಿಗೆ ಬೇಕಾದ ಅಗತ್ಯ ಪೀಠೋಪಕರಣ ಮತ್ತು ಇತರ ಸಾಮಾಗ್ರಿಗಳನ್ನು ಅವರ ಬೇಡಿಕೆ ಪ್ರಕಾರ ಆಗಿಂದಾಗ್ಗೆ ಖರೀದಿ ಮಾಡಲಾಗಿದೆ. 1) ಈ ರೀತಿ ಸ್ವೀಕೃತವಾದ ಸಾಮಾಗ್ರಿಗಳ ಬೇಡಿಕೆ ಮೌಲ್ಯ ರೂ. 1.00 ಲಕ್ಷದೊಳಗೆ ಇದ್ದಿದ್ದರಿಂದ, ನಿಯಮಾನುಸಾರ ದರಪಟ್ಟಿಗಳ ಆಧಾರದ ಮೇಲೆ ಖರೀದಿ ಮಾಡಲಾಗಿದೆ. 2) ಈ ಎಲ್ಲಾ ಸಾಮಾಗ್ರಿಗಳನ್ನು ಆಯಾಯ ಕೇಂದ್ರಗಳಲ್ಲಿ ದಾಸ್ತಾನು ತೆಗೆದುಕೊಂಡ ಬಗ್ಗೆ ಸೂಕ್ತ ದೃಢೀಕರಣವನ್ನು ಬಿಲ್ಲಿನ ಹಿಂಬದಿಯಲ್ಲಿ ದಾಖಲಿಸಲಾಗಿದೆ. ಸಂಬಂಧಿಸಿದ ಸಂಸ್ಥೆಗೆ ಚೆಕ್ ಮೂಲಕ ಪಾವತಿಸಲಾಗಿದೆ. 3) ಈ ಸಾಮಾಗ್ರಿಗಳನ್ನು AHRS ಶೃಂಗೇರಿಯಲ್ಲಿ ಹೊಸದಾಗಿ ನಿರ್ಮಿಸಿದ ಅತಿಥಿ ಗೃಹಕ್ಕೆ ಅಳವಡಿಸಲು ಖರೀದಿಸಲಾಗಿದೆ. 4) ಈ ಅಂಶಗಳನ್ನು ಗಮನಿಸಲಾಗುವುದು ಹಾಗೂ ಪ್ರಸ್ತುತ ಈ

		3) ಹಣ ಸಂದಾಯದ ಸ್ವೀಕೃತಿ ಪತ್ರ ಹಾಜರುಪಡಿಸಿಲ್ಲ. 4) ಯಾವ ಉದ್ದೇಶಕ್ಕಾಗಿ ಈ ಸಾಮಗ್ರಿಗಳನ್ನು ಖರೀದಿಸಿದೆ ಎಂಬ ಬಗ್ಗೆ ಸ್ವಯಂ ವೇದ್ಯ ಟಿಪ್ಪಣಿ ಇರುವುದಿಲ್ಲ. 5) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ/2/ಇ-ಸಂಗ್ರಹ/2009 ದಿನಾಂಕ: 09.10.2012 ಅನುಬಂಧದ ಕ್ರಮ ಸಂಖ್ಯೆ:58ರಲ್ಲಿ ಸೂಚಿಸಿರುವಂತೆ ಕೆ.ಟಿಪಿ.ಪಿ ನಿಯಮಗಳ ಅನುಸಾರವೇ ಖರೀದಿಸಬೇಕೆಂದು ಸ್ಪಷ್ಟ ನಿರ್ದೇಶನವಿದ್ದರೂ ಸಹ ಅದರ ಮೂಲ ಉದ್ದೇಶದ ಉಲ್ಲಂಘನೆಯಾಗಿದೆ. ಮೇಲಿನ ಅಂಶಗಳಿಗೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ಭರಿಸಿದ ವೆಚ್ಚ ರೂ. 4,10,839.00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ನಿಯಮವನ್ನು ಕಟ್ಟು ನಿಟ್ಟಾಗಿ ಪಾಲಿಸಲಾಗುತ್ತಿದೆ. ಆದ್ದರಿಂದ ಈ ಆಡಿಟ್ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.
03	12	ಕಾಮಗಾರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಒದಗಿಸದಿರುವುದು:- ಪ್ರಸ್ತುತ ಸಾಲಿನಲ್ಲಿ ನೀಡಿದ ಎ.ಸಿ.ಬಿಲ್ಲಿನ ಮುಂಗಡಕ್ಕೆ ಪೂರಕವಾಗಿ ಸಲ್ಲಿಸಿರುವ ಎನ್.ಡಿ.ಸಿ ಬಿಲ್ಲುಗಳಲ್ಲಿ ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಒದಗಿಸಲು ತಿಳಿಸಿದೆ. 1) ಮೂಲ ಕಡತ. 2) ವಾರ್ಷಿಕ ಕ್ರಿಯಾಯೋಜನೆ/ಆಯವ್ಯಯದಲ್ಲಿನ ಅವಕಾಶ. 3) ಅಂದಾಜುಪಟ್ಟಿ/ಲೈನ್ ಎಸ್ಟಿಮೇಟ್. 4) ತಾಂತ್ರಿಕ/ಆಡಳಿತಾತ್ಮಕ ಅನುಮೋದನೆ. 5) ಟೆಂಡರ್ ಪ್ರಕಟಣೆ ವಿವರ. 6) ಷೆಡ್ಯುಲ್ ಬಿ/ಲೀಡಚಾರ್ಟ್‌ಮ್ಯಾಪ್. 7) ಕಾಮಗಾರಿ ಪ್ರಾರಂಭಿಸುವ /ಮುನ್ನ ಹಾಗೂ ನಂತರದ ವಸ್ತುಸ್ಥಿತಿಯ ಛಾಯಾ ಚಿತ್ರಗಳು 8) ವರ್ಕ ಅಡಕರ/ಅಗ್ರಿಮೆಂಟ್ ಪತ್ರ. 9) ಅಳತೆ ಪುಸ್ತಕ 10) ಗುಣನಿಯಂತ್ರಣ ಪ್ರಮಾಣಪತ್ರ 11) ಕೆಲವೊಂದು ಐಟಂಗಳನ್ನು ಎಸ್.ಆರ್.ನಲ್ಲಿರುವುದನ್ನು ಖಚಿತಪಡಿಸಿಕೊಂಡು ದರ ನಿಗದಿಪಡಿಸಿರುವ ದೃಢೀಕರಣ. 12) ಮೂಲದರ/ಪರಿಮಾಣವು ನಿಗದಿತವಾದ ಪರಿಮಾಣಕ್ಕಿಂತ ಶೇ. 125% ಮೀರಿರುವ ಹಿನ್ನಲೆಯಲ್ಲಿ ಅದಕ್ಕನುಗುಣವಾಗಿ ವರ್ಕ್‌ಸ್ಲಿಪ್ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ವಿವರ 13) ಶಾಸನಬದ್ಧ ತೆರಿಗೆಗಳನ್ನು ಕಟಾಯಿಸಿ ಸಂಬಂಧಪಟ್ಟ ಖಾತೆಗಳಿಗೆ ಜಮಾ ಮಾಡಿರುವ ಬಗ್ಗೆ. 14) ವಿಶ್ವವಿದ್ಯಾಲಯದ ಅಧಿನಿಯಮಕ್ಕೆ ಬಳಸಿದ್ದು ಪಿಡಬ್ಲ್ಯೂಡಿ ಕರಡು	ತನಿಖಾ ಸಮಯದಲ್ಲಿ, ಕಂಡಿಕೆಯಲ್ಲಿ ಸೂಚಿಸಲಾದ ಬಿಲ್ಲುಗಳಿಗೆ ಸಂಬಂಧಿಸಿದ ಎನ್.ಡಿ.ಸಿ ಬಿಲ್ಲುಗಳನ್ನು ಹಾಗೂ ಪೂರಕ ಬಿಲ್ಲುವಾರು ಪ್ರತ್ಯೇಕ ಕಡತಗಳನ್ನು ಪರಿಶೀಲನೆಗೆ ಸಲ್ಲಿಸಲಾಗಿದ್ದಿತು. ಎಲ್ಲಾ ದಾಖಲೆಗಳೂ ಸಹಾ ಲಭ್ಯವಿದ್ದು, ಈ ಆಕ್ಷೇಪಣಾ ಕಂಡಿಕೆಯಲ್ಲಿ ನಿಖರವಾದ ನ್ಯೂನ್ಯತೆಗಳನ್ನು ತಿಳಿಸಿಲ್ಲದಿರುವುದರಿಂದ, ಈ ಕಂಡಿಕೆಯಲ್ಲಿ ತಿಳಿಸಿದ ಅಂಶಗಳನ್ನು ಮುಂದಿನ ಲೆಕ್ಕ ತನಿಖೆಯಲ್ಲಿ ಪರಿಶೀಲಿಸಬಹುದಾಗಿದ್ದು, ಪ್ರಸ್ತುತ ಈ ಕಂಡಿಕೆಯನ್ನು ಈ ವರದಿಯಿಂದ ಕೈಬಿಡಲು ಕೋರಿದೆ. ಎ.ಸಿ.ಬಿಲ್ಲುಗಳ ಪಾವತಿ ವಿವರ ಕೆಳಕಂಡಂತಿವೆ. 1) ಎ.ಸಿ. ಬಿಲ್ ಸಂಖ್ಯೆ 04:- ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ 03.12.2013 ರನ್ವಯ ರೂ.1.18 ಲಕ್ಷಕ್ಕೆ ಅಂದಾಜು ತಯಾರಿಸಿ ಕಾಮಗಾರಿ ನಿರ್ವಹಿಸಿ ಅಳತೆ ಪುಸ್ತಕ ಸಂಖ್ಯೆ 07 ರ ಪುಟ ಸಂಖ್ಯೆ 72-73 ರಲ್ಲಿ ಅಳತೆ ದಾಖಲಿಸಿ ಗುತ್ತಿಗೆದಾರರಾದ ಶ್ರೀ ಸುರೇಶ್ ಕೆ.ವಿ. ರವರ ಬಿಲ್ಲು ರೂ.1,17,220/- ನ್ನು ಪಾವತಿಸಲಾಗಿದೆ. ಆದ್ದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ. 2) ಎ.ಸಿ. ಬಿಲ್ ಸಂಖ್ಯೆ 03:- ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ 26.11.2013 ರನ್ವಯ ರೂ. 2.50 ಲಕ್ಷಕ್ಕೆ ಅಂದಾಜು ತಯಾರಿಸಿ ಕಾಮಗಾರಿ ನಿರ್ವಹಿಸಿ ಅಳತೆ ಪುಸ್ತಕ ಸಂಖ್ಯೆ07 ಪುಟ ಸಂಖ್ಯೆ 03.ರಿಂದ10ರ ವರೆಗೆಅಳತೆ ದಾಖಲಿಸಿ ರೂ. 2,49,729/- ರ ಬಿಲ್ಲನ್ನು ಪಾವತಿಸಲಾಗಿದೆ. ಆದ್ದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ. 3) ಎ.ಸಿ. ಬಿಲ್ ಸಂಖ್ಯೆ 07:- ಈ ಐಟಂಗೆ ಸಂಬಂಧಿಸಿದಂತೆ ಭಾಗ-03 ಕಂಡಿಕೆ 8 ರಲ್ಲಿ ವಿವರಿಸಿ ರೂ.92800/- ನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಪುನಃ ಈ ಕಂಡಿಕೆ ಅದೇ ಐಟಂಗೆ ರೂ. 95000/- ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ ಕಂಡಿಕೆ 8 ಕ್ಕೆ ನೀಡಲಾದ ಉತ್ತರ ಪರಿಗಣಿಸಿ ಈ ಐಟಂ ಕೈಬಿಡಲು

ನಿಯಮಾವಳಿಯನ್ನು ಅಳವಡಿಸಿಕೊಂಡಿರುವ ಬಗ್ಗೆ.

ಎ.ಸಿ.ಬಿಲ್ಲು ಸಂಖ್ಯೆ	ಬಿ.ಆರ್.ಸಂಖ್ಯೆ ದಿನಾಂಕ	ಮೊತ್ತ
04	5552/13-14	1,18,000.00
03	5118/--"--	2,50,000.00
07	6030/--"--	95,000.00
05	5553/--"--	1,05,000.00
08	6029/--"--	90,000.00
06	5554/--"--	2,50,000.00
15	8537/--"--	1,50,000.00
16	8538/--"--	1,50,000.00
20.21	9001/--"-- 9012/--"--	5,00,000.00
64	11182/--"--	5,00,000.00
		22,08,000.00

ಮೇಲಿನ ವೋಚರುಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸುವವರೆಗೆ ರೂ.22,08,000.00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಕೋರಿದೆ.

4) ಎ.ಸಿ. **ಬಿಲ್ ಸಂಖ್ಯೆ 05:-** ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ 03.12.2013 ರನ್ವಯ ರೂ.1.05 ಲಕ್ಷಕ್ಕೆ ಅಂದಾಜು ತಯಾರಿಸಿ ಕಾಮಗಾರಿ ನಿರ್ವಹಿಸಿಅಳತೆ ಪುಸ್ತಕ ಸಂಖ್ಯೆ 08 ಪುಟ ಸಂಖ್ಯೆ 32-32 ರಲ್ಲಿ ಅಳತೆ ದಾಖಲಿಸಿ ಗುತ್ತಿಗೆದಾರರ ಬಿಲ್ಲು ರೂ.1,04,975/- ನ್ನು ಪಾವತಿಸಲಾಗಿದೆ, ಆದ್ದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ.

5) ಎ.ಸಿ. **ಬಿಲ್ ಸಂಖ್ಯೆ 08:-** OFRC ಮಂಜೂರಾತಿ ಸಂಖ್ಯೆ DR/UAHS /Sanction/139/2013-14 dt.31.12.2013 ರನ್ವಯ F Block ನಲ್ಲಿ ನೀರಾವರಿ ಬೆಳೆಗಳ ಪರೀಕ್ಷೆಗಾಗಿ 2 ಬೋರ್‌ವೆಲ್‌ಗಳನ್ನು ರೂ.48,900/- ಮತ್ತು ರೂ. 41,000/- ವೆಚ್ಚದಲ್ಲಿ ಎರಡು ಪ್ರತ್ಯೇಕ ಏಜೆನ್ಸಿಗಳಿಂದ ಬೋರ್‌ವೆಲ್ ಕೊರೆಸಿದ್ದು ಬಿಲ್ಲುಗಳನ್ನು ಪಾವತಿಸಲಾಗಿದೆ. ಆದ್ದರಿಂದ ಈ ಐಟಂ ಕೈಬಿಡಲು ಕೋರಿದೆ.

6) ಎ.ಸಿ. **ಬಿಲ್ ಸಂಖ್ಯೆ 06:-** ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ 03.12.2013 ರನ್ವಯ ರೂ.2.50 ಲಕ್ಷಕ್ಕೆ ಅಂದಾಜು ತಯಾರಿಸಿ ಕಾಮಗಾರಿ ನಿರ್ವಹಿಸಿಅಳತೆ ಪುಸ್ತಕ ಸಂಖ್ಯೆ 08 ಪುಟ ಸಂಖ್ಯೆ 14 ರಲ್ಲಿ ಅಳತೆ ದಾಖಲಿಸಿ ರೂ.2,49,632/-/- ನ್ನು ಪಾವತಿಸಲಾಗಿದೆ ಆದ್ದರಿಂದ ಈ ಐಟಂ ಕೈಬಿಡಲು ಕೋರಲಾಗಿದೆ.

7) ಎ.ಸಿ. **ಬಿಲ್ ಸಂಖ್ಯೆ 15:-** ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ 03.12.2014 ರನ್ವಯ ರೂ.1.50 ಲಕ್ಷಕ್ಕೆ ಅಂದಾಜು ತಯಾರಿಸಿ ಕಾಮಗಾರಿ ನಿರ್ವಹಿಸಿಅಳತೆ ಪುಸ್ತಕ ಸಂಖ್ಯೆ 08 ಪುಟ ಸಂಖ್ಯೆ 28-29 ರಲ್ಲಿ ಅಳತೆ ದಾಖಲಿಸಿ ಗುತ್ತಿಗೆದಾರರ ಬಿಲ್ಲು ರೂ.1,49,845/- ನ್ನು ಪಾವತಿಸಲಾಗಿದೆ, ಆದ್ದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ.

8) ಎ.ಸಿ. **ಬಿಲ್ ಸಂಖ್ಯೆ 16:-** ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ 03.12.2014 ರನ್ವಯ ರೂ.1.50 ಲಕ್ಷಕ್ಕೆ ಅಂದಾಜು ತಯಾರಿಸಿ ಕಾಮಗಾರಿ ನಿರ್ವಹಿಸಿಅಳತೆ ಪುಸ್ತಕ ಸಂಖ್ಯೆ 04 ಪುಟ ಸಂಖ್ಯೆ 24-25 ರಲ್ಲಿ ಅಳತೆ ದಾಖಲಿಸಿ ಗುತ್ತಿಗೆದಾರರ ಬಿಲ್ಲು ರೂ.1,98,874/- ನ್ನು ಪಾವತಿಸಲಾಗಿದೆ, ಆದ್ದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ.

9) (ಎ) ಎ.ಸಿ. **ಬಿಲ್ ಸಂಖ್ಯೆ 20:-**ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ.DR/UAHS/pond/368/213-14/ದಿನಾಂಕ: 04.03.2014 ರಲ್ಲಿ ರೂ. 250000/- ಕ್ಕೆ ಮಂಜೂರಾತಿ ನೀಡಲಾಗಿದೆ.

<table>
<tr>
<td></td>
<td></td>
<td></td>
<td>9(ಬಿ) ಎ.ಸಿ. ಬಿಲ್ ಸಂಖ್ಯೆ 21:– :–ವಿಶ್ವವಿದ್ಯಾಲಯದ ಮಂಜೂರಾತಿ ಆದೇಶ ಸಂಖ್ಯೆ.DR/UAHS/pond/369/213-14/ದಿನಾಂಕ: 12.03.2014 ರಲ್ಲಿ ರೂ. 250000/– ಕ್ಕೆ ಮಂಜೂರಾತಿ ನೀಡಲಾಗಿದೆ.

10) ಎ.ಸಿ. ಬಿಲ್ ಸಂಖ್ಯೆ 64:– ಮಂಜೂರಾತಿ ಆದೇಶ ಸಂಖ್ಯೆ 01.04.2014 ರನ್ವಯ Meteorological of servatory ಸಲಕರಣೆಗಳನ್ನು M/S Technology Insrtuments, Nashik ನಿಂದ 3 ಪ್ರತ್ಯೇಕ ಉಪಕರಣಗಳನ್ನು ರೂ. 50,288+59,906+54,028 ದರದಲ್ಲಿ ಕೊಟೇಷನ್ ಮೂಲಕ ಖರೀದಿಸಿ ಅಳವಡಿಸಿದ್ದು, ಹಾಗೂ ಉಪಕರಣಗಳ ಸುತ್ತಾ Chain link fencing ಅಳವಡಿಸಲು ರೂ. 1.00 ಲಕ್ಷ ಮೊತ್ತದ ಅಂದಾಜು ತಯಾರಿಸಿ ಕೊಟೇಷನ್ ಮೂಲಕ ದರಪಟ್ಟಿ ಕರೆದು ಕಾಮಗಾರಿ ನಿರ್ವಹಿಸಿ ಪಾವತಿಸಲಾಗಿದೆ. ಒಟ್ಟು ವೆಚ್ಚ 2,59,313/– ಆಗಿದ್ದು ಉಳಿದ ಮೊತ್ತ ರೂ.2,40,687/– ನ್ನು ದಿನಾಂಕ 27.05.2015 ರಂದು ಹಿಂತಿರುಗಿಸಲಾಗಿದೆ. ಆದ್ದರಿಂದ ಈ ಐಟಂ ಕೈಬಿಡಲು ಕೋರಿದೆ.</td>
</tr>
<tr>
<td>03</td>
<td>13</td>
<td>ವೈದ್ಯಕೀಯ ವೆಚ್ಚದ ಬಿಲ್ಲಿನ ಕುರಿತು:–
2013–14ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಲೆಕ್ಕ ತನಿಖಾ ವೇಳೆ ಸಾಮಾನ್ಯ ನಿಧಿಯ ಯೋಜನೆಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಚೆಕ್‌ನ ವೆಚ್ಚಕ್ಕೆ (ವೈದ್ಯಕೀಯ ವೆಚ್ಚದ) ಕುರಿತು ದಾಖಲಾತಿಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ. ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ದಿನಾಂಕ</th><th>ಚೆಕ್ ನಂಬರ್</th><th>ಪೋಚರ್ಸ್ ನಂ</th><th>ಬಿ.ಆರ್.ನಂ</th><th>ವಿವರ</th><th>ಮೊತ್ತ</th></tr>
<tr><td>1</td><td>18.09.2013</td><td>090545</td><td>81</td><td>1293</td><td>ಎನ್.ಎಂ. ಪೂನಚ್ಚ</td><td>2473.00</td></tr>
</table>
ಈ ಮೇಲ್ಕಂಡ ಚೆಕ್‌ನ ವೆಚ್ಚಕ್ಕೆ ದಾಖಲಾತಿಗಳನ್ನು ಹಾಜರುಪಡಿಸಲು ಲೆಕ್ಕತನಿಖಾ ವಿಚರಣಾ ಪತ್ರ ಸಂಖ್ಯೆ. 24/16–17 ದಿನಾಂಕ:23.03.2017ರಲ್ಲಿ ಕೋರಲಾಗಿದ್ದರೂ ಸಹ ವಿವರವನ್ನು ನೀಡದೇ ಇರುವುದರಿಂದ ರೂ. 2,473.00 ಗಳನ್ನು ಆಕ್ಷೇಪಣೆ ಸೂಚಿಸಿದೆ.</td>
<td>ಈ ಬಿಲ್ಲಿಗೆ ಸಂಬಂಧಿಸಿದಂತೆ Form C Rule 15(3) ರಲ್ಲಿ ನೀಡಲಾದ ವೈದ್ಯಕೀಯ ಮರುಪಾವತಿ ಅರ್ಜಿಯಲ್ಲಿ Form 15(1) ರಲ್ಲಿ ದೃಢೀಕರಿಸಲಾದ ಅಗತ್ಯತೆಯ ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ಬಿಲ್ಲಿಗೆ ಲಗತ್ತಿಸಲಾಗಿದೆ. ಇದರಲ್ಲಿ ರೂ. 2473/– ರ ಔಷಧಿಗಳನ್ನು ಪೊನ್ನಂಪೇಟೆಯ Pharmacutical (Adomet Accent Pharma) ದಿಂದ ಖರೀದಿಸಿದ ಮಾಹಿತಿ ಇರುತ್ತದೆ.
ಅಗತ್ಯತೆಯ ದೃಢೀಕರಣ ಪತ್ರದ ಆಧಾರದ ಮೇರೆಗೆ ಈ ಕಂಡಿಕೆ ಕೈಬಿಡಲು ಕೋರಿದೆ.</td>
</tr>
</table>

03	14	ಆಟದ ಮೈದಾನ ಅಭಿವೃದ್ಧಿ ಪಡಿಸಿರುವ ಕುರಿತು 2013–14ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ, ಸಾಮಾನ್ಯ ನಿಧಿಯ ಯೋಜನೆಯ ಕಡತಗಳನ್ನು ಪರಿಶೀಲಿಸಿದಾಗ, ಮೆ॥ ಶ್ರೀ ವೆಂಕಟಾದ್ರಿ ಅರ್ಥ್‌ಮೂವರ್ಸ್, ವೇದಾವತಿ ನಗರ, ಹಿರಿಯೂರು ರವರಿಗೆ ರೂ.92,400–00ಗಳನ್ನು ಕಾಲೇಜಿನ ಆಟದ ಮೈದಾನದ ಅಭಿವೃದ್ಧಿ ಪಡಿಸುವ ಸಲುವಾಗಿ ತೋಟಗಾರಿಕಾ ಕಾಲೇಜು ಹಿರಿಯೂರು ರವರು ಚೆಕ್ ನೀಡಿದ್ದು, ಅಭಿಯಂತರರು ಈ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸದೇ ಹಾಗೂ ಎಸ್. ಆರ್.ದರಗಳನ್ನು ಪಡೆಯದೇ ಬಿಲ್ಲು ಮೊತ್ತವನ್ನು ಪಾವತಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದ್ದು, ಚೆಕ್‌ನ ವಿವರ ಈ ಕೆಳಕಂಡಂತೆ ಇರುತ್ತದೆ. PDC Bill No -180 /2013-14/25-01-2014 BR NO-7518/12-02-2014 Chq No- 373067 ದಿನಾಂಕ 21–02–2014 ರೂ 92,400–00 ಈ ಮೇಲ್ಕಂಡ ಚೆಕ್‌ನ ವೆಚ್ಚಕ್ಕೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ 75/17–18 ದಿನಾಂಕ 2–5–2017 ರಲ್ಲಿ ಕೋರಲಾಗಿತ್ತು. ಯಾವುದೇ ಮಾಹಿತಿಯನ್ನು ಇಲ್ಲಿಯವರೆಗೂ ಲೆಕ್ಕ ತನಿಖೆಗೆ ನೀಡದ ಕಾರಣ ರೂ.92,400–00 ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.	ವಿಶ್ವವಿದ್ಯಾಲಯ ಹೊಸದಾಗಿ ಪ್ರಾರಂಭಗೊಂಡಿದ್ದು, ಆ ಸಮಯದಲ್ಲಿಯೇ ಮೊದಲನೇಯ ಅಂತರ ಮಹಾವಿದ್ಯಾಲಯ ಕ್ರೀಡಾಕೂಟವನ್ನು ಹಿರಿಯೂರು ತೋಟಗಾರಿಕೆ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಕ್ರೀಡಾಂಗಣ ಅಭಿವೃದ್ಧಿಗೊಳಿಸುವುದು ಅತ್ಯಂತ ತುರ್ತಾಗಿ ಅವಶ್ಯಕವಿದ್ದಿತು. ಈ ಸಂದರ್ಭದಲ್ಲಿ ಆಸ್ತಿಅಧಿಕಾರಿಗಳ ಹುದ್ದೆ ಭರ್ತಿ ಮಾಡಿಲ್ಲದ ಕಾರಣ, ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಅಭಿವೃದ್ಧಿಯ ತುರ್ತು ಅವಶ್ಯಕತೆಯನ್ನು ಪರಿಗಣಿಸಿ ದರಪಟ್ಟಿ ಕರೆದು ದಿನಾಂಕ:16.01.2014 ರಂದು ನಡೆದ ಖರೀದಿ ಸಮಿತಿಯಲ್ಲಿ ಅನುಮೋದನೆ ಪಡೆಯಲಾಗಿದೆ. ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶದ ಪ್ರಕಾರ, ಕೆಂಪು ಮಣ್ಣನ್ನು ಖರೀದಿಸಲಾಗಿದೆ. ಸದರಿ ಕಾಮಗಾರಿಯ ಮೊತ್ತ 1.00 ಲಕ್ಷ ಮೀರಿಲ್ಲವಾದ್ದರಿಂದ ಟೆಂಡರ್ ಕರೆಯದೇ ಸರ್ಕಾರದ ಸುತ್ತೋಲೆ ಸಂಖ್ಯೆ.PWD/513/FC-111/2001 ದಿ:29.10.2001ರ ಕ್ಲಾಜ 6(iii) (3) ರನ್ವಯ ದರ ಪಟ್ಟಿ ಪ್ರಕಾರ ಕ್ರಮ ವಹಿಸಿದೆ. ಆಟದ ಮೈದಾನ ಅಭಿವೃದ್ಧಿಗೊಳಿಸಲು ತುರ್ತಾಗಿ ಕ್ರಮ ಕೈಗೊಂಡಿರುವ ಕಾರಣ ಈ ಕಂಡಿಕೆ ಕೈಬಿಡಲು ಕೋರಿದೆ.
03	15	**FIRE WOOD** ಖರೀದಿಸಿರುವ ಬಗ್ಗೆ 2013–14ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ, ಸಾಮಾನ್ಯ ನಿಧಿಯ ಯೋಜನೆಯ ಕಡತಗಳನ್ನು ಪರಿಶೀಲಿಸಿದಾಗ 25 ಟನ್ ಫೈರ್ ವುಡ್‌ಗಳನ್ನು SFS, ZAHRS ನವಿಲೆ, ಶಿವಮೊಗ್ಗದವರು ರೂ. 30,000.00 ಗಳಿಗೆ ಖರೀದಿಸಲಾಗಿರುತ್ತದೆ ಇದರ ಚೆಕ್‌ನ ವಿವರ ಈ ಕೆಳಕಂಡಂತೆ ಇರುತ್ತದೆ PDC Bill No -44 /2013–14/27–01–2014 Che No- 373057 ದಿನಾಂಕ 21–02–2014 ರೂ 30,000–00 ಈ ಮೇಲ್ಕಂಡ ಚೆಕ್‌ನ ವೆಚ್ಚಕ್ಕೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:73/17–18ದಿನಾಂಕ: 2–5–2017ರಲ್ಲಿ ಯಾವ ಕಾರಣಕ್ಕಾಗಿ ಇಷ್ಟು ಪ್ರಮಾಣದ ಫೈರ್ ವುಡ್‌ಗಳ ಖರೀದಿ ಪ್ರಕಿಯೆ ಕೈಗೊಂಡಿರುವ ಬಗ್ಗೆ ಮಾಹಿತಿಯನ್ನು ಲೆಕ್ಕ ತನಿಖೆಗೆ ಒದಗಿಸುವಂತೆ ಕೋರಲಾಗಿತ್ತು. ಆದಾಗ್ಯೂ ಯಾವುದೇ ಮಾಹಿತಿಯನ್ನು ಲೆಕ್ಕ ತನಿಖೆಗೆ ಹಾಜರುಪಡಿಸದ ಕಾರಣ ರೂ. 30,000–00 ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.	ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ ನವಿಲೆಯಲ್ಲಿ, ಕೃಷಿ ಕ್ಷೇತ್ರದೊಳಗೆ ಲಭ್ಯವಿರುವ ಒಣ ಉರುವಲನ್ನು, ತಂಬಾಕು ಹದಗೊಳಿಸಲು, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಡಿಯಲ್ಲಿ ಬರುವ ತಂಬಾಕು ಹದಗೊಳಿಸುವ ವಿಭಾಗಕ್ಕೆ ರೂ. 30000/– ವೆಚ್ಚದಲ್ಲಿ ಖರೀದಿಸಲಾಗಿದೆ. ಹೊರ ಸಂಸ್ಥೆಯಿಂದ ಖರೀದಿಸದೇ, ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗೆ ಆದೇಶ ಸಂಖ್ಯೆ.84/2013–14 ದಿನಾಂಕ:17.01.2014 ರಲ್ಲಿ ಮಂಜೂರಾತಿ ನೀಡಿ,ಖರೀದಿ ಪ್ರಕ್ರಿಯೆ ಅನುಸರಿಸಿ ಕ್ರಮಕೈಗೊಂಡಿರುವುದರಿಂದ. ಈ ಕಂಡಿಕೆ ಕೈಬಿಡಲು ಕೋರಿದೆ.
03	16	ಔಷಧಗಳ ದಾಸ್ತಾನು ರಿಜಿಸ್ಟರನ್ನು ನಿರ್ವಹಿಸದಿರುವ ಕುರಿತು 2013–14 ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ, ಸಾಮಾನ್ಯ ನಿಧಿಯ ಯೋಜನೆಯ ಕಡತಗಳನ್ನು ಪರಿಶೀಲಿಸಿದಾಗ A.C.Bill No -03/2013–14 ದಿನಾಂಕ 16–09–2013 ಕ್ಕೆ ವಿರುದ್ಧವಾಗಿ NDC Bill No-03/13–14/18–03–2014 ರಲ್ಲಿ ವಿವರಗಳನ್ನು ಪಡೆಯಲಾಗಿದೆ. ಔಷಧಗಳ ಖರೀದಿ ಸಂಬಂಧ ಚೆಕ್ ನಂ.091923 ಮೊತ್ತ ರೂ.60,000–00ರಲ್ಲಿ ಕಾಲೇಜು ನವಿಲೆ, ಶಿವಮೊಗ್ಗ ಇವರಿಗೆ ಪಾವತಿಸಿದ್ದು, ಔಷಧಗಳ ದಾಸ್ತಾನು	ಔಷಧಗಳನ್ನು ಖರೀದಿಸಿದ ಬಗ್ಗೆ Day Book of Reciept ನಲ್ಲಿ ದಾಖಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ. 1) DRK ಎಂಟರ್ ಪ್ರೈಸಸ್ ಶಿವಮೊಗ್ಗ ಬಿಲ್ ನಂ. 60471 ದಿ:03.01.2014 ರೂ. 35741/– Day Book of Reciept ಪುಟ ಸಂಖ್ಯೆ 180 ರಿಂದ 183 2) ದಿನಕರ್ ಫಾರ್ಮ್ ಡಿಸ್ಟ್ರಿಬ್ಯೂಟರ್ಸ್ ಬಿಲ್ ನಂ. 12470/

<table>
<tr>
<td></td>
<td></td>
<td>ವಿವರಗಳನ್ನು ಲೆಕ್ಕತನಿಖೆಗೆ ಹಾಜರು ಪಡಿಸಿರುವುದಿಲ್ಲ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:33/17–18ದಿನಾಂಕ: 11–04–17ರಲ್ಲಿ ಕೋರಲಾಗಿತ್ತು. ಯಾವುದೇ ಸೂಕ್ತ ವಿವರವನ್ನು ಲೆಕ್ಕತನಿಖೆಗೆ ಹಾಜರುಪಡಿಸದ ಕಾರಣ ರೂ.60,000/– ಗಳನ್ನು ಆಕ್ಷೇಪಣೆ ಸೂಚಿಸಿದೆ.</td>
<td>03.01.2014 ರೂ.7284/– Day Book of Reciept ಪುಟ ಸಂಖ್ಯೆ 184
3) ಶ್ರೀನಿವಾಸ ಸ್ಪೋರ್ಟ್ಸ ಶಿವಮೊಗ್ಗ ಬಿಲ್ ನಂ 1370/06.01.2014 ರೂ.16975/– Day Book of Reciept ಪುಟ ಸಂಖ್ಯೆ 184 ರಿಂದ 187
ಸದರಿ ಔಷಧಗಳ ಸ್ವೀಕೃತಿಯನ್ನು Day Book of Reciept ವಹಿಯಲ್ಲಿ ನಮೂದಿಸಿರುವುದರಿಂದ. ಈ ಕಂಡಿಕೆ ಕೈಬಿಡಲು ಕೋರಿದೆ.</td>
</tr>
<tr>
<td>03</td>
<td>17</td>
<td><u>ಜೆ.ಸಿ.ಬಿ. ವಾಹನದಲ್ಲಿ ಮಾಡಿದ ಕಾಮಗಾರಿಗೆ ಎಸ್.ಆರ್.ದರ ಹಾಗೂ ಅಂದಾಜು ಪಟ್ಟಿಯನ್ನು ಪಟ್ಟಿಯದೇ ಇರುವ ಬಗ್ಗೆ.</u>
2013–14ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ, ಸಾಮಾನ್ಯ ನಿಧಿಯಡಿ ಯೋಜನೆಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದಾಗ, ಜೆ.ಸಿ.ಬಿ.ಯಿಂದ ಭೂಮಿ ಕೆಲಸವನ್ನು ನಿರ್ವಹಿಸಲು ಈ ಕೆಳಕಂಡ ವಿಜೆನ್ಸಿಗಳಿಗೆ ಕಾರ್ಯದೇಶ ನೀಡಿದ್ದು, ಯಾವುದೇ ರೀತಿಯಾದ ಅಂದಾಜು ಪಟ್ಟಿ/ಎಸ್.ಆರ್ ದರಗಳನ್ನು ಪಡೆಯದೇ ಹಣವನ್ನು ಪಾವತಿಸಿರುವುದು ಲೆಕ್ಕ ತನಿಖೆಯಿಂದ ಕಂಡು ಬಂದಿರುತ್ತದೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಮ ಸಂಖ್ಯೆ</th><th>ವಿಜೆನ್ಸಿ ಹೆಸರು</th><th>ವಿವರ</th><th>ಚೆಕ್ ನಂಬರ್</th><th>ದಿನಾಂಕ</th><th>ಮೊತ್ತ</th></tr>
<tr><td>1</td><td>ಮೆ॥ ಮಾತಾ ಅರ್ಥ್ ವರ್ಕರ್ಸ್,ಹಿರಿಯೂರು</td><td>ಜೆ.ಸಿ.ಬಿಯಿಂದ 1100 ಗುಂಡಿಗಳನ್ನು ಸಸಿ ನೆಡುವ ಸಂಬಂಧ ಮಾಡಿಸಿದ್ದು(ZAHRS),ಹಿರಿಯೂರು</td><td>373199</td><td>24.02.2014</td><td>1,19,690–00</td></tr>
<tr><td></td><td></td><td>ಒಟ್ಟು</td><td></td><td></td><td>1,19,60–00</td></tr>
</table>
ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:108/109(ಎ) ರಲ್ಲಿ ಸೂಕ್ತ ವಿವರಣೆಯನ್ನು ಲೆಕ್ಕತನಿಖೆಗೆ ಹಾಜರು ಪಡಿಸಲು ಕೋರಲಾಗಿತ್ತು. ಆದಾಗ್ಯೂ ಯಾವುದೇ ವಿವರಣೆಯನ್ನು ಲೆಕ್ಕ ನೀಡದ ಕಾರಣ ರೂ. 1,19,690–00 ಗಳನ್ನು ಆಕ್ಷೇಪಣೆ ಸೂಚಿಸಿದೆ.</td>
<td>ಜೆ.ಸಿ.ಬಿ. ವಾಹನದಲ್ಲಿ ಮಾಡಿದ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದೆ. ಹಾಗೂ ದರವನ್ನು ಗಂಟೆ ಆಧಾರದ ಮೇಲೆ ಲೆಕ್ಕ ಮಾಡಿ ಅಂದಾಜನ್ನು ತಯಾರಿಸಿದ್ದು, ಅದನ್ನು ಪರಿಶೀಲಿಸಬಹುದಾಗಿದೆ. ಪಾವತಿಸಿದ ದರವು ಎಸ್.ಆರ್ ದರಕ್ಕಿಂತ ಕಡಿಮೆ ಇದ್ದು, ಕೊಟೇಷನ್ ಮೂಲಕ ನಿರ್ವಹಣೆ ಮಾಡಿರುವುದರಿಂದ ವಿಶ್ವವಿದ್ಯಾಲಯಕ್ಕೆ ಉಳಿತಾಯವಾಗಿರುತ್ತದೆ. ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.</td>
</tr>
<tr>
<td>03</td>
<td>18</td>
<td><u>ಕೆ.ಟಿ.ಪಿ.ಪಿ ನಿಯಮವನ್ನು ಪಾಲಿಸದಿರುವ ಬಗ್ಗೆ.</u>
2013–14 ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಾಮಾನ್ಯ ನಿಧಿಯ ಯೋಜನೆಯ ಕಡತಗಳನ್ನು ಪರಿಶೀಲಿಸಲಾಗಿ, ವಸ್ತುಗಳ ಖರೀದಿಯ ಒಟ್ಟು ಮೌಲ್ಯ 1 ಲಕ್ಷಕ್ಕಿಂತ ಹೆಚ್ಚಾಗಿದ್ದರೂ ಸಹ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಬಿಲ್ಲಿನ ಮೊತ್ತವನ್ನು ವಿಭಜಿಸಿ ಕೋಟೇಶನ್ ಮೂಲಕ ಖರೀದಿ ಮಾಡಿರುವ ಪ್ರಕ್ರಿಯೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಸೆಕ್ಷನ್ 2 (ಬಿ) ರನ್ವಯ ಆಕ್ಷೇಪಣೆಯವಾಗಿರುತ್ತದೆ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:110/2017–18 ದಿನಾಂಕ 09–05–2017ರಲ್ಲಿ ಸೂಕ್ತ</td>
<td><u>ಕೆ.ಟಿ.ಪಿ.ಪಿ ನಿಯಮವನ್ನು ಪಾಲಿಸದಿರುವ ಬಗ್ಗೆ.</u>
ವಿಶ್ವವಿದ್ಯಾಲಯದ ಪ್ರಾರಂಭದ ಹಂತದಲ್ಲಿ ನಿರ್ದೇಶನಾಲಯಗಳ ಮುಖ್ಯಸ್ಥರ ಕಛೇರಿಗಳಿಗೆ ಮತ್ತು ಕೊಠಡಿಗಳಿಗೆ ಅಗತ್ಯ ಪೀಠೋಪಕರಣ ಹಾಗೂ ವಿದ್ಯುತ್ ಉಪಕರಣಗಳ ಖರೀದಿ ಹಾಗೂ ಛೇಂಬರ್‌ಗಳ ಸ್ಥಾಪನೆ (Alluminium Partition) ಮಾಡುವುದು ಅವಶ್ಯಕವಿತ್ತು. ಅದರಂತೆ ವಿವಿಧ ವಿಭಾಗಗಳ ಬೇಡಿಕೆ ಅಗತ್ಯಕ್ಕನುಗುಣವಾಗಿ ಬೇರೆ ಬೇರೆ ದಿನಾಂಕಗಳಲ್ಲಿ ಪ್ರತ್ಯೇಕವಾಗಿ ಖರೀದಿಗಳನ್ನು ಮತ್ತು ಅಲ್ಯುಮಿನಿಯಂ</td>
</tr>
</table>

		ಕಾರಣವನ್ನು ನೀಡಲು ಕೋರಲಾಗಿತ್ತು. ಆದಾಗ್ಯೂ ಯಾವುದೇ ವಿವರಣೆಯನ್ನು ಲೆಕ್ಕತನಿಖೆಗೆ ಹಾಜರುಪಡಿಸದ ಕಾರಣ ರೂ.13,15,657/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು *ಅನುಬಂಧ–4* ರಲ್ಲಿ ತೋರಿಸಿದೆ.	ಪಾರ್ಟಿಷನ್ ಮಾಡಲಾಗಿದೆ ಹಾಗೂ ಬಿಲ್ಲುಗಳು ಅದರಂತೆ ಪ್ರತ್ಯೇಕವಾಗಿ ಪಾವತಿಗೆ ಸ್ವೀಕೃತಿಯಾಗಿವೆ. ಆದ್ದರಿಂದ ಈ ರೀತಿ ಮಾಡಲಾದ ಖರೀದಿಗಳು ಮತ್ತು ಅಲ್ಯುಮಿನಿಯಂ ಪಾರ್ಟಿಷನ್ ಕಾಮಗಾರಿಗಳ ಬಿಲ್ಲುಗಳು ಒಂದು ಲಕ್ಷದೊಳಗೆ ಇದ್ದು ಕೆ.ಟಿ.ಪಿ.ಪಿ ನಿಯಮಾನುಸಾರ ದರಪಟ್ಟಿ ಕರೆದು ಖರೀದಿಸಿದ ಪ್ರಕರಣವಾಗಿರುತ್ತದೆ. ಪ್ರಸಕ್ತ ಕೆಟಿಪಿಪಿ ನಿಯಮವನ್ನು ಪಾಲನೆ ಮಾಡುತ್ತಿರುವುದನ್ನು ಪರಿಗಣಿಸಿ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
03	19	**ಕಾಮಗಾರಿಯ ಅಳತೆ ಪುಸ್ತಕ ದಾಖಲಿಸಿರುವ ಬಗ್ಗೆ** 2013–14 ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ CI ತರಹದ ವಸತಿ ಗೃಹಗಳ ವಾರ್ಷಿಕ ನಿರ್ವಹಣಾ ಕಾಮಗಾರಿಯನ್ನು ಗುತ್ತಿಗೆದಾರರಾದ ಮಂಜುನಾಥ್ ಡಿ.ಜಿ ರವರಿಗೆ ಗುತ್ತಿಗೆ ಕರಾರು ಸಂಖ್ಯೆ ದಿನಾಂಕ 03.01.2014 ರಂದು ರೂ. 54,000/– ಮೊತ್ತಕ್ಕೆ ವಹಿಸಲಾಗಿದ್ದು, ಸದರಿ ಕಾಮಗಾರಿ ಅಳತೆಗಳನ್ನು ಅಳತೆ ಪುಸ್ತಕ ಸಂಖ್ಯೆ 6ರಲ್ಲಿ ಪುಟ ಸಂಖ್ಯೆ 13 ಮತ್ತು 14 ರಲ್ಲಿ ದಾಖಲಿಸಿದ್ದು, ಐಟಂ ಸಂಖ್ಯೆ 4.5.6.7 ರಲ್ಲಿ ಅಳತೆಗಳನ್ನು ಅಳತೆ ಪುಸ್ತಕ ಸಂಖ್ಯೆ 916ರಲ್ಲಿ ಪುಟ ಸಂಖ್ಯೆ 45ರಲ್ಲಿ ದಾಖಲಿಸಿರುವುದಾಗಿ ಉಲ್ಲೇಖಿಸಿದ್ದು, ಅಳತೆ ಪುಸ್ತಕ ಸಂಖ್ಯೆ 916ನ್ನು ಪರಿಶೀಲಿಸಲಾಗಿ ಪರಿಮಾಣಗಳು ತಾಳೆಯಾಗಿರುತ್ತದೆ. ಆದರೆ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರು, ಕಾಮಗಾರಿಗಳು ಬೇರೆ ಬೇರೆಯಾಗಿದ್ದು 1987–88 ರಲ್ಲಿ ದಾಖಲಿಸಿದ ಅಳತೆಗಳನ್ನು ಅಳತೆ ಪುಸ್ತಕ ಸಂಖ್ಯೆ 06 ರಲ್ಲಿ ಅಳತೆಗಳನ್ನು ದಾಖಲಿಸದೆ ಬೇರೆ ಕಾಮಗಾರಿಯ ಅಳತೆಗಳನ್ನು ಉಲ್ಲೇಖಿಸಿರುವುದು ಲೆಕ್ಕ ತಪಾಸಣೆಯಲ್ಲಿ ಕಂಡುಬಂದಿದ್ದು, ಈ ಕುರಿತು ಆಕ್ಷೇಪಣಾ ಪತ್ರ ಸಂಖ್ಯೆ 48/17–18 ದಿನಾಂಕ:17.04.2017 ರಲ್ಲಿ ಸೂಕ್ತ ಸಮಜಾಯಿಸಿ ನೀಡಲು ಕೋರಲಾಗಿತ್ತು. ಆದಾಗ್ಯೂ ಯಾವುದೇ ವಿವರಣೆಯನ್ನು ಲೆಕ್ಕ ತಪಾಸಣೆಗೆ ನೀಡದೆ ಇರುವುದರಿಂದ ಸದರಿ ಕಾಮಗಾರಿಗೆ ಪಾವತಿಸಿರುವ ರೂ.51,914/– (ಚೆಕ್ ಸಂಖ್ಯೆ. 373132/25.02.2014) ಮೊತ್ತವನ್ನು ಆಕ್ಷೇಪಣೆ ಎಂದು ಪರಿಗಣಿಸಿದೆ.	ಅಳತೆ ಪುಸ್ತಕ ಸಂಖ್ಯೆ SMB 916 ರಲ್ಲಿ ಪುಟ ಸಂಖ್ಯೆ 29 ರಿಂದ 50ರಲ್ಲಿ ಪ್ರಾದೇಶಿಕ ಸಂಶೋಧನಾ ಕೇಂದ್ರ (RRS) ನವುಲೆಯಲ್ಲಿ ಎ–1, ಬಿ–1, ಬಿ–2, ಬಿ–3, ಸಿ–1, ಡಿ–1, ಇ–1 Staff Quarters ನಿರ್ಮಾಣದ ಸಂದರ್ಭದಲ್ಲಿ ಮೂಲ ಅಳತೆಯನ್ನು ದಾಖಲಿಸಿದ್ದು ಇದು Standard Measurement ಆಗಿರುತ್ತದೆ. ನಂತರ ವಾರ್ಷಿಕ ದುರಸ್ತಿ ಮಾಡುವ ಸಂದರ್ಭದಲ್ಲಿ ಮೂಲ ಅಳತೆಯ ಪರಿಮಾಣವನ್ನು ಉಲ್ಲೇಖಿಸಿ ಅದೇ ಪರಿಮಾಣಕ್ಕೆ (ಅಳತೆ) ಪಾವತಿ ಮಾಡುವ ಕ್ರಮವಿರುತ್ತದೆ. SMB 916 ರ ಪುಟ ಸಂಖ್ಯೆ 42 ರಿಂದ 45 ರಲ್ಲಿ C-1Type ವಸತಿಗೃಹದ ಅಳತೆಯನ್ನು ದಾಖಲಿಸಿದ್ದು, ಅದೇ ಅಳತೆಯನ್ನು ಪರಿಗಣಿಸಿ ಅಳತೆ ಪುಸ್ತಕ ನಂ.06 ರ ಪುಟ ಸಂಖ್ಯೆ 13–14 ರಲ್ಲಿ C-1Type ವಸತಿ ಗೃಹದ ವಾರ್ಷಿಕ ದುರಸ್ತಿ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಾದ ಶ್ರೀ D.G. ಮಂಜುನಾಥ ರವರಿಗೆ ಪಾವತಿಸಲಾಗಿದೆ. ಮೂಲ ಅಳತೆಯ ದಾಖಲೆಯ ಪ್ರಕಾರ ಬದಲಾಗದೇ ಇರುವ ಐಟಂ ನಂ.4.5.6.7 ರ ಅಳತೆಯನ್ನು, ಅಳತೆ ಪುಸ್ತಕದಲ್ಲಿ ದಾಖಲಿಸಿ ಜೆಕ್ ನಂ. 373132/25.02.2014 ರ ಪ್ರಕಾರ ರೂ. 51914/– ನ್ನು ಪಾವತಿಸಲಾಗಿದ್ದು ಇದರಲ್ಲಿ ಯಾವುದೇ ನ್ಯೂನ್ಯತೆಗಳು ಇರುವುದಿಲ್ಲ. ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
03	20	**ಇ– ಟೆಂಡರ್ ಮೂಲಕ ಕಾಮಗಾರಿ ಗುತ್ತಿಗೆ ವಹಿಸದೆ ಮ್ಯಾನುಯಲ್ ಮೂಲಕ ಗುತ್ತಿಗೆ ವಹಿಸಿರುವ ಬಗ್ಗೆ:** 2013–14ನೇ ಸಾಲಿನಲ್ಲಿ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಕೈಗಾರಿಕೆ ಮತ್ತು ತೋಟಗಾರಿಕಾ ವಸ್ತು ಪ್ರದರ್ಶನಕ್ಕೆ ಶಾಮಿಯಾನ ಮತ್ತು ಇತರೆ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಮೆಹರ್ ವಾಡ್ & ಸನ್ಸ್‌ರವರಿಗೆ ರೂ.14,06533.00 ಮೊತ್ತಕ್ಕೆ ವಹಿಸಲಾಗಿರುತ್ತದೆ. 2013–14ನೇ ಸಾಲಿನ ಟೆಂಡರ್ ನಿಯಮಾನುಸಾರ ಟೆಂಡರ್ ಮೂಲಕ ಕಾಮಗಾರಿಯ ಗುತ್ತಿಗೆ ಕರೆಯಬೇಕಾದಲ್ಲಿ ರೂ.5,00,000–00 ಮೀರಿದ ಮೊತ್ತಕ್ಕೆ ಈ ಟೆಂಡರ್ ಮೂಲಕ ಗುತ್ತಿಗೆ ಆಹ್ವಾನಿಸಬೇಕಾಗಿದ್ದು, ಮ್ಯಾನುಯಲ್ ಟೆಂಡರ್ ಮೂಲಕ ಕಾಮಗಾರಿಯ ಟೆಂಡರ್ ಕರೆದು ಸದರಿಯವರಿಗೆ ರೂ.11,75,000–00 ಮೊತ್ತಕ್ಕೆ	ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು 2013–14 ನೇ ಸಾಲಿನಲ್ಲಿ ನೂತನವಾಗಿ ಪ್ರಾರಂಭಗೊಂಡಿದ್ದು ಹಾಗೂ ಕೃಷಿ ಮೇಳದ ದಿನಾಂಕವನ್ನು ತುರ್ತಾಗಿ ನಿಗದಿಪಡಿಸಿದ್ದರಿಂದ ಆ ಸಮಯದಲ್ಲಿ ವಿಶ್ವವಿದ್ಯಾಲಯದಿಂದ ಇ– ಟೆಂಡರ್ ಪೋರ್ಟಲ್‌ಗೆ ನಿಯಾಮಾನುಸಾರ ನೋಂದಣಿಯಾಗಿರಲಿಲ್ಲ ಮತ್ತು ತುರ್ತಾಗಿ ಕೃಷಿ ಮೇಳ ಕಾರ್ಯಕ್ರಮಕ್ಕೆ ಟೆಂಡರ್ ಕರೆಯಲೇ ಬೇಕಾಗಿದ್ದರಿಂದ ಮ್ಯಾನುಯಲ್ ಟೆಂಡರ್ ಮೂಲಕ ಕಾಮಗಾರಿಯ ಟೆಂಡರ್ ಕರೆದು ಕಾಮಗಾರಿಯನ್ನು ವಹಿಸಿಕೊಡಲಾಗಿದೆ. ಆನಂತರದ ದಿನಗಳಲ್ಲಿ ಎಲ್ಲಾ ಟೆಂಡರ್‌ಗಳನ್ನು ಇ–ಟೆಂಡರ್ ನಿಯಮಾನುಸಾರ ನೋಂದಣಿಯಾಗಿ, ಇ–ಟೆಂಡರ್‌ಗಳನ್ನು ಕರೆಯಲಾಗುತ್ತಿದೆ.

		ಚೆಕ್ ಸಂಖ್ಯೆ 285512/13-11-13ರಲ್ಲಿ ಚೆಕ್ ನೀಡಲಾಗಿದೆ.ಈ ಕುರಿತು ಆಕ್ಷೇಪಣಾ ಪತ್ರ ಸಂಖ್ಯೆ 12/16-17 ದಿನಾಂಕ 15-3-17ರಲ್ಲಿ ಸದರಿ ಕಾಮಗಾರಿಗೆ ಸಂಬಂಧಿಸಿದ ಕಡತಗಳನ್ನು ಒದಗಿಸಲು ಕೋರಲಾಗಿತ್ತು. ಆದಾಗ್ಯೂ ದಾಖಲೆಗಳನ್ನು ಲೆಕ್ಕ ತಪಾಸಣೆಗೆ ನೀಡಿರುವುದಿಲ್ಲ. ಇದರಿಂದ ಗುತ್ತಿಗೆ ನಿಯಮ ಮೀರಿದಂತಾಗಿರುತ್ತದೆ. ಆದ್ದರಿಂದ ರೂ. 11,75,000-00 ಮೊತ್ತವನ್ನು ಅಕ್ಷೇಪಣೆ ಎಂದು ಪರಿಗಣಿಸಲಾಗಿದೆ.	ಗುತ್ತಿಗೆದಾರರಾದ ಮೆ.ಮೆಹೆರ್‌ವಾಡೆ & ಸನ್ಸ್‌ರವರು ರೂ. 14,06,533/- ಗಳನ್ನು ದರ ಕೋಟ್ ಮಾಡಿದ್ದರೂ ಕೂಡ ದರ ಸಂಧಾನಗೊಳಿಸಿ ರೂ.11,75,000/- ಗಳನ್ನು ಮಾತ್ರ ಪಾವತಿಸಲಾಗಿದೆ. ಇದರಿಂದ ರೂ.2,31,533/- ವಿಶ್ವವಿದ್ಯಾಲಯಕ್ಕೆ ಉಳಿತಾಯ ಆಗಿರುತ್ತದೆ. ಆದುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.
03	21	<u>ಬೋರ್ ವೆಲ್ ಕಾಮಗಾರಿಗೆ ಕೋಟೇಶನ್ ಮೂಲಕ ಬಿಲ್ ಪಾವತಿಸಿರುವ ಬಗ್ಗೆ:-</u> 2013-14ನೇ ಸಾಲಿನಲ್ಲಿ ಸಾಮಾನ್ಯ ನಿಧಿ ಖಾತೆಯಲ್ಲಿ ತೋಟಗಾರಿಕೆ ಸಂಶೋಧನಾ ಕೇಂದ್ರ, ಬಬ್ಬೂರು ಫಾರಂ ಹಿರಿಯೂರು ಕೇಂದ್ರದಲ್ಲಿ ಸರ್ವೆ ನಂ.164 ಮತ್ತು 508.230,264 ರಲ್ಲಿ 4 ಬೋರ್‌ವೆಲ್‌ಗಳನ್ನು ಕೊರೆಯುವ ಕಾಮಗಾರಿಗಳನ್ನು ಜಲನಿಧಿ ಬೋರವೆಲ್‌ರವರಿಗೆ ಕ್ರಮವಾಗಿ 54985-00 ಮತ್ತು 55950-00 ಕೋಟೇಷನ್ ಮೂಲಕ ಕಾಮಗಾರಿ ನೀಡಿದ್ದು, ಸದರಿ ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಿ ಚೆಕ್ ಸಂಖ್ಯೆ 282113/7-1-14 ರಂದು ಪಾವತಿ ಮಾಡಲಾಗಿದೆ. ಸದರಿ ಕಾಮಗಾರಿಯ ಮೊತ್ತ ರೂ 1,00,000/- ಮೀರಿರುವುದರಿಂದ ಗುತ್ತಿಗೆ ಆಧಾರದ ಮೇಲೆ ಟೆಂಡರ್ ಮೂಲಕ ಕಾಮಗಾರಿಯನ್ನು ನಿರ್ವಹಿಸಬೇಕಾಗಿದ್ದು, ಟೆಂಡರ್ ನಿಯಮ ಮೀರಿ ಪಾವತಿಸಿರುವುದರಿಂದ ರೂ.1,10,936/- ಮೊತ್ತವನ್ನು ಆಕ್ಷೇಪಣೆ ಎಂದು ಪರಿಗಣಿಸಿದೆ. ಈ ಕುರಿತು ಆಕ್ಷೇಪಣಾ ಪತ್ರ ಸಂಖ್ಯೆ 55/17-18 ದಿನಾಂಕ 20-4-17 ರಂದು ಸೂಕ್ತ ಮಾಹಿತಿ ನೀಡಲು ಕೋರಲಾಗಿರುತ್ತದೆ.ಆದಾಗ್ಯೂ ಯಾವುದೇ ಮಾಹಿತಿ ನೀಡಿರುವುದಿಲ್ಲ.	ಹಿರಿಯ ಕ್ಷೇತ್ರಾದೀಕ್ಷಕರು, ವಲಯ ಕೃಷಿ ಮತ್ತು ಸಂಶೋಧನಾ ಕೇಂದ್ರ, ಹಿರಿಯೂರು ಒಣವಲಯ-4 ವರ್ಗಕ್ಕೆ ಸೇರಿದ್ದು, ನೀರಿನ ತೀವ್ರಕೊರತೆ ಹಿನ್ನೆಲೆಯಲ್ಲಿ ಡಿಸೆಂಬರ್ 2013 ರಲ್ಲಿ ಬೆಳೆದ ಹಿಂಗಾರು ಬೆಳೆಗಳನ್ನು ಸಂರಕ್ಷಿಸಬೇಕಾಗಿದ್ದರಿಂದ, ಟೆಂಡರ್ ಕರೆಯುವ ಪ್ರಕ್ರಿಯೆ ಕೈಗೊಂಡಿದ್ದಲ್ಲಿ ವಿಳಂಭವಾಗಿ ಫಸಲು ನಾಶವಾಗುವ ಸಂಭವವಿದ್ದಿದ್ದರಿಂದ, ದರಪಟ್ಟಿ ಕರೆದು ಬೋರ್‌ವೆಲ್ ಕೊರೆಸಲಾಗಿದೆ. ಹಾಗೂ ಕೇಂದ್ರದ ಡೈರಿ ವಿಭಾಗಕ್ಕೆ, ವಸತಿ ಗೃಹಗಳಿಗೆ, ಕೃಷಿ ವಿಜ್ಞಾನ ಕೇಂದ್ರಕ್ಕೆ ಮತ್ತು ಅಖಿಲ ಭಾರತ ಸುಸಂಘಟಿತ ಹರಳು ಮತ್ತು ಶೇಂಗಾ ಜೋಳದ ಬೆಳೆಗಳ ಪ್ರಾತ್ಯಕ್ಷತೆಯಡಿ ಬೆಳೆ ಅಭಿವೃದ್ಧಿಪಡಿಸಲು ನೀರಿನ ತೀವ್ರತರ ಕೊರತೆ ಇದ್ದ ಕಾರಣ ಹಾಗೂ ಟೆಂಡರ್ ಕರೆಯಲು ಕಾಲಾವಕಾಶ ಸಾಲದಿದ್ದರಿಂದ, ತುರ್ತಾಗಿ ಬೋರ್‌ವೆಲ್ ಕೊರೆಸಬೇಕಾಗಿದ್ದರಿಂದ, ದರಪಟ್ಟಿ ಆಧಾರದ ಮೇಲೆ ಬೇರೆ ಬೇರೆ ತಾಕುಗಳಲ್ಲಿ ಬೋರ್‌ವೆಲ್ ಕೊರೆಯಿಸಲು ಆದೇಶಿಸಲಾಗಿತ್ತು. ಇನ್ನು ಮುಂದೆ ಈ ರೀತಿಯ ನ್ಯೂನ್ಯತೆ ಆಗದಂತೆ ಎಚ್ಚರಿಕೆ ವಹಿಸಲಾಗುವುದು. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.
03	22	<u>ಸಾಮಗ್ರಿ ವಿವರಣೆ ಇಲ್ಲದಿರುವುದು:-</u> ಆದೇಶ ಸಂಖ್ಯೆ 139 ದಿನಾಂಕ 23-05-2017 RKVY 8413/353 ರೂ 39,940/- Phenomatic ಟೈರ್ ಮತ್ತು ಟ್ಯೂಬ್ಸ್ ಹಾಗೂ DISC 2 ಸಂಖ್ಯೆ ಖರೀದಿ ಮಾಡಿರುತ್ತಾರೆ. ಆದರೆ ಈ ಸಾಮಾಗ್ರಿಗಳ ವಿವರಣೆ Log ಪಸ್ತಕದಲ್ಲಿ, ಯಾವುದೇ ದಾಸ್ತಾನು ಪುಸ್ತಕದಲ್ಲಿ ಲೆಕ್ಕ ಪರಿಶೋಧನಾ ಸಂಸ್ಥೆಯ ದಾಖಲೆಗಳಲ್ಲಿ ಕಂಡು ಬಂದಿರುವುದಿಲ್ಲ. ಅದಕಾರಣ ರೂ 39,940/- ಆಕ್ಷೇಪಣೆಯಲ್ಲಿಡಲಾಗಿದೆ.	ಹಿರಿಯ ಕ್ಷೇತ್ರ ಅಧೀಕ್ಷಕರು, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಹಿರಿಯೂರು ಇವರು ಸೂಪರ್ ಟೈರ್ಸ್, ಬೆಂಗಳೂರು ಇವರಿಂದ ಬಿಲ್ ನಂ.9915/14.08.2014ರ ಪ್ರಕಾರ ಎರಡು Phenomatic ಟೈರ್ & ಟ್ಯೂಬ್ಸ್ ಅನ್ನು ರೂ.39940/- ರ ವೆಚ್ಚದಲ್ಲಿ ಖರೀದಿಸಲಾಗಿದ್ದು, RKVY ಸ್ಟಾಕ್ ರಿಜಿಸ್ಟರ್ ಪುಟ ಸಂಖ್ಯೆ 13 ಮತ್ತು DBR ಪುಟ ಸಂಖ್ಯೆ 218/14.8.2014 ರಲ್ಲಿ ಲೆಕ್ಕಿಸಿರುವುದಾಗಿ ದೃಡೀಕರಿಸಿರುತ್ತಾರೆ. ಈ ಟೈರನ್ನು ಶೇಂಗಾ ಬೆಳೆಯ ಸಂರಕ್ಷಣೆಗಾಗಿ ಔಷಧ ಸಿಂಪಡಿಸುವ ಯಂತ್ರಕ್ಕಾಗಿ ಉಪಯೋಗಿಸಲು (Used for interculrural operations and Bhoom spreying equipments only for farmars from the custum hiring centre (12''row) spacing of ground nets crops etc) ಖರೀದಿಸಿದ್ದು, ವಿಶ್ವವಿದ್ಯಾಲಯದ ಟ್ರಾಕ್ಟರಿಗೆ ಅಳವಡಿಸಿಲ್ಲದ ಕಾರಣ, ಲಾಗ್ ಪುಸ್ತಕದಲ್ಲಿ ಎಂಟ್ರಿ ಮಾಡಿರುವುದಿಲ್ಲ. ದಾಸ್ತಾನು ಪುಸ್ತಕದಲ್ಲಿ ಬರೆದಿರುವುದನ್ನು ಪರಿಗಣಿಸಿ ಈ ಕಂಡಿಕೆ ಕೈಬಿಡಲು ಕೋರಿದೆ.

<table>
<tr>
<td>03</td>
<td>23</td>
<td>ಸಿಂಗಲ್ ಬಿಡ್ದಾರರಿಗೆ ಖರೀದಿ ಪ್ರಕ್ರಿಯೆಯಲ್ಲಿ ಅವಕಾಶ ನೀಡಿರುವುದು:–
ಬಹಿರಂಗ ಪ್ರಕಟಣೆ ಕ್ರಿಯೆ 1999 ಮತ್ತು ನಿಯಮಗಳ ವಿತರಣೆ Dec 2002 ಕರ್ನಾಟಕ ಸರ್ಕಾರ. ಯಾವುದೇ ಹರಾಜು ಮಾಡುವಾಗ ಕನಿಷ್ಠ 3 ಬಿಡ್ದುದಾರರು ಪಾಲ್ಗೊಂಡು ನಡೆಸುವುದು ನಿಯಮಿತ. ಬಿಡ್ದುದಾರರಗಿಂತ ಕಡಿಮೆ ಇದ್ದಾಗ ನಡೆಸುವುದು ನಿಯಮಗಳ ಪ್ರಕಾರ ತಪ್ಪು.ಈ ಮೇಲ್ಕಂಡ ಆಕ್ಷೇಪಣೆ (ADD-A) ಲೆಕ್ಕ ಪರಿಶೋಧನಾ ಸಂಸ್ಥೆಯ ಪರಿಶೀಲಿಸಿದಾಗ ಕೇವಲ ಇಬ್ಬರು ಬಿಡ್ದುದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸಿದ್ದು. ಇದರಲ್ಲಿ ಒಬ್ಬರಿಗೆ ಒಪ್ಪಿಗೆ ಪಡೆದು ನೀಡಿರುವುದು ಕಂಡು ಬಂದಿದೆ.ಈ ಮೇಲ್ಕಂಡ ಆಕ್ಷೇಪಣೆಯ ಮೊತ್ತ ರೂ. 24,62,317/–ಗಳನ್ನು ಸರಿಯಾದ ಸರ್ಕಾರದ ನಿಯಮಗಳ ಪಾಲನೆ ಉಲ್ಲಂಘನೆಯಾಗಿರುತ್ತದೆ. ಅದಕಾರಣ ರೂ. 42,00,000/– ಆಕ್ಷೇಪಣೆಯಲ್ಲಿಡಲಾಗಿದೆ.</td>
<td>ವಿಶ್ವವಿದ್ಯಾಲಯದ ದಾಖಲೆಗಳನ್ವಯ 2013–14 ರ ವಾರ್ಷಿಕ ಲೆಕ್ಕಗಳ ಪುಟ ಸಂಖ್ಯೆ 11 ರಲ್ಲಿ ನಮೂದಿಸಿದಂತೆ ಹರಾಜಿನಿಂದ ಸ್ವೀಕೃತವಾಗಿರುವ ವಾರ್ಷಿಕ ಒಟ್ಟು ಮೊತ್ತ ರೂ. 1,21,24,950/– ಆಗಿದ್ದು, ಇದು ಕೆಳಕಂಡ 10 ಕೇಂದ್ರಗಳಿಗೆ ಸಂಬಂಧಿಸಿರುತ್ತದೆ ವಿವರಗಳು ಕೆಳಕಂಡಂತಿವೆ.
<table>
<tr><th>S.L</th><th>Station</th><th>Amount</th></tr>
<tr><td>1</td><td>Mudigere</td><td>13,30,166.00</td></tr>
<tr><td>2</td><td>Shivamogga</td><td>9,32,914.00</td></tr>
<tr><td>3</td><td>Kathalagere</td><td>27,27,314.00</td></tr>
<tr><td>4</td><td>Hiriyur</td><td>20,74,526.00</td></tr>
<tr><td>5</td><td>Brahmavara</td><td>19,07,300.00</td></tr>
<tr><td>6</td><td>Ullal</td><td>10,37,984.00</td></tr>
<tr><td>7</td><td>OFRC Shimoga</td><td>59,529.00</td></tr>
<tr><td>8</td><td>Honnavile</td><td>10,24,740.00</td></tr>
<tr><td>9</td><td>Ponnampet</td><td>44,094.00</td></tr>
<tr><td>10</td><td>Bavikere</td><td>9,86,383.00</td></tr>
<tr><td></td><td>Total</td><td>12,12,4,950.00</td></tr>
</table>
ಎಲ್ಲಾ ಪ್ರಕರಣಗಳಲ್ಲಿ ಮೂರು ಹಾಗೂ ಅದಕ್ಕಿಂತ ಹೆಚ್ಚಿನ ಬಿಡ್ದುದಾರರು ಭಾಗವಹಿಸಿದ್ದು ಸಿಂಗಲ್ ಬಿಡ್ದುದಾರರಿಗೆ ಹರಾಜು ನೀಡಲಾದ ಯಾವುದೇ ಪ್ರಕರಣಗಳಿರುವುದಿಲ್ಲ. ಈ ಬಗ್ಗೆ ಒಬ್ಬರಿಗೆ ಒಪ್ಪಿಗೆ ನೀಡಲಾಗಿರುವುದಾಗಿ ಆಕ್ಷೇಪಣೆ ಮೊತ್ತ ರೂ. 24,62,312/– ಎಂದು ವರದಿಯಲ್ಲಿ ನಮೂದಿಸುತ್ತಾ ರೂ. 42,00 ಲಕ್ಷ ಆಕ್ಷೇಪಣೆಯನ್ನು ಇಟ್ಟಿರುವ ಕಾರಣ ಸ್ಪಷ್ಟವಾಗಿರುವುದಿಲ್ಲ. ಈ ಸಂಬಂಧ ನೀಡಿರಬಹುದಾದ ಯಾವುದೇ ಲೆಕ್ಕ ವಿಚಾರಣಾ ಪತ್ರದ ಸಂಖ್ಯೆಯನ್ನು ಸಹಾ ಕಂಡಿಕೆಯಲ್ಲಿ ಉಲ್ಲೇಖಿಸಿರುವುದಿಲ್ಲ. ಕತ್ತಲಗೆರೆ ಕೇಂದ್ರ ಹೊರತುಪಡಿಸಿ ಯಾವುದೇ ಕೇಂದ್ರದ ಹರಾಜು ವಹಿವಾಟು 2013–14 ನೇ ಸಾಲಿನಲ್ಲಿ ರೂ.24.00 ಲಕ್ಷಗಳಷ್ಟು ಇರುವುದಿಲ್ಲ. ಕತ್ತಲಗೆರೆ ಕೇಂದ್ರದ ಹರಾಜುವಹಿ ಪರಿಶೀಲಿಸಲಾಗಿ ಎಲ್ಲಾ ಹರಾಜುಗಳಲ್ಲಿಯೂ 3 ಹಾಗೂ ಅದಕ್ಕಿಂತ ಹೆಚ್ಚಿನ ಬಿಡ್ದುದಾರರು ಭಾಗವಹಿಸಿರುತ್ತಾರೆ. ಕಂಡಿಕೆಯಲ್ಲಿ ಆಕ್ಷೇಪಣೆಯಲ್ಲಿರಿಸಲಾದ ಮೊತ್ತದ ಬಗ್ಗೆ ನಿಖರವಾದ ಕಾರಣಗಳು ತಿಳಿದು ಬರುತ್ತಿಲ್ಲವಾದ ಕಾರಣ ಹಾಗೂ ಸಿಂಗಲ್ ಟೆಂಡರ್ ದಾರರಿಗೆ ಯಾವುದೇ ಒಪ್ಪಿಗೆ ನೀಡಿಲ್ಲದ ಕಾರಣ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.</td>
</tr>
<tr>
<td>03</td>
<td>24</td>
<td>ಮಂಜೂರು ಪಡೆಯದೆ ಖರೀದಿಸಿರುವುದು:–
ಮೇಲಿನ ಅಧಿಕಾರಿಗಳ ಮಂಜೂರು ಪ್ರತಿಗಳ ಅಪ್ಪಣೆ ಪಡೆಯದೆ ಖರೀದಿ ಮಾಡಿರುವುದರ ಬಗ್ಗೆ ರೂ. 2,26,991/– ಮೇಲಿನ ಅಧಿಕಾರಿಗಳಿಂದ ಯಾವುದೇ ಮಂಜೂರು ಅಪ್ಪಣೆ ಇಲ್ಲದೆ ಖರೀದಿ ಮಾಡಿರುತ್ತಾರೆ. ಅದಕಾರಣ</td>
<tr><td></td><td>Add: Rs. 158731 Withdrawn Twice on 30.09.2013</td><td></td><td>158731</td></tr>
</table></td><td>ಎ) ಸಾಮಾನ್ಯ ನಿಧಿ:–
ನಗದು ಪುಸ್ತಕ ಶಿಲ್ಕಿಗೂ, ಬ್ಯಾಂಕ್ ಖಾತೆಯ ಶಿಲ್ಕಿಗೂ ತಾಳೆಯಿದ್ದು ಆಕ್ಷೇಪಣೆ ಇರುವುದಿಲ್ಲ.
ಬಿ) ಆರ್.ಕೆ. ವಿ. ವೈ. ಖಾತೆ:–
ನಗದು ಪುಸ್ತಕ ಶಿಲ್ಕಿಗೂ, ಬ್ಯಾಂಕ್ ಖಾತೆಯ ಶಿಲ್ಕಿಗೂ ತಾಳೆಇದ್ದು ಆಕ್ಷೇಪಣೆ ಇರುವುದಿಲ್ಲ.
ಆದ್ದರಿಂದ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮ ಇರುವುದಿಲ್ಲ.</td></tr>
</table>

	Add: DD Deposited, Reversed by Bank as per list		2550
	Less: Amount Returned by Bank		-98000
			175936974.37

ಬಿ) ಆರ್.ಕೆ.ವಿ.ವೈ

Bank Reconciliation Statement for the Month of March 2014			
Name of Bank Account	Canara Bank Channamumbapuri Shimoga		
Bank Account A/c No:	4083101000075		
RKVY	2013-14		
Sl. No.	Particulars	Cash Book Rs.	Pass Book Rs.
1	Balance as per Pass Book As on 28.03.2014	15948976	74200798
2	Add: Cheques Sent Bank for collection but not Realized As per list		
3	Less: Cheques Issued But Not Encashed as per list		58252002
4	Balance as per Cash book	15948976	15948976
	Total	15948976	15948976

ಬಿ) ಸಾಮಾನ್ಯ ನಿಧಿ:–

Liabilities			Assets		
Descriptions	Schedule No	Amount	Descriptions	Schedule E No	Amount
Capital Fund	16	326672217	Fixed Assets:		
			Buildings	16	278455347
			Land Development	16	9225378
			Tractors/Vehicles	16	705300

					Furniture	16	16144689	
					Farm/Office/ Lab Equipments	16	18376307	
					Library Books	16	3487696	
					Live Stock	16	277500	
		Current Liabilities			Current Assets			
		HBAUAS	19	-16880	Perment Advance	17	2401002	
		Conveyance Advance	20	25754	Other Advances	18	-421351	
		HBA Recovery	23	0	Festival Advance	21	346375	
		Sports	24	176560	Advance of Pay on Transfer	22	0	
		Association	25	-18195	Fixed Deposits	37	300000000	
		Magazine	26	69785	Revolving Fund	64	2600000	
		Calendar	27	0				
		Students Aid Fund	28	228210				
		Caution Money Deposit	29	93000				
		Group Health Insurance	30	0				
		Alumni Association of UAHS, Shimoga	31	70000				
		Aris Fee	32	74500				
		Quarters Deposit	33	15500				
		General Deposit	34	1465429				

		Contractors Security Deposit	35	736949					
		Pension Contribution From comptroller UAS GKVK	36	0					
		KGD SUBS-DEDN	38	0					
		LIC Subs-Dedn	38	0					
		PTAX-Deduction	39	153941					
		HDFC-DEDN	40	50600					
		Income TAXDEDN	42	0					
		Teachers Association	43	610					
		Employees Association Dedn	44	-600					
		Credit Cop. Society	45	0					
		Bank Loan Dedn	46	0					
		Group Insurance-DEDN	47	0					
		GPR Subs-DEDN	48	22929					
		GPF Loans-DEDN	49	0					
		GPF Subscription	50	0					
		Royalty DEDN	51	209240					
		Labour Cess/Other Deduction	52	0					

Payment						
Court Attachment Reovery	53	0				
Income Tax works Recovery	54	0				
SC/ST Asso. Deposit	55	7025				
Security Deposit	56	24619				
Service Tax	57	0				
Sales Tax Amount	58	0				
ECCS Thrift Department	59	0				
Contributory Pension Scheme	60	-582				
Income Tax Miscellaneous	61	-1031				
GPF Recovery DRE	62	0				
NSS	63	0				
Income Over Expenditure		47747567 6	Closing Balance			17593701 2
	Total	80753525 5	Total			80753525 5

ಸ) ಆರ್.ಕೆ. ವಿ. ವೈ. ಖಾತೆ:–

Liabilities				Assets			
ABAC	Description	Amount	Amount	ABAC	Description	Amount	Amount
	Capital Fund		47819998		Fixed Assets		
	Income over Expenditure b/f	35589674			Farm/Office/Lab Equipments		24059851

			Income over Expenditure during the year	79595434	114885108		Furniture		47300	
			Suspense Accounts				Tractors /Vehicles		0	
		9331	General Deposits		502247		Land Development		10466313	
		9341	Contractors Deposits		432928		Library Books		0	
		9531	Deposits				Live Stock		0	
		9805	Ptax-deductions		0		Buildings		13246534	
		9821	Royality DEDN		8091		Current Assets			
		9823	Labour Cess/Others Deduction Payment		36		Fixed Deposits		100000000	
		9827	Income Tax works Recovery		0		Closing Balance		15948976	
		9831	Security		123892					

				Deposit					
			9833	Sales Tax Amount		-1			
			9842	Income Tax Miscellaneous		-3325			
				Total		163768974		Total	163768974
04	12	ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿದ ಬೇಡಿಕೆ ಸಂಗ್ರಹಣೆ ಹಾಗೂ ಬಾಕಿ ವಹಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ.(NON PRODUCTION OF D.C.B REGISTER REGARDING STUDENTS EXAMINATION FEE) ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ 2013–14ನೇ ಸಾಲಿನಲ್ಲಿ ವಿವಿಧ ಪರೀಕ್ಷೆಗಳ ಪೀ, ವಿವಿಧ ಪರೀಕ್ಷೆಗಳ ಅಂಕಪಟ್ಟಿ ಪ್ರಮಾಣ ಪತ್ರಗಳು ಹಾಗೂ ಇತರೆ ಪರೀಕ್ಷೆಗಳಿಗೆ ಸಂಬಂಧಿಸಿದ ಶುಲ್ಕಗಳನ್ನು ನೇರವಾಗಿ ಸಂಗ್ರಹಿಸಿರುವುದು ಹಾಗೂ ವಿದ್ಯಾರ್ಥಿಗಳು ಬ್ಯಾಂಕ್‌ಗಳಿಗೆ ಚಲನ್ ಮೂಲಕ ಜಮೆ ಮಾಡಿರುವುದು ಕಂಡು ಬಂದಿದ್ದು. ಈ ಸಂಬಂಧ ಪರಿಶೀಲನೆಗಾಗಿ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಿವರ ಈ ಕೆಳಗಿನಂತಿದೆ. 1. ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿದಂತೆ ದಿನವಹಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. 2. ಬ್ಯಾಂಕ್ ಲೆಕ್ಕಸಮನ್ವಯ ತಃಖ್ತೆ ಪರಿಶೀಲನೆಗೆ ಒದಗಿಸಿರುವುದಿಲ್ಲ. 3. ವಿದ್ಯಾರ್ಥಿ ಪ್ರವೇಶ ಶುಲ್ಕ ಪಾವತಿಸುವ ಬ್ಯಾಂಕ್ ಚಲನ್ ನಾಲ್ಕು ಭಾಗಗಳನ್ನು ಒಳಗೊಂಡಿರುತ್ತೆ. ಇದರಲ್ಲಿ ಮೊದಲ ಪ್ರತಿ ಬ್ಯಾಂಕ್‌ಗೆ ಸೇರುತ್ತದೆ. ಎರಡನೇಯ ಪ್ರತಿಯು ಹಣಕಾಸು ವಿಭಾಗಕ್ಕೆ, ಮೂರನೆಯ ಪ್ರತಿ ಅಕಾಡೆಮಿಕ್ ಸೆಕ್ಷನ್‌ಗೆ ಮತ್ತು ನಾಲ್ಕನೆ ಪ್ರತಿ ವಿದ್ಯಾರ್ಥಿಗೆ ಸೇರುವಂತಹದಾಗಿದೆ. ಈ ಸಂಬಂಧ ಹಣಕಾಸು ವಿಭಾಗಕ್ಕೆ ಬಂದಿರುವ ಬ್ಯಾಂಕ್ ಚಲನ್ ಪರಿಶೀಲನೆಗೆ ಹಾಜರುಪಡಿಸುವುದು. 4. ನಗದು ವಹಿಯಲ್ಲಿ ತೆಗೆದುಕೊಂಡಿರುವ ಸ್ವೀಕೃತಿಗೂ ಹಾಗು ಬ್ಯಾಂಕ್ ಪಾಸು ಶೀಟುಗೂ (ಸ್ವೀಕೃತಿ) ವ್ಯತ್ಯಾಸವಿದ್ದು, ವ್ಯತ್ಯಾಸಕ್ಕೆ ಕಾರಣ ನೀಡಿರುವುದಿಲ್ಲ. 5. ಬ್ಯಾಂಕ್‌ನಿಂದ ಸ್ವೀಕತಿಯಾಗಿರುವ ಚಲನ್‌ಗಳಿಗೂ ವ್ಯಾಂಕ್ ಪಾಸು	1) ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿದಂತೆ ದಿನವಹಿಯನ್ನು ಸಂಬಂದಿಸಿದ ಕಾಲೇಜುಗಳಲ್ಲಿ ನಿರ್ವಹಿಸಲಾಗಿದೆ. 2) ಸಂಬಂಧಿಸಿದ ಕಾಲೇಜುಗಳಲ್ಲಿ ಲೆಕ್ಕ ಸಮನ್ವಯ ಮಾಡಲಾಗಿದೆ. 3) 2013– 14 ನೇ ಸಾಲಿನಲ್ಲಿ ಪ್ರವೇಶ ಶುಲ್ಕವನ್ನು ಸಂಬಂದಿಸಿದ ಕಾಲೇಜಿನಲ್ಲಿ ವಸೂಲು ಮಾಡಿ ಡಿಡಿ ಮುಖಾಂತರ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಗೆ ಪಾವತಿಮಾಡಲಾಗುತ್ತದೆ, ಚಲನ್ ಪ್ರತಿಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳಲ್ಲಿ ನಿರ್ವಹಿಸಲಾಗುತ್ತದೆ. 4,5,6) ಲೆಕ್ಕ ಸಮನ್ವಯವನ್ನು ಸಂಬಂಧಿಸಿದ ಕಾಲೇಜುಗಳಲ್ಲಿ ಮಾಡಲಾಗುತ್ತಿದೆ. ವ್ಯತ್ಯಾಸಕ್ಕೆ ವಿವರಣೆಯನ್ನು, ವಿದ್ಯಾರ್ಥಿವಾರು ಜಮೆಯ ವಿವರಗಳನ್ನು ಮಹಾವಿದ್ಯಾಲಯಗಳ ಲೆಕ್ಕ ತನಿಖಾ ಸಂದರ್ಭದಲ್ಲಿ ಪರಿಶೀಲಿಸಬಹುದಾಗಿರುತ್ತದೆ. 7) ಈ ಬಗ್ಗೆ ನಿಯಮಾನುಸಾರ ಸ್ವೀಕೃತಿಯಾದ ಮೊತ್ತವನ್ನು ತಕ್ಷಣವೇ ವಿಳಂಬ ಮಾಡದೇ ಜಮಾ ಮಾಡುವಂತೆ ಸಂಬಂಧಿಸಿದ ಕಾಲೇಜಿನ ಹಣಕಾಸು ವಿಭಾಗದ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

		ಶೀಟಿಗೂ ವ್ಯತ್ಯಾಸವಿದ್ದು, ವಿದ್ಯಾರ್ಥಿವಾರು ಜಮೆ ವಿವರ ಹಾಜರುಪಡಿಸುವುದು. 6. ಸಂಬಂಧಿಸಿದ ಪಾಸ್‌ಶೀಟು ಹಾಗೂ ನಗದು ವಹಿಯನ್ನು ಪರಿಶೀಲಿಸಲಾಗಿ ಕರ್ನಾಟಕ ಆರ್ಥಿಕ ಸಂಹಿತೆ ಅರ್ಟಿಕಲ್ 329 ರಂತೆ ಕ್ರಮವಹಿಸಿ ನಗದು ವಹಿಯನ್ನು ನಿರ್ವಹಿಸದಿರುವುದು ಕಂಡು ಬಂದಿದೆ. 7. ಪ್ರತಿ ದಿನ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಕಛೇರಿಯಿಂದ ನೇರವಾಗಿ ರಸೀದಿ ಪುಸ್ತಕ ರೇಖಿಸಿ ವಸೂಲಿಯಾದ ಮೊಬಲಗನ್ನು ಕಡ್ಡಾಯವಾಗಿ ದಿನವಹಿಗೆ ದಾಖಲಿಸಿಕೊಂಡು ನಗದು ವಹಿಗೆ ಸ್ವೀಕೃತಿಯಾಗಿ ತೆಗೆದುಕೊಂಡು 24 ಗಂಟೆಯೊಳಗಾಗಿ ಜಮೆ ಮಾಡಬೇಕಾಗಿದ್ದರೂ ವಿಳಂಬವಾಗಿ ಜಮೆ ಮಾಡಿರುವುದು ಕಂಡು ಬಂದಿದೆ. ಈ ಸಂಬಂಧ ಸೂಕ್ತ ವಿವರಣೆ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ದಿನವಹಿಯನ್ನು ನಿರ್ವಹಿಸದೆ ಇರುವುದರಿಂದ ವಾಸ್ತವವಾಗಿ ಸಂಗ್ರಹಿಸಿರುವ ಮೊಬಲಗು ಜಮೆ ಬಂದಿರುವುದನ್ನು ಖಾತರಿಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ದಿನವಹಿಯ ಅನುಪಸ್ಥಿತಿಯಲ್ಲಿ ವಾಸ್ತವವಾಗಿ ಸಂಗ್ರಹಿಸಿರುವ ಮೊಬಲಗು ಹಣದ ದುರುಪಯೋಗದಲ್ಲಿ(Defalcation)ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾದರೆ ಸಂಬಂಧಿಸಿದ ವಿಷಯ ನಿರ್ವಾಹಕರ ನೇರ ಹೊಣೆಗಾರರಾಗಿರುತ್ತಾರೆ.	ಕಂಡಿಕೆಯಲ್ಲಿ ತಿಳಿಸಲಾದ ಎಲ್ಲಾ ಸೂಚನೆಯನ್ನು ಪಾಲಿಸಲು ಸಂಬಂಧಿಸಿದ ಕಾಲೇಜಿನ ಮುಖ್ಯಸ್ಥರಿಗೆ ಸೂಚಿಸಲಾಗಿದೆ.
04	13	**ಆಸ್ತಿ ಸೃಜನೆಗಾಗಿ ಬಿಡುಗಡೆಯಾದ ಅನುದಾನ ಮಾರ್ಗಪಲ್ಲಟವಾದ ಬಗ್ಗೆ** ಆಸ್ತಿ ಸೃಜನೆಗಾಗಿ ಸರ್ಕಾರದಿಂದ 2013–14ನೇ ಸಾಲಿನವರೆಗೆ ರೂ.26.20 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.6,38,14,982/– ಮಾತ್ರ ವೆಚ್ಚ ಭರಿಸಲಾಗಿದೆ. ಅಂದರೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಅನ್ಯ ಉದ್ದೇಶಕ್ಕೆ ಉಪಯೋಗಿಸಲಾಗಿದೆ ಎಂದು ಕಂಡು ಬರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 48(4) ರನ್ವಯ ವಿಶ್ವವಿದ್ಯಾಲಯವು ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಮೀಸಲಿಟ್ಟ ನಿಧಿಗಳನ್ನು ಇತರೆ ಉದ್ದೇಶಗಳಿಗಾಗಿ ಮಾರ್ಗಪಲ್ಲಟ (Diversion of Fund) ಮಾಡತಕ್ಕದಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಕೆಗಳನ್ನು ಒಳಗೊಳ್ಳುವಂತಹ ಯಾವುದೇ ಯೋಜನೆಗಳನ್ನು ಅಥವಾ ಪುರಸ್ಕರಣಾ ಪ್ರಾಧಿಕಾರದಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಅವರ್ತಕ ಹೊಣೆಗಾರಿಕೆಯನ್ನು ವಿಧಿಸುವಂತಹ ಯಾವುದೇ ಯೋಜನೆಯನ್ನು ಕಾರ್ಯಗೊಳಿಸತಕ್ಕದ್ದಲ್ಲವೆಂದು ಸ್ಪಷ್ಟವಾಗಿ ವಿವರಿಸಿದೆ. ಈ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 48(4) ರಲ್ಲಿಯ ನಿಯಮ ಉಲ್ಲಂಘಿಸಿ ಮಾರ್ಗಪಲ್ಲಟ ಮಾಡಿರುವುದಕ್ಕೆ ಸೂಕ್ತ ವಿವರಣೆ ಹಾಗೂ ಸರ್ಕಾರದಿಂದ ಪೂರ್ವಾನುಮೋದನೆ ಪಡೆದಿದ್ದಲ್ಲಿ ಪರಿಶೀಲನೆಗೆ ಹಾಜರುಪಡಿಸುವಂತೆ ತಿಳಿಸಲಾಗಿದೆ.	ವಿಶ್ವವಿದ್ಯಾಲಯವು ಹೊಸದಾಗಿ ಪ್ರಾರಂಭವಾಗಿದ್ದು, 2013–14 ರಿಂದ ಪೂರ್ಣ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿದೆ. ಮಂಜೂರಾದ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಹುದ್ದೆಗಳು ಭರ್ತಿಯಾಗಿಲ್ಲದ ಕಾರಣ, 2013–14 ರ ಆಸ್ತಿ ಸೃಜನೆ ಅನುದಾನವನ್ನು ಪೂರ್ಣವಾಗಿ ಅದೇ ಆರ್ಥಿಕ ವರ್ಷದಲ್ಲಿ ಬಳಕೆ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಅನುದಾನವು ಬ್ಯಾಂಕ್ ಖಾತೆಯಲ್ಲಿಯೇ ಬಳಕೆಯಾಗದೇ ಉಳಿದಿದ್ದು ಅದನ್ನು ಬೇರೆ ಯಾವುದೇ ಯೋಜನೆಗಳಿಗೆ ವೆಚ್ಚ ಮಾಡಲಾಗಿಲ್ಲ ಹಾಗೂ ಆಸ್ತಿ ಸೃಜನೆಯ ಅನುದಾನವನ್ನು ಅಭಿವೃದ್ಧಿ ಉದ್ದೇಶಗಳಿಗಾಗಿಯೇ ಉಪಯೋಗಿಸಲಾಗಿದ್ದು ಯಾವುದೇ ಮಾರ್ಗಪಲ್ಲಟ ಮಾಡಿರುವುದಿಲ್ಲ. ಆದಾಗ್ಯೂ ಕಂಡಿಕೆಯಲ್ಲಿನ ಸೂಚನೆಗಳನ್ನು ಪಾಲಿಸಲಾಗುವುದು.

04	14	<u>ಮಿನಿಟ್ ವಹಿ(MINUTE REGISTER):-</u> ವಹಿಯನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ಪ್ರಕರಣ 47(4) ರಂತೆ ನಿರ್ವಹಿಸಿ ಪ್ರತಿ ಆರ್ಥಿಕ ವರ್ಷದ ಲೆಕ್ಕತನಿಖೆ ವರದಿಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಿಕೊಂಡು ಸಂಬಂಧಿಸಿದ ಕಂಡಿಕೆಗಳಿಗೆ ಸೂಕ್ತ ಹಾಗೂ ಸಮರ್ಥನಿಯವಾದ ಅನುಪಾಲನಾ ಉತ್ತರ ದಾಖಲಿಸಿಕೊಂಡು ಕಂಡಿಕೆಗಳು ತೀರವಳಿಯಾದ ಪಕ್ಷದಲ್ಲಿ ಕಂಡಿಕೆಗಳನ್ನು ತೀರುವಳಿ ಮಾಡಿದ ವಿವರ ನಮೂದಿಸಿಕೊಂಡು ಹಾಗೂ ದೃಢೀಕರಿಸಿಕೊಂಡು ಮುಂದಿನ ತಪಾಸಣೆಗೆ ಹಾಜರುಪಡಿಸುವಂತೆ ಸೂಚಿಸಿದೆ.	ಶಿವಮೊಗ್ಗದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಪ್ರಾರಂಭವಾದ ನಂತರ ಇದೇ ಮೊದಲ ಬಾರಿಗೆ ಲೆಕ್ಕ ಪರಿಶೋಧನೆ ಕೈಗೊಳ್ಳಲಾಗಿದೆ. ಈ ಕಂಡಿಕೆಯ ಸೂಚನೆಯ ಪ್ರಕಾರ ಮಿನಿಟ್ ವಹಿಯನ್ನು ನಿರ್ವಹಿಸಿ ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕ್ರಮ ಕೈಗೊಳ್ಳಲಾಗುವುದು.
04	15	<u>ಸಾಲಗಳ ವಹಿ(LOAN REGISTER)</u> ವಹಿಯನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಕರ್ನಾಟಕ ಆರ್ಥಿಕ ಸಂಹಿತೆ ಆರ್ಟಿಕಲ್ 185 ರನ್ವಯ ವಹಿಯನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ. ಆಡಿಟ್ ವಿಚಾರಣೆ ಸಂಖ್ಯೆ:1ರಲ್ಲಿ ಸಾಲದ ವಹಿ ಪರಿಶೀಲನೆಗೆ ಹಾಜರುಪಡಿಸುವಂತೆ ಸೂಚಿಸಲಾಗಿತ್ತು.ಸಂಸ್ಥೆಯವರು ಉತ್ತರಿಸುತ್ತ ಕುವೆಂಪು ವಿಶ್ವವಿದ್ಯಾಲಯದಲ್ಲಿ ಹಾಲಿ ಸಾಲದ ವ್ಯವಹಾರಗಳಿಲ್ಲವೆಂದು ಲೆಕ್ಕತನಿಖೆಗೆ ಉತ್ತರಿಸಿರುತ್ತಾರೆ. ಯಾವುದೇ ಸಾಲ ಪಡೆದಿರುವುದಾಗಲೀ ಹಾಗೂ ಯಾವುದೇ ಇತರೆ ಸಂಸ್ಥೆಗಳಿಗೆ ಸಾಲ ನೀಡಿರುವುದಾಗಲಿ ಇಲ್ಲವೆಂದು ಲೆಕ್ಕತನಿಖೆಗೆ ತಿಳಿಸಿರುತ್ತಾರೆ.	ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದಲ್ಲಿ 2013–14 ನೇ ಸಾಲಿನಲ್ಲಿ ಯಾವುದೇ ಸಾಲದ ವ್ಯವಹಾರವಿರುವುದಿಲ್ಲ. ಆದಾಗ್ಯೂ ಕರ್ನಾಟಕ ಆರ್ಥಿಕ ಸಂಹಿತೆ ಆರ್ಟಿಕಲ್ 185 ರನ್ವಯ ಸಾಲದ ವಹಿಯನ್ನು ನಿರ್ವಹಿಸಿ ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕ್ರಮ ಕೈಗೊಳ್ಳಲಾಗುವುದು.
04	16	<u>ಕೃಷಿ ವಿಶ್ವವಿದ್ಯಾಲಯದ ಆಸ್ತಿಗಳ ಸಂರಕ್ಷಣೆಗಾಗಿ ವಿಮೆ ಮಾಡಿಸುವ ಬಗ್ಗೆ:–</u> ಕೃಷಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಚರ/ಸ್ಥಿರಾಸ್ತಿಗಳ, ವಿವಿಧ ವಿಭಾಗಗಳಲ್ಲಿರುವ/ಆವರಣದಲ್ಲಿ ಬಹಳ ಬೆಲೆಯುಳ್ಳ ಸಾಮಗ್ರಿಗಳು, ಗಣಕ ಯಂತ್ರಗಳು/ಗಣಕ ಯಂತ್ರಗಳಿಗೆ ಪೂರಕವಾದ ಪರಿಕರಗಳು/ಸುಸಜ್ಜಿತ ಪ್ರಯೋಗಶಾಲೆಗಳು/ಸಂಸ್ಕರಣಾ ಘಟಕಗಳು/ಬಹಳ ಬೆಲೆಯುಳ್ಳ ಮರಗಳು ಇರುವುದರಿಂದ ಇವುಗಳು ನೈಸರ್ಗಿಕ ವಿಕೋಪಗಳಿಂದ ಹಾನಿ ಉಂಟಾಗುವ ಸಂಭವವಿರುವುದರಿಂದ ಇದರ ಆರ್ಥಿಕ ನಷ್ಟವನ್ನು ಭರಿಸುವ ಸಲುವಾಗಿ ಇಂತಹ ವಸ್ತುಗಳ/ಮರಗಳ ವಿಮೆ ಮಾಡಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕೃಷಿ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಪುಸ್ತಕಗಳ/ವಸ್ತುಗಳ/ತತ್ರಾಂಶಗಳ ಬಗ್ಗೆ ಈಗಾಗಲೇ ವಿಮೆ ಮಾಡಿಸಲಾಗಿದ್ದು ಮೇಲ್ಕಂಡ ಪ್ರಕರಣಗಳಲ್ಲೂ ಸಹ ಬೆಲೆ ಬಾಳುವ ಪಸ್ತುಗಳ/ಮರಗಳ/ತತ್ರಾಂಶಗಳ ಮೌಲ್ಯವನ್ನು ನಿರ್ಧರಿಸಿ ಇದಕ್ಕೆ ಅನುಗುಣವಾಗಿ ವಿಮೆ ಮಾಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.	ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ವಾಹನಗಳಿಗೆ ವಿಮೆ ಮಾಡಿಸಲಾಗುತ್ತಿದ್ದು, ನಿಗದಿತ ಕಾಲಕ್ಕೆ ನವೀಕರಿಸಲಾಗುತ್ತಿದೆ. ಕಂಡಿಕೆಯಲ್ಲಿ ಸೂಚಿಸಿದಂತೆ ಇತರೆ ಐಟಂಗಳ ವಿಮೆ ಬಗ್ಗೆ ಸಕ್ಷಮ ಅಧಿಕಾರಿಗಳ ಗಮನಕ್ಕೆ ತಂದು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳುವ ಬಗ್ಗೆ ಪರಿಗಣಿಸಲಾಗುವುದು.
04	17	<u>ಆಸ್ತಿ ಅಧಿಕಾರಿಗಳ ಕಛೇರಿ:–</u> ನಗದು ಪುಸ್ತಕ ಮತ್ತು ಲೆಕ್ಕಪತ್ರಗಳ ನಿರ್ವಹಣೆಯ ಬಗ್ಗೆ: ಸದರಿ ಕಛೇರಿಯ 2012–13ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಮೂಲ ದಾಖಲೆಯಾದ ನಗದು ಪುಸ್ತಕ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟವರನ್ನು ವಿಚಾರಿಸಿದಾಗ, ನಿಗದಿತ ನಗದು ಪುಸ್ತಕದ ಬದಲಾಗಿ ಒಂದು ಗಣಕೀಕೃತ ಸಾಪ್ಟವೇರ್ ತಯಾರಿಸಿ ಸದರಿ ಸಾಪ್ಟವೇರ್‌ನಂತೆ	ಈ ಕಂಡಿಕೆಯು ಆಸ್ತಿ ಅಧಿಕಾರಿಗಳ ಕಛೇರಿಯ ಲೆಕ್ಕ ಪರಿಶೋಧನೆಗೆ ಸಂಬಂಧಿಸಿರುತ್ತದೆ. 2013–14 ನೇ ಸಾಲಿನ ನಗದು ಪುಸ್ತಕ ಹಾಗೂ ಯೋಜನೆಗೆ ಸಂಬಂಧಿಸಿದ ಪ್ರತ್ಯೇಕ ನಗದು ಪುಸ್ತಕವನ್ನು ನಿರ್ವಹಣೆ ಮಾಡಲಾಗುತ್ತಿದೆ. ಇದರಲ್ಲಿ ಕಾಮಗಾರಿಗಳ ಹೆಸರು, ಗುತ್ತಿಗೆದಾರರ ಹೆಸರು, ಬಿಲ್ಲುಗಳ ಮೊತ್ತವನ್ನು ನಮೂದಿಸಲಾಗಿರುತ್ತದೆ. ಅನುಧಾನದ ವಹಿಯನ್ನು ನಿಗದಿತ

		ಮಾಹಿತಿಯನ್ನು ನಮೂದು ಮಾಡಲಾಗುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಸಾಪ್ಟವೇರ್ ಮಾಹಿತಿಯನ್ನು ಪರಿಶೀಲಿಸಿದಾಗ ಮಾಹಿತಿಯಲ್ಲಿ ಕಾಮಗಾರಿಯ ಹೆಸರು ಮತ್ತು ಬಿಲ್ಲು ಮೊತ್ತ ಪಾವತಿಯಾದವರ ಹೆಸರು ಇರುವುದಿಲ್ಲ. ಸಾಪ್ಟವೇರ್ ನಗದು ಪುಸ್ತಕದಲ್ಲಿ ಕಾಮಗಾರಿಯ ಹೆಸರು ವಿಜಿನ್ಸಿ ಅಥವಾ ಗುತ್ತಿಗೆದಾರರ ಹೆಸರು ಇಲ್ಲದೆ ಇರುವುದರಿಂದ ಒಟ್ಟು ಪಾವತಿಗಳು ಯಾವ ಕಾಮಗಾರಿಗೆ ಸಮಬಂಧಪಟ್ಟಂತೆ ಯಾರಿಗೆ ಪಾವತಿಯಾಗಿದೆ ಎಂಬುದನ್ನು ಖಚಿತಪಡಿಸಲು ಸಾಧ್ಯವಾಗಲಿಲ್ಲ. ಈ ರೀತಿ ಅಪೂರ್ಣ ಮಾಹಿತಿಯ ಸಾಪ್ಟವೇರ್ ನಗದು ಪುಸ್ತಕ ನಿರ್ವಹಿಸುತ್ತಿರುವುದನ್ನು ಆಕ್ಷೇಪಿಸಲಾಗಿದೆ. ನಗದು ಪುಸ್ತಕದಲ್ಲಿ ಕಾಮಗಾರಿಯ ಮಾಹಿತಿ ಇಲ್ಲದೆ ಇರುವುದರಿಂದ 2012–13ನೇ ಸಾಲಿನಲ್ಲಿ ನಿರ್ವಹಿಸಿದ ಮತ್ತು ಯಾರಿಗೆ ಪವತಿಸಿದ ಮೊತ್ತದ ಮಾಹಿತಿ ನಗದು ಪುಸ್ತಕದಲ್ಲಿ ಇಲ್ಲದೆ ಇರುವುದರಿಂದ ಸ್ಪಷ್ಟವಾದ ಲೆಕ್ಕಪರಿಶೋಧನೆ ಮಾಡಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಕೂಡಲೇ ಕ್ರಮ ವಹಿಸಿ ಕೆ.ಎಫ್.ಸಿ ನಿಯಮ 329/331 ರಲ್ಲಿ ಸೂಚಿಸಿರುವಂತೆ ಕಾಮಗಾರಿಗಳಿಗೆ ಸಂಬಂಧಿಸಿದ ನಗದು ಪುಸ್ತಕವನ್ನು ನಿರ್ವಹಿಸಲು ಸೂಚಿಸಿದೆ. ಸದರಿ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಎಲ್ಲಾ ನಿಧಿಗಳು ಮತ್ತು ಯೋಜನೆಗಳಿಗೆ ವಿಕೀಕೃತ ಸಾಪ್ಟವೇರ್‌ನಲ್ಲಿ ಪಾವತಿಗಳ ಮಆಹಿತಿಯನ್ನು ನಮೂದು ಮಾಡಲಾಗುತ್ತಿದೆ.ಇದರಿಂದ ಯಾವ ನಿಧಿ/ಯೋಜನೆಯಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ? ಖರ್ಚು ಎಷ್ಟು?ಮತ್ತು ಬಾಕಿ ಉಳಿಕೆ ಎಷ್ಟು?ಎಂಬುದನ್ನು ತಿಳಿದು ಬರುವುದಿಲ್ಲ. ಲೆಕ್ಕಪರಿಶೋಧನೆಯಲ್ಲಿ ಕೆಲವು ಬಿಲ್ಲುಗಳ ಮೊತ್ತವನ್ನು ಸಂಬಂಧಿಸಿದ ನಿಧಿಯಿಂದ ಇಲ್ಲದೆ ಬೇರೆ ನಿಧಿಯಿಂದ ಹಣವನ್ನು ಪಾವತಿಸಿರುವುದು ಮತ್ತು ನಂತರ ಸದರಿ ನಿಧಿಗೆ ಹಣ ಭರಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ.ಈ ವಿಷಯ ತಾತ್ಕಾಲಿಕ Diversion of Funds ಎಂದು ಪರಿಗಣಿಸಬೇಕಾಗಿರುತ್ತದೆ. ಇಂತಹ ಪ್ರಕರಣಗಳನ್ನು ತಪ್ಪಿಸಲು ನಿಧಿವಾರು ಲೆಕ್ಕಪತ್ರಗಳನ್ನು (Fund Based Accounting System) ನಿರ್ವಹಿಸಲು ಹಾಗೂ ಪಾವತಿಗಳನ್ನು ಸದರಿ Fund BasedAccounting System ನಲ್ಲಿನ ವೆಚ್ಚಗಳಿಗೆ ತಾಳೆ ಮಾಡಿ ಹಾಗೂ ಬ್ಯಾಂಕ್ ಪಾಸ್ ಶೀಟ್‌ಗೆ ಲೆಕ್ಕ ಸಮನ್ವಯ ಮಾಡಿ ಲೆಕ್ಕಪರಿಶೋಧನೆಗೆ ಪೂರ್ಣ ನೀಡಲು ಸೂಚಿಸಿದೆ.	ವಹಿಯಲ್ಲಿ ನಿರ್ವಹಿಸುತ್ತಿದ್ದು, ಇದರಲ್ಲಿ ಬಿಡುಗಡೆಯಾದ ಅನುಧಾನ, ಮಾಡಲಾದ ಖರ್ಚು ಮತ್ತು ಬಾಕಿ ಉಳಿದ ಮೊತ್ತದ ವಿವರಗಳನ್ನು ಕಾಲ ಕಾಲಕ್ಕೆ ನಮೂದಿಸಲಾಗುತ್ತಿದೆ. ಆಕ್ಷೇಪಣೆಯಲ್ಲಿ ತಿಳಿಸಿದ ನ್ಯೂನತೆಗಳನ್ನು ಸರಿಪಡಿಸಲು ಈಗಾಗಲೇ ಕ್ರಮವಹಿಸಲಾಗಿರುತ್ತದೆ ಎಂದು ಆಸ್ತಿ ಅಧಿಕಾರಿಗಳು ವರದಿ ಮಾಡಿರುತ್ತಾರೆ. ಕಂಡಿಕೆಯಲ್ಲಿ ತಿಳಿಸಲಾದ ಎಲ್ಲಾ ನಿರ್ದೇಶನಗಳನ್ನು ಪಾಲಿಸಲು ಆಸ್ತಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.
04	18	ನಗದು ಪುಸ್ತಕ ನಿರ್ವಹಿಸಿರುವ ಬಗ್ಗೆ 2013–14ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಸಾಮಾನ್ಯ ನಿಧಿ ಖಾತೆ ಸಂಖ್ಯೆ 0524101046338 ರ ನಗದು ವಹಿಯನ್ನು ಗಣಕೀಕರಣ ರೀತಿಯಲ್ಲಿ ನಿರ್ವಹಿಸಿದ್ದು, ಒಚರ್ ಸಂಖ್ಯೆ ಮತ್ತು ದಿನಾಂಕದೊಂದಿಗೆ ಸ್ಪಷ್ಟವಾಗಿ, ಸೂಕ್ತ ರೀತಿಯಲ್ಲಿ ನಿರ್ವಹಿಸದೆ ಇರುವುದು ಕಂಡು ಬಂದಿದ್ದು, ರಶೀದಿ ಸ್ವೀಕೃತಿ ಮತ್ತು ಅನುದಾನ ಸ್ವೀಕೃತಿ ದಿನಾಂಕದೊಂದಿಗೆ ವೆಚ್ಚದ ವಿವರಗಳನ್ನು ನಿರ್ವಹಿಸದೇ ಇರುವುದು ಲೆಕ್ಕ ತಪಾಸಣೆಯಲ್ಲಿ ಕಂಡುಬಂದಿದ್ದು, ಇದರಿಂದ ಲೆಕ್ಕ ತಪಾಸಣೆಗೆ ಲೆಕ್ಕಪರಿಶೋಧನೆಗೆ ಅಡಚಣೆಯಾಗಿರುತ್ತದೆ. ಈ	2013–14 ನೇ ಸಾಲಿನ ಸಾಮಾನ್ಯ ನಿಧಿ ಖಾತೆ ಸಂಖ್ಯೆ 0524101046338ಯ ನಗದು ಪುಸ್ತಕವನ್ನು ಪರಿಶೀಲಿಸಲಾಗಿ ಓಚರ್ ನಂ ಮತ್ತು ದಿನಾಂಕವನ್ನು ಗಣಕೀಕರಣ ರೀತಿಯಲ್ಲಿ (Single entry system) ನಿರ್ವಹಿಸಲಾಗಿದೆ ಹಾಗೂ ಚೆಕ್ ನಂಬರ್ ವಾರು ಯಾರಿಗೆ ಪಾವತಿಸಲಾಗಿದೆ ಎಂಬ ವಿವರ ಬರೆಯಲಾಗಿದೆ ಚೆಕ್/ಡಿಡಿ/ಸ್ವೀಕೃತಿ ಭಾಗದಲ್ಲಿ ಯಾರಿಂದ ಸ್ವೀಕೃತಿಯಾಗಿದೆ ಎಷ್ಟು ಮೊತ್ತಕ್ಕೆ ಹಾಗೂ ಯಾವ

		ಕುರಿತು ಆಕ್ಷೇಪಣಾ ಪತ್ರ ಸಂಖ್ಯೆ 10/16–17 ದಿನಾಂಕ 10.03.2017 ರಂದು ಕೆ.ಎಫ್.ಸಿ ಅನುಚ್ಛೇದ 229 ರಿಂದ 331 ಪ್ರಕಾರ ನಗದು ವಹಿಯನ್ನು ನಿರ್ವಹಿಸಿ ಲೆಕ್ಕ ತಪಾಸಣೆ ಒದಗಿಸಲು ಕೋರಲಾಗಿತ್ತು.ಆದಾಗ್ಯೂ ಸಹ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದ ಆಡಳಿತ ವರ್ಗವು ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಂಡು ಮುಂದೆ ಈ ರೀತಿಯಾಗದಂತೆ ನಿರ್ದೇಶಿಸುವುದು.	ದಿನಾಂಕ ಎಂದು ಗಣಕೀಕೃತಗೊಳಿಸಿ ನಿರ್ವಹಿಸಲಾಗಿದ್ದು ಎಲ್ಲಾ ಮಾಹಿತಿಗಳು ಲಭ್ಯವಿರುತ್ತದೆ. 2015–16ರಿಂದ ನಗದು ಪುಸ್ತಕವನ್ನು, ಕಂಡಿಕೆಯಲ್ಲಿ ಸೂಚಿಸಲಾದ ಪ್ರಕಾರ ದ್ವಿ ನಮೂದು ಪದ್ಧತಿ (Double Entry system) ಯಲ್ಲಿ ನಿರ್ವಹಿಸಿ, 2014–15ರಿಂದ2016–17 ನೇ ಸಾಲುಗಳ ವರೆಗೆ ಕೈಗೊಂಡ ಲೆಕ್ಕ ತನಿಖೆಗೆ ಹಾಜರುಪಡಿಸಲಾಗಿದೆ. ಕಂಡಿಕೆಯಲ್ಲಿನ ಸೂಚನೆಗಳನ್ನು ಪಾಲಿಸಲಾಗುವುದು, ಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ.
04	19	**ಅಳತೆ ಪುಸ್ತಕದಲ್ಲಿ ಪರಿಮಾಣಗಳ ಘೋಷ್ವಾರೆ ಹಾಕದಿರುವ ಬಗ್ಗೆ** 2013–14ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಕಾಮಗಾರಿ ನಿರ್ವಹಿಸಿರುವ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವುದು ಪರಿಶೀಲಿಸಲಾಗಿ ಸಹಾಯಕ ಇಂಜಿನಿಯರ್‌ರವರು ಸದರಿ ಅಳತೆಗಳನ್ನು ದಾಖಲಿಸಿದ್ದು, ದಾಖಲಿಸಿದ ನಂತರ ಶೆಡ್ಯೂಲ್ ಬಿ ಪ್ರಕಾರ ಗುತ್ತಿಗೆದಾರರಿಂದ ನೀಡಿರುವ ದರ ಪಟ್ಟಿ ಮತ್ತು ಗುತ್ತಿಗೆದಾರರು ನಿರ್ವಹಿಸಿರುವ ಪರಿಮಾಣಗಳ ಅಂತಿಮ ಘೋಷ್ವಾರೆ ಹಾಕಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಸಹಿ ಮಾಡದೆ ಇರುವುದು ಲೆಕ್ಕ ತಪಾಸಣೆಯಲ್ಲಿ ಕಂಡುಬಂದಿದ್ದು, ಮುಖ್ಯಾಧಿಕಾರಿಗಳು ಈ ಬಗ್ಗೆ ಕ್ರಮ ವಹಿಸಿ ಮುಂದೆ ಈ ರೀತಿಯಾಗದಂತೆ ಸೂಕ್ತ ನಿರ್ದೇಶನ ನೀಡುವುದು.ಮುಂದುವರೆದು ಲೆಕ್ಕಪರಿಶೋಧಕರಿಂದ ಅಳತೆಗಳನ್ನು ಲೆಕ್ಕ ಪರಿಶೀಲಿಸಿ ಘೋಷ್ವಾರೆ ಹಾಕಿ ತಾಳೆ ಮಾಡಿ ಪಾಸ್ ಮಾಡಿ ಮೊಹರಿನೊಂದಿಗೆ ಮುಖ್ಯಾಧಿಕಾರಿಗಳ ಸಹಿ ಪಡೆದು ನಂತರ ಚೆಕ್ ಪಾಸ್ ಮೊಹರಿಗೆ ನಿಯಂತ್ರಕರ ಸಹಿಯೊಂದಿಗೆ ಚೆಕ್ ವಿತರಿಸಬೇಕಾಗಿರುವುದು ಸೂಕ್ತವಾಗಿರುತ್ತದೆ. ಈ ಕುರಿತು ಆಡಳಿತ ವರ್ಗ ಸೂಕ್ತ ಕ್ರಮ ವಹಿಸುವುದು.	ಈ ಬಗ್ಗೆ ಈಗಾಗಲೇ ಕ್ರಮ ವಹಿಸಿದ್ದು, ಗುತ್ತಿಗೆದಾರರಿಗೆ ನೀಡಿರುವ ದರ ಮತ್ತು ಪರಿಮಾಣಗಳ ಅಂತಿಮ ಘೋಷ್ವಾರೆಗೆ ಸಂಬಂಧಿಸಿದ ಶಾಖಾಧಿಕಾರಿಗಳು, ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ನಿಯಮಾನುಸಾರ ಪರಿಶೀಲಿಸಿ ಸಹಿಯೊಂದಿಗೆ ಅಳತೆ ಪುಸ್ತಕ ಮತ್ತು ಬಿಲ್ಲನ್ನು ಸಲ್ಲಿಸಲಾಗುತ್ತಿದೆ ಎಂದು ಆಸ್ತಿ ಅಧಿಕಾರಿಗಳು ವರದಿ ಮಾಡಿರುತ್ತಾರೆ. ಕಂಡಿಕೆಯಲ್ಲಿ ತಿಳಿಸಲಾದ ನಿರ್ದೇಶನಗಳನ್ನು ಪಾಲಿಸಲು ಆಸ್ತಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.
04	20	**ಟೆಂಡರ್ ನಿಯಮ ಪಾಲಿಸದೆ ಇರುವುದು** 2013–14 ನೇ ಸಾಲಿನಲ್ಲಿ ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಕಾಮಗಾರಿಗಳಿಗೆ P.W.G 66 ರ ಟೆಂಡರ್ ಪ್ರಕ್ರಿಯೆ ಪ್ರಕಾರ ಕಾಮಗಾರಿ ಕಾರ್ಯಾದೇಶ, ಮಂಜೂರಾತಿ ಅಂಗೀಕಾರ ಆದೇಶ ಶೆಡ್ಯೂಲ್ "ಬಿ" ಅನುಮೋದನೆ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಆಸ್ತಿ ಅಧಿಕಾರಿಗಳ ಸಹಿಯೊಂದಿಗೆ ಅಂಗೀಕರಿಸಬೇಕಿದ್ದು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೇಲಿನ ಎಲ್ಲಾ ದಾಖಲೆಗಳಿಗೆ ಸಹಿ ಮಾಡಿ ಅಂಗೀಕರಿಸುವುದು ಲೆಕ್ಕ ತಪಾಸಣೆಯಲ್ಲಿ ಕಂಡುಬಂದಿದ್ದು, ಮೇಲ್ನೋಟಕ್ಕೆ ಟೆಂಡರ್ ಪ್ರಕ್ರಿಯೆ ಉಲ್ಲಂಘಿಸಿರುವುದು ಕಂಡುಬಂದಿರುತ್ತದೆ. ಆಡಳಿತ ವರ್ಗವು ಸಂಬಂಧಿಸಿದವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದು.	2013–14 ರಲ್ಲಿ ಆಸ್ತಿ ಅಧಿಕಾರಿ ಹುದ್ದೆ ಖಾಲಿಯಿದ್ದು, ಸಹಾಯಕ ಕಾರ್ಯಪಾಲಕ ಅಭಿಯಂತರರೇ ಪ್ರಭಾರದಲ್ಲಿ ಇದ್ದುದರಿಂದ, ಕರಾರು ಪತ್ರ ಹಾಗೂ ಇತರೆ ದಾಖಲೆಗಳಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರೇ ಸಹಿ ಮಾಡಿರುತ್ತಾರೆ. ಆಸ್ತಿ ಅಧಿಕಾರಿಗಳ ಹುದ್ದೆ ಭರ್ತಿಯಾದ ನಂತರ ಕರಾರು ಪತ್ರ ಹಾಗೂ ಇತರೇ ದಾಖಲೆಗಳನ್ನು ಪ್ರಸ್ತುತ ಆಸ್ತಿ ಅಧಿಕಾರಿಗಳು ಅಂಗೀಕರಿಸಿ ಸಹಿ ಮಾಡಿರುತ್ತಾರೆ. ಆದ್ದರಿಂದ ಈ ಕಂಡಿಕೆ ಕೈ ಬಿಡಲು ಕೋರಿದೆ.
04	21	**ಭದ್ರತಾ ಠೇವಣಿಯ ಬಗ್ಗೆ** 2013–14ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸಿರುವ ಕಾಮಾಗಾರಿ ಬಿಲ್ಲುಗಳಲ್ಲಿ ಭದ್ರತಾ ಠೇವಣಿ ಕಟಾಯಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕಡತ ನಿರ್ವಹಿಸದೆ ಇರುವುದು ಲೆಕ್ಕ ತಪಾಸಣೆಯಲ್ಲಿ ಕಂಡುಬಂದಿದ್ದು, ನಿಗಧಿತ ಅವಧಿಯ ನಂತರ ಭದ್ರತಾ ಠೇವಣಿ ಹಿಂತಿರುಗಿಸಿರುವ ಮೊತ್ತಕ್ಕೆ ಯಾವುದೇ ಸೂಕ್ತ ದಾಖಲೆಗಳು ಲೆಕ್ಕ ತಪಾಸಣೆಗೆ ಒದಗಿಸಿರುವುದಿಲ್ಲ. ಈ	ಬಿಲ್ಲುಗಳಲ್ಲಿ ಕಡಿತಗೊಳಿಸಿದ ಭದ್ರತಾ ಠೇವಣಿಯ ಮೊತ್ತದ ವಿವರಗಳನ್ನು ಠೇವಣಿ ವಹಿಯಲ್ಲಿ ದಾಖಲಿಸಲಾಗಿದೆ, ಠೇವಣಿಯನ್ನು ಹಿಂತಿರುಗಿಸಿದ ನಂತರ ಮರು ಪಾವತಿ ವಿವರಗಳನ್ನು ಸಹಾ ಅದೇ ವಹಿಯಲ್ಲಿ ದಾಖಲಿಸಲಾಗಿದೆ. ನಿರ್ವಹಿಸಲಾದ ವಹಿಯನ್ನು ಮುಂದಿನ ಲೆಕ್ಕ ತನಿಖಾ ಸಮಯದಲ್ಲಿ ಪರಿಶೀಲಿಸಬಹುದಾಗಿದೆ. ನಿಯಮಾನುಸಾರ ಕ್ರಮ ಕೈಗೊಂಡಿರುವುದರಿಂದ ಈ ಕಂಡಿಕೆ ಕೈಬಿಡಲು ಕೋರಲಾಗಿದೆ

		ಕುರಿತು ಆಕ್ಷೇಪಣಾ ಪತ್ರ ಸಂಖ್ಯೆ 50/17–18 ದಿನಾಂಕ 17.04.2017 ರಂದು ಭದ್ರತಾ ಠೇವಣಿ ಕಡತ ಲೆಕ್ಕ ತಪಾಸಣೆಗೆ ನೀಡಲು ಕೋರಲಾಗಿರುತ್ತದೆ.ಮುಂದುವರೆದು ಭದ್ರತಾ ಠೇವಣಿ ಕಟ್ಟಾಯಿಸಿದ ಮೊತ್ತ ಮತ್ತು ನಿಗಧಿತ ಅವಧಿಯ ನಂತರ ಹಿಂತಿರುಗಿಸಿದ ಮೊತ್ತಕ್ಕೆ ಕಡತ ನಿರ್ವಹಿಸಿ ರಿಜಿಸ್ಟರ್‌ನಲ್ಲಿ ಮುಖ್ಯಾಧಿಕಾರಿಗಳ ಸಹಿ ಪಡೆಯಬೇಕಾಗಿರುತ್ತದೆ.ಸದರಿ ವಿಷಯವು ಪಣಕಾಸಿನ ವ್ಯವಹಾರವಾಗಿದ್ದು ಸೂಕ್ತ ರೀತಿಯಲ್ಲಿ	
04	22	**ಸಾಗರ ತಾಲ್ಲೂಕು ಆನಂದ ಪುರ ಹೋಬಳಿ ಇರುವಕ್ಕಿ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟಾರೆ 777.07 ಎಕರೆ ಪ್ರದೇಶವನ್ನು ಹೊಸದಾಗಿ ನಿರ್ಮಿಸಲಾಗುವ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿರುವ ಕ್ರಮದಲ್ಲಿನ ಪ್ರಮುಖ ನ್ಯೂನತೆಗಳು:–** ಪ್ರಸ್ತುತ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹಾಲಿ ನವಿಲೆಯ ಸವಳಂಗ ರಸ್ತೆಯಲ್ಲಿರುವ ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವು ಸುಮಾರು 190 ರಿಂದ 200 ಎಕರೆ ವಿಸ್ತೀರ್ಣವನ್ನು ಒಳಗೊಂಡಿದ್ದು, ಇದರಲ್ಲಿ 7–8 ಇಲಾಖಾ ಕಛೇರಿಗಳು ಹಾಗೂ ಕೆಲವೊಂದು ಸಣ್ಣಪುಟ್ಟ ಸಂಶೋಧನಾ ಕಟ್ಟಡಗಳನ್ನು ಒಳಗೊಂಡಿದೆ. ಹಾಗೂ ಕರ್ನಾಟಕ ಸರ್ಕಾರದ ಕೃಷಿ/ತೋಟಗಾರಿಕಾ ವಿಶ್ವವಿದ್ಯಾಲಯದ ಅಧಿನಿಯಮ 2009 ತಿದ್ದುಪಡಿ ವಿಧೇಯಕ ನಿಯಮ (38) 2012ರ ರೀತ್ಯಾ ಅಧ್ಯಾಯ IIನಿಯಮ 5ರಂತೆ ಸದರಿ ವಿಶ್ವವಿದ್ಯಾಲಯವು ಹಾಗೂ ಅದರ ಅಂಗಸಂಸ್ಥೆಗಳು ಕೇವಲ ಸಂಶೋಧನೆಯ ದೃಷ್ಟಿಕೋನವೆಂದು ಹಾಗೂ ರೈತರ ಹಿತದೃಷ್ಟಿಯಿಂದ ಕೃಷಿಯಲ್ಲಿ ತಾಂತ್ರಿಕತೆ/ಆಧುನೀಕರಣದ ಮೂಲ ಉದ್ದೇಶಕ್ಕೆ ಒತ್ತುನೀಡಿದೆ. A. ಹಾಲಿ ಇರುವ ವಿಶ್ವವಿದ್ಯಾಲಯವನ್ನು ಸ್ಥಳಾಂತರಿಸುವ ಉದ್ದೇಶದಿಂದ ಕಛೇರಿಯ ಪತ್ರ ಸಂಖ್ಯೆ: ವಿಅ/ಕೃತೋವಿವಿ/8/907/13–14 ದಿ॥ 2–12–2013ರಲ್ಲಿ ಒಟ್ಟಾರೆ 802.07 ಎಕರೆ ವಿಸ್ತೀರ್ಣದ ಭೂ ಪ್ರದೇಶವನ್ನು ಸಾಗರ ತಾಲ್ಲೂಕಿನ ಆನಂದಪುರ ಹೋಬಳಿ ಇರುವಕ್ಕಿ ಗ್ರಾಮದಲ್ಲಿ ಈ ಕೆಳಗಿನ ವಿವರದ ಸರ್ವೆ ನಂಬರುಗಳಲ್ಲಿ ಗುರುತಿಸಿ ವಿಶೇಶಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.	

		ಎಕರೆ	ಗುಂಟೆ
ಇರುವಕ್ಕಿ ಗ್ರಾಮದ ಸರ್ವೆ ನಂ.	11	24	05
	12	6	30
	13	160	00
	30	80	00
	31	112	00
	45	151	00
ಹೆಬ್ಬೋಡಿ ಗ್ರಾಮದ ಸರ್ವೆ ನಂ.	13	11	28
	14	31	07

	48	69	35
ಕೆಳಗನ ಸರಗುಂದ ಗ್ರಾಮದ ಸರ್ವೆ ನಂ.	35	130	22
ಯಡೇಹಳ್ಳಿ ಗ್ರಾಮದ ಸರ್ವೆ ನಂ.	88	25	00
		802	07

ಮುಂದುವರಿಸುತ್ತಾ ತಹಸಿಲ್ದಾರ್, ಸಾಗರ್‌ರವರ ಪತ್ರ ಸಂಖ್ಯೆ:ಎಎಲ್‌ಎನ್‌ಡಿ/ಸಿಆರ್‌109/2013–14 ದಿ॥7–10–14 ರಲ್ಲಿ ಯಡೇಹಳ್ಳಿ ಗ್ರಾಮದ ಸರ್ವೆ ನಂ.88ರಲ್ಲಿ 25 ಎಕರೆಯನ್ನು ಡೀಮ್ಡ್ ಫಾರೆಸ್ಟ್ ಜಮೀನುದ್ದಾರರಿಂದ ಅದನ್ನು ಹೊರತುಪಡಿಸಿ ಒಟ್ಟಾರೆ 777.07 ಎಕರೆ/ಗುಂಟೆ ಪ್ರದೇಶವನ್ನು ನೀಡಬಹುದೆಂದು ಶಿಫಾರಸ್ಸು ಸಲ್ಲಿಸಿರುತ್ತಾರೆ.ಅದರನ್ವಯ ಮಂಜೂರಾಗಿದೆ ಹಾಗೂ ಪೂರಕವಾಗಿ ಸಂಸ್ಥೆಯು RTC/ಮ್ಯುಟೇಶನ್ ದಾಖಲಾತಿ ಪಡೆದಿರುತ್ತದೆ.

B. ತದನಂತರ ದಿನಾಂಕ:01–03–2014ರಲ್ಲಿ ಇರುವಕ್ಕಿ ಹಾಗೂ ಅದರ ಪ್ರದೇಶ ವ್ಯಾಪ್ತಿಯ ಗ್ರಾಮಸ್ಥರುಗಳು ಅಲ್ಲಿ ಅರಣ್ಯ ಭೂಮಿ, ಗೋಮಾಳ, ಗ್ರೀನ್‌ಬೆಲ್ಟ್ ಎಂಬ ಹಲವಾರು ಕಾರಣಗಳಿಂದ ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ. ಹಾಗೂ ಅದಕ್ಕನುಗುಣವಾಗಿ ಕೃಷಿ ಸಚಿವರ ಕಛೇರಿಯ ಪತ್ರ ಸಂಖ್ಯೆ ಕೃ/ಸ/05/14/24.4.2014 ರಲ್ಲಿ ಇಲಾಖೆಯ ಉಪಕಾರ್ಯದರ್ಶಿ-II ರವರಿಗೆ ಮಾಹಿತಿ ನೀಡಲು ಪತ್ರ ಕಳುಹಿಸಿದ್ದು, ಈ ಬಗ್ಗೆ ಪೂರಕ ಮಾಹಿತಿ ಲಭ್ಯವಿಲ್ಲ.

C. ದಿನಾಂಕ 26.6.2014 ರಂದು ಮಾನ್ಯವಿಧಾನಸಭಾದ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಸ್ಥಳೀಯ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಂಬಂಧಪಟ್ಟ 777.07 ಎಕರೆ/ಗುಂಟೆ ಪ್ರದೇಶವನ್ನು ಸಂಸ್ಥೆಗೆ ಹಸ್ತಾಂತರಿಸಲು ಅನುಮೋದನೆ ನೀಡಿದೆ. ಅದಕ್ಕನುಗುಣವಾಗಿ ತಹಸಿಲ್ದಾರ್‌ರವರು ಜಿಲ್ಲಾಧಿಕಾರಿಗಳ ನಿರ್ದೇಶನದ ಅನ್ವಯ ಕರ್ನಾಟಕ ಭೂಮಂಜೂರಾತಿ ನಿಯಮ 1969ರ ಅಧಿನಿಯಮ 10(3) ಹಾಗೂ ನಿಯಮ 20(1)(ii) ಮತ್ತು ನಿಯಮ 10(3) ರ ಮೇರೆಗೆ ಮಾರಾಟದ ದರವನ್ನು ಶೇ 50% ಕಡಿತಗೊಳಿಸಿ, ನಿಯಮ 97(4) ಹಾಗೂ 1964ರ ಕಾಲಂ 68(1), 68(5) ರಡಿಯಲ್ಲಿ ಖರಾಬು/ಗೋಮಾಳಕ್ಕೆ ವಿನಾಯ್ತಿ ನೀಡಿರುತ್ತಾರೆ. ಅದರನ್ವಯ ಒಟ್ಟಾರೆ ಮೊತ್ತ ರೂ.2,38,08,713/–ನ್ನು ಇಲಾಖೆಯು ನೋಂದಣಿ ವೆಚ್ಚವಾಗಿ ಪಾವತಿಸಿದೆ.

D. ಮುಂದುವರಿದು ಒಟ್ಟಾರೆ ಈ ಪ್ರದೇಶದ ಅಭಿವೃದ್ಧಿಗಾಗಿ ಕುಲಪತಿಗಳು ಪಸಾ, ಅಅ/ಕತೋವಿವಿ/1441/1516 ದಿ॥7.5.2015 ರಲ್ಲಿ ಮೂರು ಹಂತಗಳಲ್ಲಿ ರೂ 298.38 ಕೋಟಿ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಮುಖ ನ್ಯೂನತೆಗಳು ಈ ಕೆಳಗಿನಂತಿದೆ:–

1) ಪ್ರಾರಂಭಿಕವಾಗಿ ಈಗಾಗಲೇ ಮೇಲಿನ ಪೀಠಿಕೆಯ ಅಂಶದಲ್ಲಿ

1) ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸುಮಾರು 1500 ಎಕರೆ ಜಮೀನಿನ ಅವಶ್ಯಕತೆ ಕಂಡುಬಂದಿರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಇದಕ್ಕೆ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ/40/ಎಲ್‌ಜಿಎಸ್/2012 ಬೆಂಗಳೂರು/ದಿನಾಂಕ:31.01.2015 ರಲ್ಲಿ 777 ಎಕರೆ 7 ಗುಂಟೆ ಜಮೀನನ್ನು ಮಂಜೂರು ಮಾಡಲಾದ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.

ಇದು ಆಡಳಿತಾತ್ಮಕ ವಿಷಯವಾಗಿದ್ದು, ವಿಶ್ವವಿದ್ಯಾಲಯದ ಅಭಿವೃದ್ಧಿ ಹಾಗೂ ಬೆಳವಣಿಗೆಯ ದೃಷ್ಟಿಯಿಂದ, ವಿಶ್ವವಿದ್ಯಾಲಯವನ್ನು ಹೊಸದಾಗಿ

		ಪ್ರಸ್ತಾಪಿಸಿದಂತೆ ಸದರಿ ಸಂಸ್ಥೆಯು ಸಂಶೋಧನಾ ಮೂಲ ಉದ್ದೇಶವಾಗಿರುವುದರಿಂದ ಹಾಲಿ ಸಂಸ್ಥೆಯು ನಿರ್ವಹಿಸುವ ಸ್ಥಳವು ಸುಮಾರು 200.00 ಎಕರೆ ಮೇಲ್ಪಟ್ಟಿರುವುದರಿಂದ ಹೊಸದಾಗಿ ಇರುವಕ್ಕಿ ಗ್ರಾಮದಲ್ಲಿ ಸಂಸ್ಥೆಯನ್ನು ವರ್ಗಾಯಿಸುವ ಮೂಲ ಉದ್ದೇಶವು ಯಾವುದೇ ಅಂಶದಲ್ಲೂ ಸ್ಪಷ್ಟವಾಗಿರುವುದಿಲ್ಲ. ಹಾಗೂ ಹಾಲಿ ಗುರುತಿಸಿರುವ ಪ್ರದೇಶವು ಜಿಲ್ಲಾಕೇಂದ್ರದಿಂದ ಸುಮಾರು 60.00 ಕಿ.ಮೀ ಅಧಿಕ ದೂರವಿರುವುದರಿಂದ ವಿದ್ಯಾರ್ಥಿಗಳಿಗೆ/ಅಧಿಕಾರಿಗಳಿಗೆ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಅನಾನುಕೂಲವಾಗಲಿದ್ದು, ಈ ರೀತಿಯ ಯಾವುದೇ ಅಂಶವನ್ನು ಪರಿಗಣಿಸಿರುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಹಾಗೂ ಈ ರೀತಿಯ ಯಾವುದೇ ಮೂಲಭೂತ ಸೌಕರ್ಯಗಳ ಬಗ್ಗೆ ಗಮನಿಸದೇ ಈ ರೀತಿಯ ತುರ್ತಾದ ಅಥವಾ ಒಂದೇ ಜಿಲ್ಲೆಯೊಳಗೆ ವರ್ಗಾಯಿಸುವ ಪ್ರಕ್ರಿಯೆಗೆ ಯಾವ ರೀತಿಯ ಮಾನದಂಡಗಳ ಆಧಾರದ ಮೇಲೆ ನಿರ್ಧರಿಸಿದೆ ಎಂಬುದು ತಿಳಿಯುವುದಿಲ್ಲ. 2) ಸದರಿ ಪ್ರದೇಶವು ಸುತ್ತಲಿನ ಗೋಮಾಳ ಖರಾಬುಜಾಗ, ಗ್ರೀನ್‌ಬೆಲ್ಟ್, ಅರಣ್ಯಭೂಮಿ ಪ್ರದೇಶವೆಂದು ಸ್ಥಳೀಯ ಗ್ರಾಮಸ್ಥರು ನೀಡಿದ್ದ ಪತ್ರಕ್ಕೆ ಸರ್ಕಾರವು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದಿರುವುದು ಸಂಸ್ಥೆಯು ಗಮನಿಸಿರುವುದೇ. 3) ಈ ಪ್ರದೇಶದ ವ್ಯಾಪ್ತಿಯಲ್ಲಿ ಹಸ್ತಾಂತರಿಸುವ ಮುನ್ನ ಅರಣ್ಯ ಇಲಾಖೆ ಪಶುಸಂಗೂಪನಾ ಇಲಾಖೆ ಮತ್ತು ಪರಿಸರ ಇಲಾಖೆಯಿಂದ ನೀರಪೇಕ್ಷಣಾ ಪತ್ರ ಪಡೆಯದಿರುವುದು ಕಂಡುಬಂದಿದೆ. ಹಾಗೂ ಈ ಪ್ರದೇಶದ ಭೂಭಾಗದಲ್ಲಿರುವ ಅಪಾರ ಪ್ರಮಾಣದ ವನ್ಯಜೀವಿಗಳ ರಕ್ಷಣೆ, ಗಿಡಮೂಲಿಕೆ ಸಂಪತ್ತುಗಳ ನೈಸರ್ಗಿಕ ಅಂಶಗಳನ್ನು ಪರಿಗಣಿಸಿರುವ ಅಂಶದ ವಿವರವಿರುವುದಿಲ್ಲ. 4) ಮುಂದುವರೆದು ಈ ಸಂಸ್ಥೆಯನ್ನು ಪ್ರಸ್ತುತ ನಿರ್ವಹಿಸುತ್ತಿರುವ ಸ್ಥಳದಿಂದ ವರ್ಗಾಯಿಸಬೇಕಾದ ಅಗತ್ಯತೆ ಮತ್ತು ಅನಿವಾರ್ಯತೆಯನ್ನು ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸುತ್ತಾ, ಈ ಬಗ್ಗೆ ಸ್ಪಷ್ಟ ಮಾಹಿತಿ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ತಿಳಿಸುತ್ತಾ, ಇದೊಂದು ಅನಗತ್ಯವಾದ ನಿರರ್ಥಕ ವೆಚ್ಚವೆಂದು ಅಭಿಪ್ರಾಯಪಡಬಹುದಾಗಿದೆ. 5) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ/04/ಎಂಜಿಎಸ್/2012 ಬೆಂಗಳೂರು ದಿನಾಂಕ:30-01-2015 ಪ್ರಸ್ತಾಪಿತವಾದ ಮಂಜೂರಾದ ಪ್ರದೇಶವನ್ನು ಅಭಿವೃದ್ಧಿಗಾಗಿ ಎರಡು ವರ್ಷದೊಳಗಾಗಿ ಕ್ರಮಕೈಗೊಳ್ಳಬೇಕೆಂದು ತಿಳಿಸಿದ್ದು, ಅದರನ್ವಯ ಈವರೆಗಿನ ಯಾವುದೇ ಪ್ರಗತಿ ಆಗಿಲ್ಲದಿರುವುದು ವ್ಯಕ್ತವಾಗಿದೆ. 6) ಸರ್ಕಾರದ ಆದೇಶ ಸಂಖ್ಯೆ: ಕೃಇ/07/ಕೃವಿಶಿ/2015 ದಿ॥8-1-2016 ರಲ್ಲಿ ಒಟ್ಟಾರೆ ಅಭಿವೃದ್ಧಿಪಡಿಸಬೇಕಾದ ಪ್ರಸ್ತಾವನೆಯ ಕೆಲವೊಂದು	ಗುರುತಿಸಿರುವ, ಇರುವಕ್ಕಿಗೆ ಸ್ಥಳಾಂತರಗೊಳಿಸಿರುವುದು ಸೂಕ್ತ ಹಾಗೂ ಅನಿವಾರ್ಯವಾಗಿದ್ದು, ಸರ್ಕಾರಿ ಆದೇಶದ ಪ್ರಕಾರ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಇದರಲ್ಲಿ ವಿದ್ಯಾರ್ಥಿ/ಅಧಿಕಾರಿ/ಸಿಬ್ಬಂದಿಗಳ ಅನಾನುಕೂಲತೆಯ ಪ್ರಶ್ನೆ ಉದ್ಭವಿಸುವುದಿಲ್ಲ. 1) ಕಂದಾಯ ಇಲಾಖೆಯಿಂದ ಕ್ರಮ ವಹಿಸಬೇಕಾಗಿರುತ್ತದೆ. 2) ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಕೋರಲಾಗಿದೆ. 3) ಇದನ್ನು ಅಗತ್ಯತೆ ಇರುವ ಕಾರಣದಿಂದಲೇ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸರ್ಕಾರದ ಅನುಮೋದನೆ ಪಡೆದು ಕಾಮಗಾರಿಯನ್ನು ಟೆಂಡರ್ ಮೂಲಕ ನಿರ್ವಹಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಬೆಳವಣಿಗೆ ಮತ್ತು ಹಿತ ದೃಷ್ಟಿಯಿಂದ ಈ ಕ್ರಮ ಕೈಗೊಂಡಿದ್ದು, ಇದನ್ನು ನಿರರ್ಥಕ ವೆಚ್ಚ ಎಂಬುದಾಗಿ ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಪಡುವುದು ಸಮಂಜಸವಾಗಿರುವುದಿಲ್ಲ. 4) ಕಾಮಗಾರಿಯನ್ನು ಟೆಂಡರ್ ಮುಖಾಂತರ M/S NCC Ltd, ಬೆಂಗಳೂರು ಇವರಿಗೆ ಕೆ.ಹೆಚ್.ಬಿ. ಬೆಂಗಳೂರು ಇವರಿಂದ ಟೆಂಡರ್ ಮುಖಾಂತರ ವಹಿಸಿಕೊಡಲಾಗಿದ್ದು, ಒಪ್ಪಂದದ ಪ್ರಕಾರ ಕಾಮಗಾರಿಯನ್ನು 17.07.2019 ಕ್ಕೆ ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರಸ್ತುತ ಕಾಮಗಾರಿ ಕ್ಷಿಪ್ರ ಪ್ರಗತಿಯಲ್ಲಿರುತ್ತದೆ. 5) 6) ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರದ

		ಅಂಶಗಳನ್ನು ತುರ್ತಾಗಿ ಅಗತ್ಯವಿಲ್ಲದ ಕಾರಣ ಅವುಗಳನ್ನು ಸೀಮಿತಗೊಳಿಸಿ ರೂ.150.00 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಅದರಲ್ಲಿ KTPP ನಿಯಮ 3ನೇ ಸಮಾಲೋಚನೆ DPR ತಯಾರಿಕೆ ಎಲ್ಲಾ ಟೆಂಡರ್ ಆಧಾರದ ಮೇಲೆ ನಿಗದಿಪಡಿಸಬೇಕೆಂದು ತಿಳಿಸಿದೆ. 7) ಆದಾಗ್ಯೂ ಕುಲಪತಿಗಳ ಕಛೇರಿ ಪತ್ರ ಸಂಖ್ಯೆಯ ದಿನಾಂಕ:10-03-2016 ರಲ್ಲಿ ಸದರಿ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ನೀಡಲು ಶಿಫಾರಸ್ಸು ಮಾಡಿದೆ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಈ ಕೆಳಗಿನ ಅಂಶಗಳನ್ನು ಗಮನಿಸಿರುವುದೇ? ▪ 1. ಕೆ.ಹೆಚ್.ಬಿ ರವರಿಗೆ ನೀಡಲು ಸಿಂಡಿಕೇಟ್ ಕೌನ್ಸಿಲ್, ಅಕಾಡಮಿ ಸಭೆಯ ಅನುಮೋದನೆ ಪಡೆದಿರುವ ನಿರ್ಣಯ ▪ 2) ಕೆ.ಹೆಚ್.ಬಿ ಸಂಸ್ಥೆಯು ವಾಸಮನೆ/ಸೈಟು ನಿರ್ಮಾಣ ಮಾಡುವ ಸಂಸ್ಥೆಯಾಗಿದ್ದು, ಇದಕ್ಕೆ ಅಭಿವೃದ್ಧಿ ಕಾರ್ಯದ ಕಾಮಗಾರಿಯನ್ನು ವಹಿಸಿರುವಲ್ಲಿ ಯಾವ ನಿಖರವಾದ ಮಾನದಂಡದ ಮೇಲೆ ನಿರ್ಧರಿಸಿದೆ. ▪ 3) ಈ ಕಾಮಗಾರಿ ನಿರ್ವಹಿಸಲು K.H.B ರವರಿಂದ ಪ್ರಸ್ತಾವನೆ ಬಂದಿರುವುದೇ ಹಾಗೂ ಅವರ ಬಳಿ ಇರುವ ತಾಂತ್ರಿಕ ಸೌಲಭ್ಯ ಮಾನವ ಸಂಪನ್ಮೂಲ ನೊಂದಣಿ ಹಾಗೂ ಅಗತ್ಯ ಸಮಯಾವಕಾಶಗಳ ಬಗ್ಗೆ ಪರಿಗಣಿಸಿರುವುದೇ. ▪ 4) K.H.Bಸಂಸ್ಥೆಗೆ ಬದಲಾಗಿ C.E,C&B Blove PD ರವರನ್ನು ಸಂಪರ್ಕಿಸದಿರಲು ಕಾರಣ. ▪ 5) ಸದರಿ ಸಂಸ್ಥೆಯಿಂದಲೇ ಟೆಂಡರ್ ಆಹ್ವಾನಿಸದಿರಲು ಆಗಿರುವ ಮೂಲ ತೊಂದರೆ ಬಗ್ಗೆ ಸ್ಪಷ್ಟೀಕರಣ. ▪ 6) ಈ ರೀತಿ ವಿಕಾಪಿಕ ಪ್ರಸ್ತಾವನೆ ಸಲ್ಲಿಸುವುದರಿಂದ ಆಗಬಹುದಾದ ಸಂಸ್ಥೆಯ ನಷ್ಟ ಸ್ಪರ್ಧಾತ್ಮಕ ದರದಿಂದ ವಂಚಿತರಾಗುವುದು ಟೆಂಡರ್ ಪ್ರೀಮಿಯಂನಲ್ಲಿ ಉಳಿತಾಯ ನಿರೀಕ್ಷೆ ಇವೆಲ್ಲವುಗಳನ್ನು ಗಮನಿಸಿರುವುದೇ? ▪ 7) ಕೆ.ಹೆಚ್.ಬಿ ರವರ ಒಡಂಬಡಿಕೆ ಒಪ್ಪಂದದಲ್ಲಿ ಕಾಮಗಾರಿ ಪ್ರಾರಂಭಿಸಬೇಕಾದ ದಿನಾಂಕ ಹಾಗೂ ಪೂರ್ಣಗೊಳಿಸಲು ಬೇಕಾದ ಅವಧಿ ಹಾಗೂ ಶಾಸನಬದ್ಧ ತೆರಿಗೆಗಳ ಪ್ರಸ್ತಾವನೆ ಇರುವುದಿಲ್ಲ. ▪ 8) ಪ್ರಸ್ತುತ ಕೆ.ಹೆಚ್.ಬಿ ಸಂಸ್ಥೆಗೆ ವಿಶ್ವವಿದ್ಯಾಲಯದಿಂದ ಬಿಡುಗಡೆಯಾದ ಅನುದಾನವೆಷ್ಟು? ಎಂಬ ಬಗ್ಗೆ ವಿವರ	ಮಟ್ಟದಲ್ಲಿ ಆದೇಶ ಹೊರಡಿಸಲಾಗಿದೆ. ಸಮಾಲೋಚನೆ ವಿವರವಾದ ಯೋಜನಾ ವರದಿ(ಡಿಪಿಆರ್) ತಯಾರಿಕೆಯ ಪ್ರಕ್ರಿಯೆಯನ್ನು ಟೆಂಡರ್ ಮೂಲಕವೇ ನಿರ್ವಹಿಸಲಾಗಿದೆ. 1) ಈ ವಿಷಯದ ಬಗ್ಗೆ 10 ನೇ ವ್ಯವಸ್ಥಾಪನಾ ಮಂಡಳಿ ಸಭೆಯ ದಿನಾಂಕ:15.03.2016ರ ಐಟಂ ನಂ. 07 ರಲ್ಲಿ ಅನುಮೋದನೆ ಪಡೆಯಲಾಗಿದೆ. *2)* ಈ ಬಗ್ಗೆ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಗೃಹ ಮಂಡಳಿಯೊಂದಿಗೆ ಮಾಡಿಕೊಳ್ಳಲಾದ ಒಡಂಬಡಿಕೆ ಪತ್ರ ದಿನಾಂಕ: 18.04.2016 ರ ಕ್ರಮ ಸಂಖ್ಯೆ 04 ರಿಂದ 06 ರಲ್ಲಿ ವಿವರಿಸಲಾಗಿದೆ. ಪ್ರಸ್ತುತ ಕೆ.ಹೆಚ್.ಬಿ ಯಿಂದ M/S NCC Ltd, ಬೆಂಗಳೂರು ಇವರಿಗೆ ಕಾಮಗಾರಿ ನಿರ್ವಹಿಸಲು ಕರಾರು ಒಪ್ಪಂದ ಮಾಡಿಕೊಂಡು ಕೆಲಸ ನಿರ್ವಹಿಸಲಾಗುತ್ತಿದೆ. 3) ಒಡಂಬಡಿಕೆಯ ಕ್ರಮ ಸಂಕ್ಯೆ 05 ರಲ್ಲಿ ಒಪ್ಪಿಕೊಂಡಂತೆ ಕರ್ನಾಟಕ ಗೃಹಮಂಡಳಿಯು ಪಾರದರ್ಶಕವಾಗಿ ಟೆಂಡರ್ ಕರೆದು, ಮಂಡಳಿಯ ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ಮುಂದಿನ ಕ್ರಮ ವಹಿಸಬೇಕಾಗುತ್ತದೆ. 4) ವಿಶ್ವವಿದ್ಯಾಲಯಕ್ಕೆ ಇದರ ಅಗತ್ಯತೆ ಕಂಡುಬಂದಿರುವುದಿಲ್ಲ 5) ವಿಶ್ವವಿದ್ಯಾಲಯದಿಂದ ಬೃಹತ್ ಮಟ್ಟದ ಕಟ್ಟಡವನ್ನು ನಿರ್ಮಾಣಗೊಳಿಸಲು ಹಾಗೂ ನಿಯಾಮಾನುಸಾರ ಈ ಬಗ್ಗೆ ಪ್ರಕ್ರಿಯೆ ಕೈಗೊಳ್ಳಲು ಹಾಗೂ ನಿರ್ಧರಿಸಲು, ಸೂಕ್ತ ತಾಂತ್ರಿಕ ಅಧಿಕಾರಿಗಳ ಕೊರತೆ ಇರುವುದನ್ನು ಪರಿಗಣಿಸಿ ದಿನಾಂಕ:15.03.2016 ವ್ಯವಸ್ಥಾಪನಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ. 6) ಕರ್ನಾಟಕ ಗೃಹ ಮಂಡಳಿಯಿಂದ ಪಾರದರ್ಶಕತೆಗೆ ಅನುಗುಣವಾಗಿ ಟೆಂಡರ್ ಅನ್ನು ಆಹ್ವಾನಿಸಿರುವುದರಿಂದ ಸ್ಪರ್ಧಾತ್ಮಕ ದರದಿಂದ ವಂಚಿತರಾಗುವ ಅವಕಾಶವನ್ನು ಮೊಟಕುಗೊಳಿಸುವಂತಾಗಿರುವುದಿಲ್ಲ. 7) ಟೆಂಡರ್ ಪ್ರಕಟಣೆಯ ಸಂದರ್ಭದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿಯ ಮಾಹಿತಿ ಸಿಗುವುದರಿಂದ ಹಾಗೂ ಟೆಂಡರ್ ಅಂಗೀಕೃತವಾದ ನಂತರವೇ, ಕಾಮಗಾರಿ ಪ್ರಾರಂಭ ದಿನಾಂಕದ ಬಗ್ಗೆ ಸ್ಪಷ್ಟ ಮಾಹಿತಿ ಸಿಗುವುದರಿಂದ

		ಅಗತ್ಯ ಹಾಗೂ ಪರಿಷ್ಕೃತ ಒಡಂಬಡಿಕೆಯ ಪ್ರತಿ ಲಭ್ಯವಿರುವುದಿಲ್ಲ. ▪ 9) ವಿಶ್ವವಿದ್ಯಾಲಯದ ಯಾವ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ ಕೆ.ಹೆಚ್.ಬಿ ರವರಿಗೆ ಅನುಮೋದಿಸಿದೆ. ಹಾಗೂ ಈ ಕ್ರಮಕ್ಕೆ ಸರ್ಕಾರದ ಪೂರ್ವಾನುಮತಿ ಪಡೆದಿರುವ ವಿವರ ಅಗತ್ಯ.	ಒಡಂಬಡಿಕೆಯಲ್ಲಿ ಪ್ರಾರಂಭದ ದಿನಾಂಕದ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. 8) ವಿಶ್ವವಿದ್ಯಾಲಯದಿಂದ K.H.B ಸಂಸ್ಥೆಗೆ ಈ ವರೆಗೆ ರೂ.60.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. 9) ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಸಮಿತಿ ಸಭೆಯ ತೀರ್ಮಾನ, ಹಾಗೂ ವಿಶ್ವವಿದ್ಯಾಲಯದ ವಿಕಸನವನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದ ಮಟ್ಟದಲ್ಲಿ ವ್ಯವಹರಿಸಿ ಅನುಮೋದನೆ ಪಡೆದುಕೊಂಡ ನಂತರ ನಿಯಾಮಾನುಸಾರವಾಗಿ ಕಾಮಗಾರಿ ಕೈಗೊಂಡಿದ್ದು ಈಗಾಗಲೇ ಶೇ.50% ಕ್ಕಿಂತ ಹೆಚ್ಚು ಪ್ರಗತಿ ಸಾಧಿಸಿರುವ ಅಂಶವನ್ನು ಪರಿಗಣಿಸಿ ಈ ಕಂಡಿಕೆಯನ್ನು ಕೈಬಿಡಲು ಕೋರಲಾಗಿದೆ.
04	23	ಆಸ್ತಿ ಅಧಿಕಾರಿಯವರಿಗೆ ಪ್ರತ್ಯಾಯೋಚಿಸಿದ ಅಧಿಕಾರ ವ್ಯಾಪ್ತಿಯ ಬಗ್ಗೆ:– ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆಯಲ್ಲಿನ ಅಧಿಕಾರ ವ್ಯಾಪ್ತಿಯ ಪ್ರತ್ಯಾಲೋಚನೆ ಹಾಗೂ ಆರ್ಥಿಕ ಅಧಿಕಾರಗಳ ವಿವರಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಆಸ್ತಿ ಅಧಿಕಾರಿಯವರಿಗೆ(Est Officer) ಪ್ರತ್ಯೇಕವಾಗಿ ಡ್ರಾಯಿಂಗ್ ಅಧಿಕಾರಿ ಸಭೆಸಮಾರಂಭಗಳ ತಯಾರಿ ಅಧಿಕಾರಿಗಳ ಸಭೆ ಆಸ್ತಿಗಳ ಸಂರಕ್ಷಣೆ/ಸೃಜನೆಗಾಗಿ, ಮತ್ತು ಸಿವಿಲ್ ಕಾಮಗಾರಿಗಳ ಮೇಲುಸ್ತುವಾರಿಗಾಗಿ ನೇಮಿಸಲಾಗಿದೆ. ಅದರಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿದೆ. A. ವಾಸ್ತವಿಕವಾಗಿ ಆಸ್ತಿ ಅಧಿಕಾರಿಯವರನ್ನು ಹಾಗೂ ಪೂರಕ ಹುದ್ದೆಯನ್ನು ಸೃಜಿಸಿರುವುದು ಆಸ್ತಿಗಳ ಸಂರಕ್ಷಣೆ ಹಾಗೂ ಹೊಸದಾಗಿ ಆಸ್ತಿಗಳ ಸೃಜನೆಗಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ನಡೆಯುವ ಕೆಲವೊಂದು ಅಧಿಕೃತ ಸಭೆ ಸಮಾರಂಭಗಳ ವ್ಯವಸ್ಥೆ ಇನ್ನಿತರೆ ಕೆಲವೊಂದು ಕರ್ತವ್ಯಗಳನ್ನು ಮೇಲಧಿಕಾರಿಗಳು ವಹಿಸುವಂತೆ ನಿರ್ವಹಿಸುವುದು. ಆದರೆ ಈ ಕೆಳಕಂಡ ಕೆಲವೊಂದು ಕರ್ತವ್ಯಗಳನ್ನು ವಹಿಸಲಾಗಿದೆ. 1. ಕಾಮಗಾರಿಗಳ ಅನುಷ್ಠಾನ/ಮೇಲ್ವಿಚಾರಣೆ. 2. ಡ್ರಾಯಿಂಗ್ ಅಧಿಕಾರಿ ಹುದ್ದೆ. ಇವುಗಳನ್ನು ವಹಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸಿರುವ ಬಗ್ಗೆ ಮಾಹಿತಿ ಕೋರಿದೆ. ಅ) ಯಾವ ನಿಯಮ ಹಾಗೂ ಪ್ರತ್ಯಾಯೋಜಿಸಿದ ಆರ್ಥಿಕ ನಿಯಮದ ಮೇರೆಗೆ ವಹಿಸಿದೆ? ಆ) ಕಾಮಗಾರಿಗಳ ಅನುಷ್ಠಾನ/ಮೇಲ್ವಿಚಾರಣೆಯನ್ನು ತಾಂತ್ರಿಕವಾಗಿ ನೈಪುಣ್ಯರಲ್ಲದ ತಾಂತ್ರಿಕೇತರ ಅಧಿಕಾರಿಯವರಿಗೆ ಯಾವ ಪ್ರದತ್ತವಾದ	

		ನಿಯಮದ ಅಡಿಯಲ್ಲಿ ನಿರ್ವಹಿಸಲು ಅವಕಾಶ ನೀಡಲಾಗಿದೆ. ಇ) ಕರ್ನಾಟಕ ಆರ್ಥಿಕ ಸಂಹಿತೆಯ ಯಾವ ನಿಯಮದ ಅಡಿಯಲ್ಲಿ ಡ್ರಾಯಿಂಗ್ ಅಧಿಕಾರಿಯ ಕರ್ತವ್ಯವನ್ನು ವಹಿಸಿದೆ. ಈ) ಆರ್ಥಿಕ ವರ್ಷಾಂತ್ಯದಲ್ಲಿ ಕೇವಲ ಹಣ ಖರ್ಚು ಮಾಡುವ ಉದ್ದೇಶದಿಂದ ಎ.ಸಿ ಬಿಲ್ಲಿನ ಮೂಲಕ ಯಾವ ನಿಯಮದ ಅಡಿಯಲ್ಲಿ ಮುಂಗಡ ನೀಡಲಾಗಿದೆ. ಇದಕ್ಕೆ ಸಕ್ಷಮ ಪ್ರಾಧಿಕಾರಕ್ಕೆ ಯಾವ ಸಮರ್ಥನೆ ಆಧಾರದ ಮೇಲೆ ಮಂಜೂರು ಮಾಡಿದೆ. ಉ) ಮುಂಗಡವನ್ನು 1.00 ಕೋಟಿಗೂ ಮೀರಿ ನೀಡಿದ್ದು, ಇದಕ್ಕೆ ಸಕ್ಷಮ ಪ್ರಾಧಿಕಾರದ ಅಧಿಕಾರಿಗೆ ಯಾವ ನಿಯಮದ ಅಡಿಯಲ್ಲಿ ಅವಕಾಶವಿದೆ. ಊ) ಕರ್ನಾಟಕ ಆರ್ಥಿಕ ನಿಯಮಾವಳಿಯ ಹಾಗೂ ಸಾದಿಲ್ವಾರು ಕೈಪಿಡಿ 1958ರಂತೆ ಎ.ಸಿ ಬಿಲ್ಲಿನ ಮೂಲಕ ತುರ್ತು ಸಂಧರ್ಭ ಹೊರತುಪಡಿಸಿ ಯಾವುದೇ ಮುಂಗಡ ನೀಡಲು ನಿರ್ಭಂಧವಿದ್ದರೂ ಸಹ ಸರ್ಕಾರದ ನಿಯಮದ ಸ್ಪಷ್ಟ ಉಲ್ಲಂಘನೆಯಾಗಿದೆ. ಹಾಗೂ ಈವರೆಗೂ N.D.C ಬಿಲ್ಲುಗಳ ಮೂಲಕ ಇತ್ಯರ್ಥವಾಗದೆ ಇರುವುದು ಸರ್ಕಾರಿ ಹಣದ ತಾತ್ಕಾಲಿಕ ದುರುಪಯೋಗವೆಂದು ಪರಿಗಣಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದ ಸ್ಪಷ್ಟನೆ ಕೋರಿದೆ.	ಇ)ವಿಶ್ವವಿದ್ಯಾಲಯವು ಹೊಸದಾಗಿ ಪ್ರಾರಂಭವಾಗಿದ್ದು, ಮಂಜೂರಾದ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದುದರಿಂದ, ಆಸ್ತಿ ಅಧಿಕಾರಿಗಳಿಗೆ ಡ್ರಾಯಿಂಗ್ ಅಧಿಕಾರಿಯ ಕರ್ತವ್ಯವನ್ನು ವಹಿಸಲಾಗಿದೆ. ಈ) ಆರ್ಥಿಕ ವರ್ಷಾಂತ್ಯದಲ್ಲಿ ವೆಚ್ಚ ಮಾಡಬೇಕೆಂಬ ಉದ್ದೇಶದಿಂದಲೇ ಎ.ಸಿ. ಬಿಲ್ಲನ್ನು ಡ್ರಾ ಮಾಡಿ ನೀಡಿರುವುದಿಲ್ಲ. ಉ)ಒಂದೇ ಪ್ರಕರಣಕ್ಕೆ ಏಕಕಾಲದಲ್ಲಿ ರೂ. 1.00 ಕೋಟಿಗೂ ಮೀರಿದ ಎ.ಸಿ.ಬಿಲ್ಲುಗಳನ್ನು ನೀಡಲಾಗಿರುವುದಿಲ್ಲ. ಊ). ಎ.ಸಿ. ಬಿಲ್ಲುಗಳ ಮೂಲಕ ಪಾವತಿಸಿದ ಬಿಲ್ಲುಗಳ ಎದುರಾಗಿ N.D.C ಬಿಲ್ಲುಗಳನ್ನು ನಿರ್ದಿಷ್ಟ ಸಮಯದೊಳಗೆ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದ್ದು 2013–14 ನ್ನು ಸಂಬಂಧಿಸಿದ ಎಲ್ಲಾ ಎ.ಸಿ. ಬಿಲ್ಲುಗಳಿಗೆ N.D.C ಬಿಲ್ಲುಗಳನ್ನು ಸಲ್ಲಿಸಿದ್ದು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ಎ.ಸಿ. ಬಿಲ್‌ಗಳ ಮುಂಗಡ ಪಾವತಿಯನ್ನು ತಾತ್ಕಾಲಿಕ ಹಣ ದುರುಪಯೋಗ ಎಂದು ಪರಿಗಣಿಸದಿರಲು ಕೋರಿದೆ.
04	24	**ವಿಶ್ವವಿದ್ಯಾಲಯ ವ್ಯಾಪ್ತಿಯ ವಿವಿಧ ಘಟಕಗಳಿಗೆ ಹಣಕಾಸು ವಿಭಾಗದಿಂದ ನೀಡಿದ ಅನುದಾನಕ್ಕೆ ಪೂರಕವಾಗಿ ಆರ್ಥಿಕ ನಿಯಂತ್ರಣ ಹಾಗೂ ಆಂತರೀಕ ಮೇಲ್ವಚಾರಣೆಯಲ್ಲಿ ಆಗಿರುವ ವೈಫಲ್ಯ:–** ಪ್ರಸಕ್ತ 2013–14ನೇ ಸಾಲಿನಲ್ಲಿ ಸಂಸ್ಥೆಯ ವ್ಯಾಪ್ತಿಯ ಒಟ್ಟಾರೆ 23 ವಿವಿಧ ಘಟಕಗಳಿಗೆ ಇಂಪ್ರೆಸ್ಟ್‌ಮೊತ್ತ, ರಿವಾಲ್ವಿಂಗ್ ಫಂಡ್ ಹಾಗೂ ಎ.ಸಿ ಬಿಲ್ಲುಗಳ ಮೂಲಕ ಮುಂಗಡಗಳನ್ನು ನೀಡಲಾಗಿದೆ. ತತ್ಸಂಬಂಧದ ಎಲ್ಲಾ ಘಟಕಗಳನ್ನು ಸದರಿ ಸಾಲಿನಲ್ಲಿ ಆಂತರಿಕ ಲೆಕ್ಕಪರಿಶೋಧನೆ/ತಪಾಸಣೆ ಕೈಗೊಂಡು ಅವರುಗಳು ನಿರ್ವಹಿಸಿದ ಕಾರ್ಯವಿಧಾನಗಳು ಹಾಗೂ ಹಣಕಾಸಿನ ವೆಚ್ಚದ ಬಗ್ಗೆ ಯಾವುದೇ ಕ್ರಮವಹಿಸದಿರುವುದು ಕಂಡುಬಂದಿದ್ದು, ಇದರಿಂದ ವಿಶ್ವವಿದ್ಯಾಲಯದ ವಿವಿಧ ಘಟಕಗಳ ಮೇಲೆ ಯಾವುದೇ ನಿಯಂತ್ರಣವಿಲ್ಲದೇ ಆರ್ಥಿಕ ನಿಯಂತ್ರಣ ಮತ್ತು ಆಂತರಿಕ ಮೇಲ್ವಿಚಾರಣೆ ವೈಫಲ್ಯವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಅದರಲ್ಲಿನ ಪ್ರಮುಖ ನ್ಯೂನತೆಗಳು ಈ ಕೆಳಗಿನಂತಿದೆ. ಅದರನ್ವಯ ಒಟ್ಟಾರೆ 23 ವಿವಿಧ ಘಟಕಗಳಿಗೆ ನೀಡಲಾದ ಎಲ್ಲಾ ರೀತಿಯ ಮುಂಗಡ ಹಾಗೂ ಸಂಸ್ಥೆಗಳಿಗೆ ನೀಡಲಾದ ಎಲ್ಲಾ ರೀತಿಯ ಮುಂಗಡ ಹಾಗೂ ಸಂಸ್ಥೆಗಳಲ್ಲಿ ಉಳಿದಿರುವ ಅಂತಿಮ ಶಿಲ್ಕಿನ ವಿವರ ಈ ಕೆಳಗಿನಂತಿದೆ. i. ರಿವಾಲ್ವಿಂಗ್ ಫಂಡ್‌ನ ಅಂತಿಮ ಶಿಲ್ಕು : 51,44,875 ii. ಇಂಪ್ರೆಸ್ಟ್ ಮೊತ್ತದ ಅಂತಿಮ ಶಿಲ್ಕು : 24.01.002	ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ 2013–14 ರಿಂದ ಹೊಸದಾಗಿ ಪ್ರಾರಂಭವಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 7 ಜಿಲ್ಲೆಗಳು ಒಳಗೊಂಡಂತೆ 4 ಮಹಾವಿದ್ಯಾಲಯಗಳು, 1 ಡಿಪ್ಲಾಮೋ ಕೃಷಿ ಕಾಲೇಜು, 4 ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರಗಳು, 9 ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಗಳು, ಹಾಗೂ 2 ವಿಸ್ತರಣಾ ಶಿಕ್ಷಣ ಘಟಕಗಳು, ಕಾರ್ಯನಿರ್ವಹಿಸುತ್ತಿವೆ. ಇವುಗಳ ಬೇಡಿಕೆಗಳಿಗೆ ಅನುಗುಣವಾಗಿ ಆಯವ್ಯಯ ಮಂಜೂರಾತಿಯನ್ನು ನೀಡಲಾಗಿದೆ. ವಿವಿಯಲ್ಲಿ ಈ ಎಲ್ಲಾ ಘಟಕಗಳಿಗೆ ಬಟವಾಡೆ ಅಧಿಕಾರಿಗಳನ್ನು ಮತ್ತು ಮುಖ್ಯಸ್ಥರನ್ನು ನೇಮಿಸಲಾಗಿದೆ. ಇವರ ಮೇಲ್ವಿಚಾರಣೆಯಲ್ಲಿ ಕೆ.ಎಫ್.ಸಿ ನಿಯಮಾನುಸಾರ ವೆಚ್ಚಗಳನ್ನು ಭರಿಸಲಾಗುತ್ತಿದೆ. ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳಲ್ಲಿ ಸರ್ಕಾರವು ಯಾವ ಉದ್ದೇಶಕ್ಕೆ ಅನುದಾನ ಬಿಡುಗಡೆ ಮಾಡುತ್ತಿದೆಯೋ ಅದೇ ಉದ್ದೇಶಕ್ಕಾಗಿ ಅಂದರೆ ಶಿಕ್ಷಣ, ಸಂಶೋಧನೆ ವಿಸ್ತರಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವೆಚ್ಚವನ್ನು ಭರಿಸಲಾಗುತ್ತಿದೆ. ಹಣಕಾಸು ನಿಯಂತ್ರಣಾಧಿಕಾರಿಗಳು ವಿಶ್ವವಿದ್ಯಾಲಯದ ಅಧೀನ ಕಛೇರಿಗಳ ಬಟವಾಡೆ ಅಧಿಕಾರಿಗಳಿಗೆ ಸುತ್ತೋಲೆಗಳನ್ನು ಹೊರಡಿಸಿ ಲೆಕ್ಕ ಪತ್ರಗಳ ಕ್ರಮಬದ್ಧ ನಿರ್ವಹಣೆಗೆ ಸೂಚನೆಗಳನ್ನು ಆಗಿಂದಾಗ್ಗೆ ನೀಡುತ್ತಿರುತ್ತಾರೆ. ಹಣಕಾಸು ನಿಯಂತ್ರಣವನ್ನು ಹಾಗೂ ನಗದು ಪುಸ್ತಕ

		iii. ಎ.ಸಿ. ಬಿಲ್ಲುಗಳಲ್ಲಿ ಇತ್ಯರ್ಥವಾಗದೇ ಇರುವ ಅಂತಿಮ ಶಿಲ್ಕು : 29,49,067 1,04,94,944 A) ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಘಟಕಗಳಿಗೆ ಯೋಜನೇತರ ವೆಚ್ಚದ ಅಡಿಯಲ್ಲಿ ಅನುದಾನ ನೀಡುವ ಮುನ್ನ ಅವರುಗಳಿಂದ ಸ್ವೀಕರಿಸಿದ ಅಯವ್ಯಯದ ಅವಕಾಶವನ್ನು ಸಂಪೂರ್ಣವಾಗಿ ಪರಿಶೀಲಿಸಿ ಹಾಗೂ ಹಿಂದಿನ ಸಾಲುಗಳ ಸ್ವೀಕೃತಿ/ವೆಚ್ಚ ಪರಿಶೀಲಿಸಿ ತದನಂತರ ಸಲ್ಲಿಸಿರುವ ಪ್ರಸ್ತಾವನೆಗಳನ್ನು ವಿಸ್ತೃತವಾಗಿ ಅಂಗೀಕರಿಸಿರುವ ಬಗ್ಗೆ ಸಮರ್ಥನೆ ನೀಡಲು ಕೋರಿದೆ. B) ಮುಂದುವರಿದು ಒದಗಿಸಲಾದ ಕಛೇರಿ ವೆಚ್ಚದ/ಇತರೆ ವೆಚ್ಚಗಳ ಅಡಿಯಲ್ಲಿನ ಮೊತ್ತವನ್ನು ಯಾವ ನಿಖರತೆಯ ಮಾನದಂಡದ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ ಎಂಬುದನ್ನು ವಿವರಿಸಲು ತಿಳಿಸಿದೆ. ಏಕೆಂದರೆ, ಆಯಾ ಸಂಸ್ಥೆಗಳ ವಾರ್ಷಿಕ ಕಾರ್ಯಕ್ರಮಗಳು, ಹಮ್ಮಿಕೊಂಡಿರುವ ಯೋಜನೆಗಳು ಭೌತಿಕ ಪ್ರಗತಿ ಪೂರಕವಾಗಿ ತಗಲಬಹುದಾದ ವೆಚ್ಚ ಈ ರೀತಿಯ ಎಲ್ಲಾ ಅಂಶಗಳನ್ನು ಪರಿಗಣಿಸಿರುವ ಬಗ್ಗೆ ವಿವರಿಸುವುದು. C) ವಿವಿಧ ಘಟಕಗಳಿಗೆ ಹಾಲಿ ನೀಡಲಾದ ಮುಂಗಡದ ಮೊತ್ತವು ಎಷ್ಟು ಅವಧಿಯಿಂದ ಬಾಕಿ ಉಳಿದಿದೆ ಎಂಬುದನ್ನು ಗಮನಿಸಿದಾಗ ಕರ್ನಾಟಕ ಆರ್ಥಿಕ ಸಂಹಿತೆ 1958 ರ ನಿಯಮ 38 ರ ರೀತ್ಯಾ ಸರ್ಕಾರಿ ಹಣದ ತಾತ್ಕಾಲಿಕ ದುರುಪಯೋಗವಾಗುವ ಪ್ರಸಂಗವನ್ನು ಸಹ ಅಲ್ಲಗಳೆಯುವಂತಿಲ್ಲ. ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಸಮರ್ಥನೆ ನಿರೀಕ್ಷಿಸಿದೆ. D) ಎಲ್ಲಾ ಘಟಕಗಳ ಮುಖ್ಯಸ್ಥರು ಸಹ ಹಣ ಸೆಳೆಯುವ ಪ್ರಾಧಿಕಾರಗಳಾಗಿದ್ದರೂ ಸಹ ಇವರುಗಳು ಪ್ರಾರಂಭಿಕವಾಗಿ ನಿರ್ವಹಿಸಬೇಕಾದ ಮೂಲದಾಖಲಾತಿಗಳ ಲೆಕ್ಕಪತ್ರಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ನಿರ್ವಹಿಸುತ್ತಿರುವುದನ್ನು ಹಣಕಾಸು ನಿಯಂತ್ರಣಾಧಿಕಾರಿಗಳು ಕಾಲಕಾಲಕ್ಕೆ ಪರಿಶೀಲಿಸದಿರುವುದು ಕಂಡುಬಂದಿದೆ. ಇದರಿಂದ ಉಂಟಾಗುವ ಆಂತರಿಕ ನಿಯಂತ್ರಣ ವೈಫಲ್ಯಕ್ಕೆ ಸಕ್ಷಮ ಪ್ರಾಧಿಕಾರವು ಯಾವ ರೀತಿ ಜವಾಬ್ದಾರಿಯಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಲು ತಿಳಿಸಿದೆ. E) ಈ ರೀತಿಯ ಆಂತರೀಕ ಆರ್ಥಿಕ ನಿಯಂತ್ರಣದ ಪರಿಶೀಲನೆ ಇಲ್ಲದಿರುವುದರಿಂದ ಘಟಕಗಳಲ್ಲಿ ನಿರ್ವಹಣೆಯಾಗುವ ಆರ್ಥಿಕ ವ್ಯವಹಾರ ಉಳಿದ ಶಿಲ್ಕು ಯಾವುದರ ಬಗೆಯೂ ಹಣಕಾಸು ವಿಭಾಗದಲ್ಲಿ	ದಾಖಲೆ ಪತ್ರಗಳ ಕ್ರಮಬದ್ಧ ನಿರ್ವಹಣೆಗೆ ಬಟವಾಡೆ ಅಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಆಗಿಂದಾಗ್ಗೆ ಸ್ಥಳೀಯ ಭೇಟಿ ನೀಡಿ ಪರಿಶೀಲಿಸಿ ಕೈಗೊಳ್ಳುವ ಮೂಲಕ ಆರ್ಥಿಕ ಶಿಸ್ತು ಕಾಪಾಡಲಾಗುತ್ತಿದೆ. ಪ್ರಸ್ತುತ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಂದಿಗೆ ಕೀಪ KIPA (ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್ಸ್) ಬೆಂಗಳೂರು ಸಂಸ್ಥೆಯಿಂದ ವಿವಿಧ ಮಹಾ ವಿದ್ಯಾಲಯಗಳು ಹಾಗೂ ಸಂಶೋಧನಾ ಕೇಂದ್ರಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲು ದಿನಾಂಕ: 17.07.2017 ರಿಂದ ಕೀಪ ಲೆಕ್ಕಪರಿಶೋಧಕರನ್ನು ನಿಯೋಜಿಸಲಾಗಿದ್ದು, ಲೆಕ್ಕ ತಪಾಸಣೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಮೇಲಿನ ಅಂಶಗಳನ್ನು ಪರಿಗಣಿಸಿ ಈ ಆಕ್ಷೇಪಣೆ ಪ್ಯಾರಾ ಕೈಬಿಡಲು ಕೋರಲಾಗಿದೆ.

		ಸ್ಪಷ್ಟವಾದ/ನಿಖರವಾದ ಮಾಹಿತಿದೊರೆಯದ ಕಾರಣ ಲೆಕ್ಕಪತ್ರಗಳಲ್ಲಿ ಸಾಕಷ್ಟು ಗೊಂದಲವಾಗಿ ವಾರ್ಷಿಕ ಲೆಕ್ಕಪತ್ರ ತಯಾರಿಸಲು ವಿಳಂಬವಾಗುವ ಸನ್ನಿವೇಶ ಬಹಳಷ್ಟಿದೆ. ವಿವಿಧ ಘಟಕಗಳು ಸಲ್ಲಿಸಿರುವ ಎನ್.ಡಿ.ಸಿ. ಬಿಲ್ಲುಗಳನ್ನು ಪರಿಶೀಲಿಸಿದಾಗ ಬಹಳಷ್ಟು ಖರೀದಿ ಪ್ರಕ್ರಿಯೆಯಲ್ಲಿ ಹಣ ಮೌಲ್ಯವನ್ನು ವಿಭಜಿಸಿ ಕೊಟೇಶನ್ ಮೂಲಕ ಬೇಕಾಬಿಟ್ಟಿಯಾಗಿ ಖರೀದಿಸಿ ಕೆ.ಟಿ.ಪಿ.ಪಿ ನಿಯಮದ ಸ್ಪಷ್ಟ ಉಲ್ಲಂಘನೆ ಎದ್ದುಕಾಣಿಸುತ್ತದೆ. ಮುಂದುವರಿದು ಕೆಲವೊಂದು ಘಟಕಗಳ ಸಿವಿಲ್ ಕಾಮಗಾರಿಗಳಲ್ಲಿ ಪಾಂಡ ಅಭಿವೃದ್ಧಿ ಎರಡು ನಮೂದಿಸಿದ್ದು. ಇದನ್ನು ಕೆ.ಪಿ.ಡಿ.ಡಿ ನಿಯಮಾನುಸಾರ ಬಿಲ್ಲುಗಳನ್ನು ಯಾವುದೇ ಪ್ರಕ್ರಿಯೆ ನಡೆಸದೆ ಕರ್ತವ್ಯ ನಿರ್ವಹಿಸಿ ಹಣ ಪಾವತಿಸಿರುವುದು ಸಿವಿಲ್ ಕಾಮಗಾರಿಗಳ ಮೂಲ ಉದ್ದೇಶವೇ ವಿಫಲವಾಗಿದೆ.	
04	25	**ದಿನಾಂಕ:31-03-2014ರ ವಾರ್ಷಿಕ ಅಂತ್ಯಕ್ಕೆ ಬಳಕೆಯಾಗದೇ ಉಳಿದಿರುವ ಅನುದಾನ ನಿಗದಿಪಡಿಸಿದ ಕಾರ್ಯಕ್ರಮಕ್ಕೆ ಉಪಯೋಗಿಸದಿರುವುದು:-** ಪ್ರಸ್ತುತ ಮೇಲಿನ ವಿಷಯಕ್ಕೆ ಅನುಗುಣವಾಗಿ ದಿನಾಂಕ: 31-03-2014 ರ ವರ್ಷಾಂತ್ಯಕ್ಕೆ ಸದರಿ ಸಂಸ್ಥೆಯಲ್ಲಿ ಈ ಕೆಳಗಿನಂತೆ ಅನುದಾನ ಬಳಕೆಯಾಗದೇ ಬಾಕಿ ಉಳಿದಿರುತ್ತದೆ. A. ಯೋಜನಾ/ಯೋಜನೇತರ ಖಾತೆ — 19,69,31,855 B. ಎನ್.ಪಿ.ಎಸ್ ಯೋಜನೆ — 6,98,139 C. ನಿವೃತ್ತಿ ವೇತನ ಸಾ.ಭ ನಿಧಿ — 88,03,231 ಮೇಲಿನ ಆರ್ಥಿಕ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಪ್ರಮುಖ ಅಂಶಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. 1. ಪ್ರಸಕ್ತ ಮೇಲಿನ ವಿವರಗಳನ್ನು ಗಮನಿಸಿದಾಗ ದಿನಾಂಕ:31-3-2014 ರ ಅಂತ್ಯಕ್ಕೆ ಸಂಸ್ಥೆಯಲ್ಲಿ ಒಟ್ಟಾರೆ ರೂ. 19,69,31,855/- ಬಾಕಿ ಉಳಿದಿರುವುದನ್ನು ಗಮನಿಸಿದಾಗ. ಸರ್ಕಾರವು ನಿಗದಿಪಡಿಸಿದ ಹಾಗೂ ಅವುಗಳ ಅನುಷ್ಠಾನಕ್ಕಾಗಿ ಸೂಚಿಸಿದ ಮಾರ್ಗಸೂಚಿಗಳ ಅನ್ವಯ ವೆಚ್ಚವನ್ನು ಭರಿಸಿ ಕಾಲಕಾಲಕ್ಕೆ ನಿಗದಿತವಾದ ನಮೂನೆಯಲ್ಲಿ ಹಣ ಬಳಕೆ ಪ್ರಮಾಣಪತ್ರವನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಇಲ್ಲದಿದ್ದಲ್ಲಿ ಮುಂಬರುವ ಆರ್ಥಿಕ ವರ್ಷಗಳಲ್ಲಿ ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಕುಂಠಿತವಾಗಬಹುದು ಅಥವಾ ಸರ್ಕಾರವೇ ಕೆಲವೊಂದು ಅನುದಾನ ಬಿಡುಗಡೆ ಮಾಡದೇ ಸ್ಥಗಿತಗೊಳಿಸಲು ಕ್ರಮಕೈಗೊಳ್ಳಬಹುದು. ಇದರಿಂದ ಸಂಸ್ಥೆಯ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡು ಸರ್ಕಾರದ ಮಟ್ಟದಲ್ಲಿ ತೀರಾ ಮುಜುಗರದ ಸನ್ನಿವೇಶವನ್ನು ಸಕ್ಷಮ ಪ್ರಾಧಿಕಾರವು ಎದುರಿಸಬೇಕಾಗುತ್ತದೆ. ಮುಂದುವರಿದು ಮೇಲೆ ವಿವರಿಸಿದ ಕ್ರ.ಸಂ.(ಎ) ನಲ್ಲಿನ ಮೊತ್ತವನ್ನು	ವಿಶ್ವವಿದ್ಯಾಲಯವು ಹೊಸದಾಗಿ ಪ್ರಾರಂಭಗೊಂಡಿದ್ದು, 01.04.2013 ರಿಂದ ಪೂರ್ಣ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆಸ್ತಿ ಅಧಿಕಾರಿಗಳ ನೇಮಕ ಹಾಗೂ ಅಭಿಯಂತರರ ನೇಮಕ ವಿಳಂಬವಾಗಿದ್ದರಿಂದ ಅಭಿವೃದ್ಧಿಕಾರ್ಯಗಳ ಟೆಂಡರ್ ಪ್ರಕ್ರಿಯೆ ನಡೆಸಿ, ನಂತರ ಕಾರ್ಯ ನಿರ್ವಹಿಸುವಲ್ಲಿ ವಿಳಂಬವಾಗಿರುತ್ತದೆ. ಹಾಗಾಗಿ ಮಾರ್ಚ್ 2014 ರಂತ್ಯದಲ್ಲಿ ರೂ. 19,69,31,855/- ಬಾಕಿ ಉಳಿದಿರುತ್ತದೆ ಹಾಗೂ ಎನ್‌ಪಿ ಎಸ್ ಯೋಜನೆ ಮತ್ತು ನಿವೃತ್ತಿ ವೇತನ ನಿಧಿಯಲ್ಲಿ ಶಿಲ್ಕು ಉಳಿದಿರುತ್ತದೆ. ಮುಂದಿನ ಆರ್ಥಿಕ ವರ್ಷದಲ್ಲಿ ಇದನ್ನು ಉಪಯೋಗಿಸಲಾಗಿದ್ದು, ಆ ನಂತರದ ವರ್ಷಗಳಲ್ಲಿ ಅನುದಾನದಿಂದ ಕುಂಠಿತವಾದ ಅಥವಾ ಬಿಡುಗಡೆಗೆ ಸ್ಥಗಿತಗೊಂಡಿರುವ ಯಾವುದೇ ಪ್ರಕರಣಗಳು ಸಂಭವಿಸಿಲ್ಲವೆಂಬ ವಿಷಯವನ್ನು ಗಮನಕ್ಕೆ ತರಲಾಗಿದೆ.

		ಕಾಲಕಾಲಕ್ಕೆ ನಿರ್ದಿಷ್ಟವಾದ ಕಾರ್ಯಕ್ರಮಗಳಿಗೆ ಬಳಸದೇ ಬ್ಯಾಂಕ್ ಖಾತೆಯಲ್ಲಿ ನಿರರ್ಥಕವಾಗಿ ಉಳಿದಿರುವುದನ್ನು ಗಮನಿಸಿದಾಗ ಸಂಸ್ಥೆಯ ಸಕ್ಷಮ ಪ್ರಾಧಿಕಾರಕ್ಕೆ ಅಭಿವೃದ್ಧಿ ಕಾರ್ಯದ ಬಗ್ಗೆ ಇರುವ ನಿರಾಸಕ್ತಿಯ ಬಗ್ಗೆ ಸೂಕ್ತ ಸಮರ್ಥನೆ ನಿರೀಕ್ಷಿಸಿದೆ. ಒಂದು ವೇಳೆ ಈ ಮೊತ್ತವನ್ನು ಸರ್ಕಾರವು ಅನುಪಯುಕ್ತವೆಂದು ಪರಿಗಣಿಸಿ, ಏಕಾಏಕಿ ಒಟ್ಟಾರೆಯಾಗಿ ಹಿಂಪಡೆದಲ್ಲಿ ಅದರಿಂದ ಆಗುವ ಆಗುಹೋಗುಗಳಿಗೆ ಯಾರು ಜವಾಬ್ದಾರರಾಗುತ್ತಾರೆ ಎಂಬ ಬಗ್ಗೆ ವಿವರಿಸುವುದು ಹಾಗೂ ಈ ಬಗ್ಗೆ ಮಹಾಲೇಖಪಾಲರ ಆಕ್ಷೇಪಣೆ/ಟೀಕೆಯನ್ನು ಅಲ್ಲಗಳೆಯುವಂತಿಲ್ಲ. ಈ ಬಗ್ಗೆ ಸಮರ್ಥನೆ ನೀಡಲು ಕೋರಿದೆ.	ಮೇಲೆ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಅಭಿವೃದ್ಧಿ ಕಾರ್ಯದ ಮೇಲೆ ಪ್ರಾಧಿಕಾರಕ್ಕೆ ನಿರಾಸಕ್ತಿ ಇದೆ ಎಂದು ಬಾವಿಸುವುದು ಸಮಂಜಸವಲ್ಲ ಎಂಬುದಾಗಿ ತಿಳಿಸಲಾಗಿದೆ. ಮುಂದಿನ ಆರ್ಥಿಕ ವರ್ಷಗಳಲ್ಲಿ ಈ ಅನುದಾನವನ್ನು ಬಳಕೆ ಮಾಡಿದ್ದು ಯಾವುದೇ ವ್ಯಪಗತವಾಗಿರುವುದಿಲ್ಲ.
04	26	<u>ಅಗತ್ಯವಾಗಿ ನಿರ್ವಹಿಸಬೇಕಾದ ವಹಿಗಳು ಹಾಗೂ ಅವುಗಳನ್ನು ಹಾಜರುಪಡಿಸದಿರುವುದು:-</u> ಪ್ರಸ್ತುತ ಕಛೇರಿಯಲ್ಲಿ ಅಗತ್ಯವಾಗಿ ನಿರ್ವಹಿಸಬೇಕಾದ ವಹಿಗಳು ಹಾಗೂ ಕಡತಗಳಲ್ಲಿನ ದಾಖಲಾತಿಗಳ ಪೈಕಿ ಈ ಕೆಳಕಂಡ ವಹಿಗಳನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ತಿಳಿಸಲಾಗಿದೆ.ಈ ಬಗ್ಗೆ ಲೆಕ್ಕಪರಿಶೋಧನಾ ವಿಚಾರಣೆ ಸಂಖ್ಯೆ:OL/1617 ರಲ್ಲಿ ಕೋರಿದ್ದರೂ ಸಹ ಇವುಗಳನ್ನು ಲೆಕ್ಕತನಿಖೆಗೆ ಒದಗಿಸದಿರುವುದು ಕಂಡುಬಂದಿದೆ. 1) ಆಸ್ತಿಗಳ ವಹಿ 2) ಪೀಠೋಪಕರಣಗಳ ವಹಿ 3) ಅನುಪಯುಕ್ತ ಸಾಮಗ್ರಿಗಳು ಹಾಗೂ ಅವುಗಳ ಹರಾಜು ವಿವರದ ವಹಿ 4) ರೀಲಿಸ್ ಮೆಟೀರಿಯಲ್ ಅಕೌಂಟ್ ವಹಿ 5) ಭೂ ದಾಖಲೆಗಳ ವಿವರದ ಕಡತ 6) ವಾಹನಗಳ ಲಾಗ್ ಪುಸ್ತಕಗಳು 7) ಸ್ಟಾಂಪ್ ಲೆಕ್ಕದ ವಹಿ 8) ಶ್ರೇಣಿ ವಹಿ/ವೇತನ ಬಡ್ತಿ ವಹಿ ನಗದು ಪುಸ್ತಕ (ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದ್ದು) (KFCನಿಯಮಾನುಸಾರ)	ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 7 ಜಿಲ್ಲೆಗಳು ಒಳಗೊಂಡಂತೆ 4 ಮಹಾವಿದ್ಯಾಲಯಗಳು, 1 ಡಿಪ್ಲಾಮೋ ಕೃಷಿ ಕಾಲೇಜು, 4 ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರಗಳು, 9 ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಗಳು, ಹಾಗೂ 2 ವಿಸ್ತರಣಾ ಶಿಕ್ಷಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ದಾಸ್ತಾನು ಖರೀದಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು, ಕಡತಗಳನ್ನು ಮತ್ತು ವಾಹನ ಲಾಗ್ ಪುಸ್ತಕಗಳನ್ನು ಸಂಬಂಧಿಸಿದ ಕೇಂದ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. ಈ ದಾಖಲಾತಿಗಳನ್ನು ಆಯಾ ಕೇಂದ್ರಗಳಲ್ಲಿ ಸ್ಥಳೀಯ ತಪಾಸಣೆಯ ಸಂದರ್ಭದಲ್ಲಿ ಪರಿಶೀಲಿಸಬಹುದಾಗಿದೆ. ಶಿವಮೊಗ್ಗ ಆವರಣದ ಎಲ್ಲಾ ಕಛೇರಿಗಳ ದಾಸ್ತಾನು ಖರೀದಿ ವಹಿ, ಸಂಗ್ರಹಣೆ ಖಾತೆ ಪುಸ್ತಕ, ವಿತರಣೆ ವಹಿ ಮತ್ತು ವಾಹನ ಲಾಗ್ ಪುಸ್ತಕಗಳನ್ನು ಪರಿಶೀಲನೆಗೆ ಹಾಜರುಪಡಿಸಲಾಗಿದೆ. ಪುನಃ ಮುಂದಿನ ಲೆಕ್ಕ ತನಿಖಾ ಸಂದರ್ಭದಲ್ಲಿ ಪರಿಶೀಲಿಸಬಹುದಾಗಿದೆ. ಆದ್ದರಿಂದ ಈ ಪ್ಯಾರಾ ಕೈಬಿಡಲು ಕೋರಲಾಗಿದೆ. ಕಂಡಿಕೆಯಲ್ಲಿ ಸೂಚಿಸಲಾದ ಎಲ್ಲಾ ವಹಿಗಳನ್ನು ನಿರ್ವಹಿಸಿದ್ದು, ಮುಂದಿನ ಲೆಕ್ಕ ತಪಾಸಣೆಗೆ ಹಾಜರುಪಡಿಸಲು ಕ್ರಮ ಕೈಗೊಳ್ಳಲಾಗುವುದು.
04	27	<u>ಸೇವಾ ಪುಸ್ತಕಗಳ ಪರಿಶೀಲನೆ ಬಗ್ಗೆ:-</u> ಪ್ರಸ್ತುತ 2013-14ನೇ ಸಾಲಿನಲ್ಲಿನ ಲೆಕ್ಕಪರಿಶೋಧನೆಗೆ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಪರಿಶೀಲನೆಗೆ ಒದಗಿಸಿದ್ದು, ಒದಗಿಸಿದ ದಾಖಲೆಗಳು ಹಾಗೂ ಪೂರಕ ಕಡತಗಳೊಂದಿಗೆ ಪರಿಶೀಲಿಸಿದಾಗ ಪುಸಕ್ತ ಸಾಲಿನ	

		ದಾಖಲಾತಿಯಲ್ಲಿ ಯಾವುದೇ ಪ್ರಮುಖ ನ್ಯೂನತೆಗಳು ಕಂಡುಬಂದಿರುವುದಿಲ್ಲ. 1) ಶ್ರೀಮತಿ ಹುಸೇನ್ ಭಾನು – ಅಧಿಕ್ಷಕರು 2) ಮಹೇಶ್.ಎಸ್. ಸೋಮನಕಟ್ಟಿ – ಸಹಾಯಕ 3) ಆರ್. ಆತ್ರೇಯ – ಹಿರಿಯ ಸಹಾಯಕ	ತೆಗೆದುಕೊಳ್ಳಬೇಕಾದ ಯಾವುದೇ ಕ್ರಮ ಇರುವುದಿಲ್ಲ.
04	28	**2013–14ನೇ ಸಾಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗದ, ಲೆಕ್ಕಪರಿಶೋಧನಾ ವರದಿಯ ಪ್ರಮುಖ ಅಂಶಗಳು:–** 1. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಅಧಿನಿಯಮ 2009ರ ಕಾಲಂ 37ರಲ್ಲಿ ತಿಳಿಸಿದ ಕಾಯಿದೆಗೆ ಅನುಗುಣವಾಗಿ ಸಾಮಾನ್ಯ ನಿಧಿಯು ಸೇರಿದಂತೆ ನಿರ್ವಹಿಸುತ್ತಿರುವ ಎಲ್ಲಾ ನಿಧಿಗಳ ನಿರ್ವಹಣೆಯ ಪರಿನಿಯಮ ರಚಿಸುವುದು. 2. ವಾರ್ಷಿಕ ಲೆಕ್ಕಪತ್ರವು ದ್ವಿನಮೂದು ಪದ್ಧತಿಯಲ್ಲಿ ನಿರ್ವಹಿಸುವುದು. 3. ಕಚೇರಿ ನಗದು ಪುಸ್ತಕ ಅಸಮರ್ಪಕ ನಿರ್ವಹಣೆ. 4. ಖರೀದಿ ಹಾಗೂ ಸೇವೆಗಳಲ್ಲಿ ಕರ್ನಾಟಕ ಪಾರದರ್ಶಕತೆ ಹಾಗೂ ನಿಯಮಗಳನ್ನು ಅನುಸರಿಸದೇ ಖರೀದಿ ಮಾಡಿರುವುದು. 5. ನಗದು ಮೂಲಕ ಗುತ್ತಿಗೆದಾರರ ಕೂಲಿ ಕಾರ್ಮಿಕರ ವೇತನವನ್ನು ಪಾವತಿಸಿರುವುದು. 6. ಎ.ಸಿ ಬಿಲ್ಲುಗಳ ಮೂಲಕ ಸೆಳೆದ ಹಣಕ್ಕೆ ಎನ್.ಡಿ.ಸಿ. ಬಿಲ್ಲುಗಳನ್ನು ನಿಗದಿತ ಅವಧಿಯಲ್ಲಿ ಸಲ್ಲಿಸದಿರುವುದು. 7. ಕಾಮಗಾರಿ ಬಿಲ್ಲುಗಳಲ್ಲಿ ಕಾಮಗಾರಿಗಳಿಗೆ ಉಪಯೋಗಿಸಿದTMT steel concrete works ಗಳಿಗೆ ಸಂಬಂಧಪಟ್ಟಂತೆ ಗುಣಮಟ್ಟ ಪ್ರಮಾಣ ಪತ್ರಗಳನ್ನು ಬಿಲ್ಲುಗಳಲ್ಲಿ ಲಗತ್ತಿಸದೆ ಇರುವುದು. 8. ಕಾಮಗಾರಿ ಅಂದಾಜು ಪಟ್ಟಿಗಳನ್ನು ಮಾರ್ಪಾಡು ಮಾಡಿರವುದು. 9. ಮಾರ್ಪಾಡು ಅಂದಾಜುಗಳಲ್ಲಿ ಟೆಂಡರ್ ಪ್ರೀಮಿಯಮ್ ರೀಕಾಸ್ಟ್ ಮಾಡದೇ ಇರುವುದು. ಕೃಷಿ ವಿಶ್ವವಿದ್ಯಾಲಯದಲ್ಲಿ ನಿರ್ವಹಣೆ ಮಾಡಿರುವ ವೆಚ್ಚದ ವಿವರಗಳಿಗೆ ಸಂಬಂಧಿಸಿದಂತೆ ಪ್ರತಿ ಮಾಹೆಗಳಲ್ಲಿ ಹಾಗೂ ಆರ್ಥಿಕ ವರ್ಷದಲ್ಲಿ ಎಷ್ಟು ವೆಚ್ಚವಾಗಿರುತ್ತದೆ? ಎಂಬುದರ ಪರಿಶೀಲಿಸಿ ಆ ಬಗ್ಗೆ ಒಟ್ಟು ಓಚರ್ಸ್‌ಗಳ ಸಂಖ್ಯೆ ವಿವರಗಳ ಮಾಹಿತಿಯನ್ನು ನೀಡಿರುವುದಿಲ್ಲ. ಈ ನಿಟ್ಟಿನಲ್ಲಿ ಪ್ರತಿ ಮಾಹೆಗಳಲ್ಲಿ/ಆರ್ಥಿಕ ವರ್ಷದಲ್ಲಿ ಆಗಬಹುದಾದ ವೆಚ್ಚ, ಓಚರ್ಸ್‌ಗಳ ಮಾಹಿತಿಯನ್ನು ವರ್ಗೀಕೃತ ಫೋಷ್ಯಾರೆಯಲ್ಲಿ ದಾಖಲಿಸಿ ದೃಢೀಕರಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ.	ವಿಶ್ವವಿದ್ಯಾಲಯವು ಹೊಸದಾಗಿ ಪ್ರಾರಂಭಗೊಂಡಿದ್ದು, ಆರಂಭಿಕ ಹಂತದಲ್ಲಿ, ದಾಖಲಾತಿಗಳ ನಿರ್ವಹಣೆಯಲ್ಲಿ ಸ್ವಲ್ಪ ಮಟ್ಟಿಗೆ ನ್ಯೂನತೆಗಳಾಗಿರಬಹುದಾಗಿದ್ದು, ಕಂಡಿಕೆಯ ನಿರ್ದೇಶನದ ಪ್ರಕಾರ, ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸಂಬಂಧಿಸಿದ ಕೇಂದ್ರಗಳ ಮುಖ್ಯಸ್ಥರಿಗೆ ಸೂಚಿಸಲಾಗಿದ್ದು, ಪ್ರಸ್ತುತ ಈ ಬಗ್ಗೆ ನಿಯಾಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.
04	29	**ಕೃಷಿ ವಿಶ್ವವಿದ್ಯಾಲಯದ ಆಸ್ತಿಗಳ ಸಂರಕ್ಷಣೆಗಾಗಿ ವಿಮೆ ಮಾಡಿಸುವ ಬಗ್ಗೆ:–** ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಚರ/ಸ್ಥಿರಾಸ್ತಿಗಳು, ವಿವಿಧ ವಿಭಾಗಗಳಲ್ಲಿರುವ/ ಆವರಣದಲ್ಲಿ ಬಹಳ ಬೆಲೆಯುಳ್ಳ ಸಾಮಾಗ್ರಿಗಳು, ಗಣಕ ಯಂತ್ರಗಳು/ಗಣಕ ಯಂತ್ರಗಳಿಗೆ ಪೂರಕವಾದ	

		ಪರಿಕರಗಳು/ ಸುಸಜ್ಜಿತ ಪ್ರಯೋಗಶಾಲೆಗಳು/ಸಂಸ್ಕರಣಾ ಘಟಕಗಳು/ಬಹಳ ಬೆಲೆಯುಳ್ಳ ಮರಗಳು ಇರುವುದರಿಂದ ಇವುಗಳು ನೈಸರ್ಗಿಕ ವಿಕೋಪಗಳಿಂದ ಹಾನಿ ಉಂಟಾಗುವ ಸಂಭವವಿರುವುದರಿಂದ ಇದರ ಆರ್ಥಿಕ ನಷ್ಟವನ್ನು ಭರಿಸುವ ಸಲುವಾಗಿ ಇಂತಹ ವಸ್ತುಗಳ/ಮರಗಳ ವಿಮೆ ಮಾಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಬೆಲೆ ಬಾಳುವ ವಸ್ತುಗಳ/ಮರಗಳ/ತಂತ್ರಾಶಗಳ ಮೌಲ್ಯವನ್ನು ನಿರ್ಧರಿಸಿ ಇದಕ್ಕೆ ಅನುಗುಣವಾಗಿ ವಿಮೆ ಮಾಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ. ಇಲ್ಲವಾದಲ್ಲಿ ಸಂಬಂಧಿಸಿದ ಅಧಿಕಾರಿ ವರ್ಗದವರು ನೇರ ಹೊಣೆಗಾರರಾಗಿರುತ್ತಾರೆ.	ಈ ಪ್ಯಾರಾವನ್ನು ಕಂಡಿಕೆ 16 ರಲ್ಲಿ ಬರೆಯಲಾಗಿದ್ದು, ಕಂಡಿಕೆ 29 ರಲ್ಲಿ ಪುನರಾವರ್ತನೆಯಾಗಿರುತ್ತದೆ, ಆದ್ದರಿಂದ ಇಲ್ಲಿ ಕೈಬಿಡಲು ಕೋರಿದೆ.
04	30	**ನಗದು ಪುಸ್ತಕ ಮತ್ತು ಲೆಕ್ಕ ಪತ್ರಗಳ ನಿರ್ವಹಣೆಯ ಬಗ್ಗೆ:-** ಸದರಿ ಕಛೇರಿಯ 2013-14ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಮೂಲ ದಾಖಲೆಯಾದ ನಗದು ಪುಸ್ತಕ ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟವರನ್ನು ವಿಚಾರಿಸಿದಾಗನಿಗದಿತ ನಗದು ಪುಸ್ತಕದ ಬದಲಾಗಿ ಒಂದು ಗಣಕೀಕೃತ ಸಾಫ್ಟ್‌ವೇರ್ ತಯಾರಿಸಿ ಸದರಿ ಸಾಫ್ಟ್‌ವೇರ್‌ನಂತೆ ಮಾಹಿತಿಯನ್ನು ನಮೂದು ಮಾಡಲಾಗುತ್ತಿದೆ ಎಂದು ತಿಳಿಸಿರುತ್ತಾರೆ. ಸದರಿ ಸಾಫ್ಟ್‌ವೇರ್ ಮಾಹಿತಿಯನ್ನು ಪರಿಶೀಲಿಸಿದಾಗ ಮಾಹಿತಿಯಲ್ಲಿ ಕಾಮಗಾರಿಯ ಹೆಸರು ಮತ್ತು ಬಿಲ್ಲು ಮೊತ್ತ ಪಾವತಿಯಾದವರ ಹೆಸರು ಇರುವುದಿಲ್ಲ. ಸಾಫ್ಟ್‌ವೇರ್ ನಗದು ಪುಸ್ತಕದಲ್ಲಿ ಕಾಮಗಾರಿಯ ಹೆಸರು ಏಜೆನ್ಸಿ ಅಥವಾ ಗುತ್ತಿಗೆದಾರರ ಹೆಸರು ಇಲ್ಲದೆ ಇರುವುದರಿಂದ ಒಟ್ಟು ಪಾವತಿಗಳು ಯಾವ ಕಾಮಗಾರಿಗೆ ಸಂಬಂಧಪಟ್ಟಂತೆ ಯಾರಿಗೆ ಪಾವತಿಯಾಗಿದೆ ಎಂಬುದನ್ನು ಖಚಿತಪಡಿಸಲು ಸಾಧ್ಯವಾಗಲಿಲ್ಲ. ಈ ರೀತಿ ಅಪೂರ್ಣ ಮಾಹಿತಿಯ ಸಾಫ್ಟ್‌ವೇರ್ ನಗದು ಪುಸ್ತಕ ನಿರ್ವಹಿಸುತ್ತಿರುವುದನ್ನು ಆಕ್ಷೇಪಿಸಲಾಗಿದೆ. ನಗದು ಪುಸ್ತಕದಲ್ಲಿ ಕಾಮಗಾರಿಯ ಮಾಹಿತಿ ಇಲ್ಲದೆ ಇರುವುದರಿಂದ 2013-14ನೇ ಸಾಲಿನಲ್ಲಿ ನಿರ್ವಹಿಸಿದ ಮತ್ತು ಯಾರಿಗೆ ಪಾವತಿಸಿದ ಮೊತ್ತದ ಮಾಹಿತಿ ನಗದು ಪುಸ್ತಕದಲ್ಲಿ ಇಲ್ಲದೆ ಇರುವುದರಿಂದ ಸ್ಪಷ್ಟವಾದ ಲೆಕ್ಕಪರಿಶೋಧನೆ ಮಾಡಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಕೂಡಲೇ ಕ್ರಮ ವಹಿಸಿ ಕೆ.ಎಫ್.ಸಿ ನಿಯಮ 329/331ರಲ್ಲಿ ಸೂಚಿಸಿರುವಂತೆ ಕಾಮಗಾರಿಗಳಿಗೆ ಸಂಬಂಧಿಸಿದ ನಗದು ಪುಸ್ತಕವನ್ನು ನಿರ್ವಹಿಸಲು ಸೂಚಿಸಿದೆ. ಸದರಿ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಎಲ್ಲಾ ನಿಧಿಗಳು ಮತ್ತು ಯೋಜನೆಗಳಿಗೆ ಏಕೀಕೃತ ಸಾಫ್ಟ್‌ವೇರ್‌ನಲ್ಲಿ ಪಾವತಿಗಳ ಮಾಹಿತಿಯನ್ನು ನಮೂದು ಮಾಡಲಾಗುತ್ತಿದೆ.ಇದರಿಂದ ಯಾವ ನಿಧಿ/ಯೋಜನೆಯಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ?ಖರ್ಚು ಎಷ್ಟು ಮತ್ತು ಬಾಕಿ ಉಳಿಕೆ ಎಷ್ಟು? ಎಂಬುದನ್ನು ತಿಳಿದು ಬರುವುದಿಲ್ಲ. ಲೆಕ್ಕಪರಿಶೋಧನೆಯಲ್ಲಿ ಕೆಲವು ಬಿಲ್ಲುಗಳ ಮೊತ್ತವನ್ನು ಸಂಬಂಧಿಸಿದ ನಿಧಿಯಿಂದ ಇಲ್ಲದೆ ಬೇರೆ ನಿಧಿಯಿಂದ ಹಣವನ್ನು ಪಾವತಿಸದಿರುವುದು ಮತ್ತು ನಂತರ ಸದರಿ ನಿಧಿಗೆ ಹಣ ಭರಿಸಿರುವುದು ಲೆಕ್ಕ ತನಿಖೆಯಲ್ಲಿ ಕಂಡು ಬಂದಿದೆ.ಈ ವಿಷಯ ತಾತ್ಕಾಲಿಕ diversion of	ನಗದು ಪುಸ್ತಕ ಮತ್ತು ಲೆಕ್ಕ ಪತ್ರಗಳ ನಿರ್ವಹಣೆಯ ಬಗ್ಗೆ, ನೀಡಲಾದ ನಿರ್ದೇಶನದಂತೆ ಪ್ರಸ್ತುತ ಕ್ರಮ ಕೈಗೊಳ್ಳಲಾಗಿದ್ದು, 2014-15 ರಿಂದ 2016-17 ರ ಲೆಕ್ಕ ತನಿಖಾ ಸಂಧರ್ಭದಲ್ಲಿ ತೋರಿಸಲಾಗಿದೆ.

		fundsಎಂದು ಪರಿಗಣಿಸಬೇಕಾಗಿರುತ್ತದೆ. ಇಂತಹ ಪ್ರಕರಣಗಳನ್ನು ತಪ್ಪಿಸಲು ನಿಧಿವಾರು ಲೆಕ್ಕ ಪತ್ರಗಳನ್ನು (Fund based accounting system) ನಿರ್ವಹಿಸಲು ಹಾಗೂ ಪಾವತಿಗಳನ್ನು ಸದರಿ Fund based accounting system ನಲ್ಲಿನ ವೆಚ್ಚಗಳಿಗೆ ತಾಳೆ ಮಾಡಿ ಹಾಗೂ ಬ್ಯಾಂಕ್ ಪಾಸ್‌ಶೀಟ್‌ಗೆ ಲೆಕ್ಕ ಸಮನ್ವಯ ಮಾಡಿ ಲೆಕ್ಕ ಪರಿಶೋಧನೆಗೆ ಪೂರ್ಣ ಮಾಹಿತಿ ನೀಡಲು ಸೂಚಿಸಿದೆ.	
